ಪ್ರಚಾರ ಪುಸ್ತಕಮಾಲೆ 231

ಭಾರತದಲ್ಲಿ ಸಹಕಾರ

ಡಿ. ವೆಂಕಟರಾವ್

ಪ್ರಸಾರಾಂಗ ★ ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ—231

ಭಾರತದಲ್ಲಿ ಸಹಕಾರ

ಡಿ. ವೆಂಕಟರಾವ್, ಎಂ.ಎ.

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

೧೯೮೧

ಮೊದಲನೆಯ ಮುದ್ರಣ : ೧೯೮೧

೫,೦೦೦ ಪ್ರತಿಗಳು

ಬೆಲೆ : ೨೫ ಪೈಸೆ

ಪ್ರಕಾಶಕರು

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೧೨

ಮುದ್ರಕರು

ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ, ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವದ ಸಮಯದಲ್ಲಿಯೂ, ಮೊದಲನೆಯ 'ಕಾನ್ವೋಕೇಷನ್' ಸಮಾರಂಭದ ಕಾಲದಲ್ಲಿಯೂ, ವಿಶ್ವವಿದ್ಯಾ-ನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚಶಿಕ್ಷಣವನ್ನು ಪಡೆಯಲು ಅವಕಾಶ ಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿಸಿ, ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆ ಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ ಸಂಸ್ಕೃತಿ ಪ್ರಸಾರ ಕಾರ್ಯವನ್ನು ಬಹಳ ಸಮರ್ಪಕ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ, ಸುಲಭಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳುವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕ ವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲಸಿ, ಸಾಮಾನ್ಯ ಜನರಂತೆಯೇ ಇದ್ದು

ಕೊಂಡು ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯ ದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದವನ್ನು ಉಂಟುಮಾಡುತ್ತಾರೆ. ಈ ಉಪ ನ್ಯಾಸಗಳು ವಿಶ್ವವಿದ್ಯಾನಿಲಯದ ಮೆಟ್ಟಿಲನ್ನು ಹತ್ತಲು ಅವಕಾಶ ವಿಲ್ಲದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ; ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗ ಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ; ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವ ವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋ ದಯವನ್ನುಂಟುಮಾಡಿ, ದುಃಖಕ್ಕೆ ಮೂಲಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲಭಾವನೆ ಮೂಡು ವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಿಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಿಗೆಗಳನ್ನು ಕೊಂಡು, ಓದಿ ತಿಳಿವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಅಚ್ಚಿನ ಮನೆಯಿಂದ ಹೊರಬಿದ್ದ ಕೂಡಲೇ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೇ ಭೌತ ವಿಜ್ಞಾನ, ರಸಾಯನವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯ ವಿಜ್ಞಾನ, ಗಣಿತವಿಜ್ಞಾನ, ಸಮಾಜವಿಜ್ಞಾನ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ–ಮುಂತಾದ ವಿಷಯ

ಗಳನ್ನು ಕುರಿತ ಇನ್ನೂರ ಮೂವತ್ತು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗಿದೆ.

ಈಗ ಹೊರಬರುತ್ತಿರುವ ಶ್ರೀ ಡಿ. ವೆಂಕಟರಾವ್ ಅವರ 'ಭಾರತದಲ್ಲಿ ಸಹಕಾರ' ಎಂಬ ಕೃತಿ ಹೆಚ್ಚು ಜನಪ್ರಿಯವಾಗಲೆಂದು ಆಶಿಸುತ್ತೇನೆ.

ಕೆ. ಎಸ್. ಹೆಗ್ಡೆ
ಕುಲಪತಿ

ಮೈಸೂರು

ಅರಿಕೆ

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕ ಮಾಲೆಯ ಆಶ್ರಯದಲ್ಲಿ ಹಾಸನ ತಾಲ್ಲೂಕು ಗಂಡಸಿಯಲ್ಲಿ ಆಗಸ್ಟ್ 22, 1979ರಂದು ಏರ್ಪಡಿಸಲಾಗಿದ್ದ ಉಪನ್ಯಾಸ ಶಿಬಿರದಲ್ಲಿ 'ಭಾರತದಲ್ಲಿ ಸಹಕಾರ' ಎಂಬ ವಿಷಯದ ಬಗ್ಗೆ ಉಪನ್ಯಾಸ ಕೊಡುವ ಅವಕಾಶ ನನಗೆ ಲಭ್ಯವಾಯಿತು. ಅಂದು ನಾನು ನೀಡಿದ ಉಪನ್ಯಾಸದ ವಿವರಗಳು ಇಂದು ಕಿರುಹೊತ್ತಿಗೆಯ ರೂಪದಲ್ಲಿ ಪ್ರಕಟವಾಗುತ್ತಿದೆ.

ಪ್ರಸ್ತುತ ಕಿರುಹೊತ್ತಿಗೆಯಲ್ಲಿ ನಾನು ಸಹಕಾರ ಎಂದರೇನು,? ಸಹಕಾರ ತತ್ವಗಳು, ಭಾರತದಲ್ಲಿ ಸಹಕಾರ ರೂಪುಗೊಂಡ ಬಗೆ, ಪ್ರಾಚೀನ ಭಾರತದಲ್ಲಿ ಸಹಕಾರ, ಪಂಚವಾರ್ಷಿಕ ಯೋಜನೆಗಳಲ್ಲಿ ಸಹಕಾರದ ಪ್ರಗತಿ ಮುಂತಾದ ವಿಷಯಗಳನ್ನು ವಿವರಿಸಲು ಪ್ರಯತ್ನಿಸಿದ್ದೇನೆ. ಪುಸ್ತಕದ ಗಾತ್ರ ಕಡಿಮೆ ಇರಬೇಕೆಂಬ ನಿರ್ಬಂಧ ಇರುವುದರಿಂದಾಗಿ ಸಹಕಾರದ ಬಗ್ಗೆ ಸಮಗ್ರ ವಿವರಣೆ ಕೊಡಲು ಸಾಧ್ಯವಾಗಿಲ್ಲ. ಈ ಪುಸ್ತಕದಿಂದ ಓದುಗರು ಪ್ರಯೋಜನ ಪಡೆದಲ್ಲಿ ನನ್ನ ಪ್ರಯತ್ನ ಯಶಸ್ವಿಯಾದಂತೆ.

ಈ ಕಿರು ಹೊತ್ತಿಗೆಯ ಪ್ರಕಟಣೆಯಲ್ಲಿ ಆಸ್ಥೆ ವಹಿಸಿದ ವಿಶ್ವವಿದ್ಯಾನಿಲಯದ ಪ್ರಕಟನ ವಿಭಾಗದ ನಿರ್ದೇಶಕರಾದ ಡಾ॥ ಪ್ರಭುಶಂಕರ್‌ರವರಿಗೂ, ಸಂಪಾದನ ಸಹಾಯಕರಾದ ಶ್ರೀ ಡಿ. ಕೆ. ಈರೇಗೌಡರಿಗೂ ನನ್ನ ಧನ್ಯವಾದಗಳು. ಈ ಪುಸ್ತಕ ಬರೆಯಲು ನೆರವಾದ ನನ್ನ ಪತ್ನಿ ಚಂದ್ರಪ್ರಭ ಇವರಿಗೂ ಹಾಗೂ ಸಹಕರಿಸಿದ ಚಿ॥ ಶರ್ಮಿಳಾಗೂ ನನ್ನ ವಂದನೆಗಳು.

ಡಿ. ವೆಂಕಟರಾವ್

ವಿಷಯ ಸೂಚಿಕೆ

೧. ಸಹಕಾರ ಎಂದರೇನು ?

ಸಾಮಾನ್ಯ ಅರ್ಥದಲ್ಲಿ 'ಸಹಕಾರ' ಎಂದರೆ ಒಟ್ಟುಗೂಡಿ ಕೆಲಸ ಮಾಡುವುದು ಅಥವಾ ಒಟ್ಟುಗೂಡಿ ಜೀವನ ಮಾಡುವುದು ಎಂದರ್ಥ. ಇಂದಿನ ವಿಶ್ವದಲ್ಲಿ ಯಾರೊಬ್ಬರೂ ಸ್ವತಃ ಜೀವಿಸಲು ಮತ್ತು ಇನ್ನೊಬ್ಬರಿಂದ ದೂರವಿರಲು ಸಾಧ್ಯವಿಲ್ಲ. ನಾವು ಒಬ್ಬರೊಡನೊಬ್ಬರು ಸಹಕರಿಸದಿದ್ದರೆ, ಸುಭದ್ರ ರಾಷ್ಟ್ರವನ್ನು ಕಟ್ಟುವುದು ಅಸಾಧ್ಯ. ನಾವೆಲ್ಲರೂ ಒಟ್ಟಿಗೆ ಬಾಳಬೇಕು ಇಲ್ಲವೇ ಒಟ್ಟಿಗೆ ನಿಲ್ಲಬೇಕು. ಇದೇ ಸಹಕಾರಿ ಜೀವನದ ಸಂದೇಶ. ಹಿಂದೂ ಅವಿಭಕ್ತ ಕುಟುಂಬ ಇದಕ್ಕೆ ಒಂದು ಉತ್ತಮ ಉದಾಹರಣೆ. ಹೇಗೆಂದರೆ, ಇಲ್ಲಿ ಮನೆಯ ಯಜಮಾನ, ಯಜಮಾನಿ, ಅಣ್ಣ ತಮ್ಮ, ಅಕ್ಕತಂಗಿ, ಅತ್ತಿಗೆ ನಾದಿನಿ ಎಲ್ಲರೂ ಒಟ್ಟಿಗೆ ದುಡಿದು ಕುಟುಂಬ ಆರ್ಥಿಕ ದೃಷ್ಟಿಯಿಂದ ವೃದ್ಧಿಯಾಗಲು ನೆರವಾಗುತ್ತಾರೆ. ಆದರೆ ಆರ್ಥಿಕ ರಚನೆಯಲ್ಲಿ 'ಸಹಕಾರ' ಎಂಬ ಪದಕ್ಕೆ ವಿಶೇಷ ಅರ್ಥವಿದೆ. ಇಲ್ಲಿ 'ಸಹಕಾರ' ಎಂದರೆ ಒಂದು ವಿಶೇಷ ರೀತಿಯ ಜೀವನಕ್ರಮ. ಇಲ್ಲಿ 'ಸಹಕಾರ' ಆರ್ಥಿಕ ಪ್ರಜಾಪ್ರಭುತ್ವದ ಒಂದು ರೂಪವಾಗಿ ಪರಿಣಮಿಸಿದೆ. ಇದು ಒಂದು ಸ್ವಯಂ ಸಾಧಕ ಚಳುವಳಿ. ಈ ಚಳುವಳಿ ಈ ಶತಮಾನದ ಆರಂಭದಲ್ಲಿ ಜನರ ಚಳುವಳಿಯಾಗಿ ರೂಪುಗೊಂಡಿದೆ. ಸ್ವಯಂ ಪ್ರೇರಣೆ ಹಾಗೂ ಸ್ವಯಂ ಆಡಳಿತವು ಈ ಚಳುವಳಿಯ ಅಸ್ತಿತ್ವಕ್ಕು, ಬೆಳವಣಿಗೆಗೂ ಮೂಲಾಧಾರ. ಸಹಕಾರವು ಜೀವನದ ಒಂದು ಹೆದ್ದಾರಿಯಾಗಿದ್ದು, ಭ್ರಾತೃತ್ವದಿಂದ ಮಾನವ ಜನಾಂಗಕ್ಕೆ ವೈಯಕ್ತಿಕವಾಗಿ ಸಲ್ಲಿಸುವ ಸೇವೆಯಾಗಿದೆ. ಮಹಾತ್ಮ ಗಾಂಧಿಯವರ ಪ್ರಕಾರ "ಸಹಕಾರ ಎಂದರೆ ಎಲ್ಲರ ಹಿತಕ್ಕಾಗಿ,

ಎಲ್ಲರ ಸಮ್ಮತಿಯಿಂದ, ಎಲ್ಲರಿಂದ ಕೂಡಿದ ಒಂದು ಸಂಸ್ಥೆವಸ್ಥೆ." "ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು" ಎಂದು ಅವರು ಹೇಳಿದರು. ಗಾಂಧೀಜಿಯವರ ಅಭಿಪ್ರಾಯದಲ್ಲಿ ಸಹಕಾರಿ ಚಳುವಳಿಯು ಸತ್ಯ, ಅಹಿಂಸೆ ಮತ್ತು ಸ್ವಸಹಾಯದ ವರ್ಗಾತೀತ ಸಮಾಜ ಸ್ಥಾಪನೆಗೆ ದಾರಿ. ಸಹಕಾರದ ಮುಖ್ಯ ಗುರಿ ಬಂಡವಾಳಶಾಹಿ ಪದ್ಧತಿಯಲ್ಲಿ ಸಾಮಾನ್ಯವಾಗಿ ಕಂಡುಬರುವ ಶೋಷಣೆಯನ್ನು ತಡೆಗಟ್ಟುವುದು ಮತ್ತು ಜನರು ತಮ್ಮ ತಮ್ಮ ಉಳಿತಾಯ, ಶ್ರಮ ಹಾಗೂ ಸಾಧನ ಸಾಮಗ್ರಿಗಳನ್ನು ಒಟ್ಟುಗೂಡಿಸಿ ಆರ್ಥಿಕ ಉನ್ನತಿಯನ್ನು ಸಾಧಿಸುವುದು.

ರಾಷ್ಟ್ರೀಯ ಆರ್ಥಿಕ ಪ್ರಗತಿ ಮತ್ತು ಸಮಾಜವಾದಿ ಸಮಾಜ ರಚನೆಗೆ ಸಹಕಾರಿ ಚಳುವಳಿಯು ಒಂದು ಭರವಸೆಯ ಸೂತ್ರ. ರಾಷ್ಟ್ರದ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವುದಷ್ಟೇ ಅಲ್ಲದೆ, ಧಾರ್ಮಿಕ ಮತ್ತು ನೈತಿಕ ಮಟ್ಟದಲ್ಲೂ ಗುರಿಮುಟ್ಟುವುದರಲ್ಲಿ ಸಹಕಾರಿ ಚಳುವಳಿ ಸಾಧಕವಾಗಿದೆ. ನಿಸ್ಪೃಹತೆ, ಸತ್ಯ ಸಂಧತೆ, ತ್ಯಾಗ, ಸೌಹಾರ್ದತೆ, ನೈತಿಕ ಮಟ್ಟ, ಸ್ವಸಹಾಯ ಹಾಗೂ ಪರಸ್ಪರ ಸಹಾಯ ಇವುಗಳ ಆಡಿಗಲ್ಲಮೇಲೆ ಸಹಕಾರಿ ಚಳುವಳಿ ನಿಂತಿದೆ. ರಾಷ್ಟ್ರೀಯ ಭಾವೈಕ್ಯತೆಯನ್ನು ಉಳಿಸಿ, ರಕ್ಷಿಸಿ, ಊರ್ಜಿತಗೊಳಿಸುವಲ್ಲಿ ಸಹಕಾರಿ ಚಳುವಳಿಯು ಸಫಲ ಸಾಧನವಾಗಬಲ್ಲದು. ಏಕೆಂದರೆ ರಾಷ್ಟ್ರೀಯ ಐಕ್ಯತೆ ಸಾಧಿಸುವಲ್ಲಿ ಸಹಕಾರ ಚಳುವಳಿಯಲ್ಲಿ ಕೆಲವೊಂದು ವಿಶಿಷ್ಟಗುಣಗಳಿವೆ. ಸರ್ವರಿಗೂ ಸಮಾನಾವಕಾಶ ಮತ್ತು ಸಮಾನಾಧಿಕಾರಗಳು ಸಹಕಾರದ ವೈಶಿಷ್ಟ್ಯತೆ. ಸಹಕಾರಿ ಧ್ವಜವು 'ಭಿನ್ನತೆಯಲ್ಲಿ ಏಕತೆ'ಯ ತತ್ವವನ್ನು ಸಾರುವ ಕಾಮನಬಿಲ್ಲಿನ ಏಳು ಬಣ್ಣಗಳುಳ್ಳದ್ದು. ಕಾಮನಬಿಲ್ಲಿನ ಸಪ್ತವರ್ಣಗಳ ಈ ಧ್ವಜದ ಹಿನ್ನೆಲೆಯಲ್ಲಿ ಜಾತಿ,

ಮತ, ವರ್ಣ, ಜನಾಂಗಗಳ ಯಾವ ಭೇದವೂ ಇಲ್ಲ. ಸಹಕಾರ ಇವೆಲ್ಲವನ್ನೂ ಮೆಟ್ಟಿನಿಂತ ಒಂದು ಸುವರ್ಣ ಮಾಧ್ಯಮ. ಅದು ಜಾತ್ಯಾತೀತವಾದುದರಿಂದ ಎಲ್ಲಾ ಜಾತಿ, ಮತ ಮತ್ತು ಧರ್ಮಗಳ ಜನತೆಗೂ ಹೃತ್ಪೂರ್ವಕ ಸ್ವಾಗತ ನೀಡುತ್ತದೆ. ಅದು ವ್ಯಕ್ತಿಗಳನ್ನು ಗೌರವಿಸುತ್ತದೆ. ಮೂಲತಃ ಅದು ಪ್ರಜಾಸತ್ತಾತ್ಮಕ. ಸಹಕಾರಿ ಚಳುವಳಿಯು ಆರ್ಥಿಕ ಉತ್ಪಾದನೆಗೆ ಪ್ರಯತ್ನಿಸುವುದರೊಂದಿಗೆ ಹೆಚ್ಚಿನ ಆರ್ಥಿಕ ತೃಪ್ತಿ ಮತ್ತು ಸುಖ ಜೀವನ, ಆರ್ಥಿಕ ಶಕ್ತಿಯ ಸಮಾನ ಹಂಚಿಕೆ ಇವುಗಳಿಗೆ ನೆರವಾಗುತ್ತದೆ. ಅದು ವ್ಯಕ್ತಿಗಳನ್ನು ಮೇಲೆತ್ತಿ ಸಮಾಜವನ್ನು ಆರ್ಥಿಕವಾಗಿ, ನೈತಿಕವಾಗಿ ಹಾಗೂ ಸಾಮಾಜಿಕವಾಗಿ ಉನ್ನತಿಗೇರಿಸಿ, ಪ್ರಜಾಸತ್ತಾತ್ಮಕ ಹಾದಿಯಲ್ಲಿ ಮುನ್ನಡೆಯಲು ಅವರನ್ನು ಯೋಗ್ಯರನ್ನಾಗಿ ಮಾಡುತ್ತದೆ. ವ್ಯಕ್ತಿಯ ಶಕ್ತಿ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಸಹಕಾರದಿಂದ ದುರ್ಬಲರು ಸಬಲರಾಗಬಲ್ಲರು. ಸಹಕಾರದಲ್ಲಿ ಮಾಲಿಕ ವರ್ಗದಿಂದ ಶೋಷಣೆಯಿಲ್ಲ, ಅಧಿಕಾರ ವರ್ಗದಿಂದ ದರ್ಪವಿಲ್ಲ. ಸಹಕಾರ ಸಂಪನ್ಮೂಲಗಳನ್ನು ಕ್ರೋಢೀಕರಿಸುತ್ತದೆ. ಪರಸ್ಪರ ಸಹಾಯದ ಮೂಲಕ ಸ್ವಸಹಾಯಕ್ಕೆ ಉತ್ತೇಜನ ನೀಡುತ್ತವೆ. ಇಡೀ ರಾಷ್ಟ್ರದ ಜನತೆಯನ್ನು ಒಂದುಗೂಡಿಸುವ ಶಕ್ತಿ ಸಾಮರ್ಥ್ಯಗಳು ಅದಕ್ಕಿದೆ. ತನ್ನ ಧ್ಯೇಯ ಧೋರಣೆಗಳಿಂದ ಸಹಕಾರಿ ಚಳುವಳಿಯು ರಾಷ್ಟ್ರೀಯ ಐಕ್ಯತೆ ಮತ್ತು ಭಾವೈಕ್ಯತೆಗಳ ಬೀಜ ಬಿತ್ತಲು ಫಲವತ್ತಾದ ಹೊಲವನ್ನು ಸಿದ್ಧಗೊಳಿಸುವುದರೊಂದಿಗೆ ಪುಷ್ಟಿಯಾಗಿ ಬೆಳೆಯಬಲ್ಲ ಭರವಸೆಯನ್ನೂ ನೀಡುತ್ತದೆ. ಸಹಕಾರಿ ಚಳುವಳಿಯು ಲಾಭ ಬಡುಕತನದಿಂದ ಸಮಾಜವನ್ನು, ಶೋಷಣೆಯಿಂದ ವ್ಯಕ್ತಿಯನ್ನು ಬಿಡುಗಡೆ ಮಾಡಬಲ್ಲದು. ಗ್ರಾಮೀಣ ಜೀವನದ ಪುನರುದ್ಧಾರ, ರಾಷ್ಟ್ರೀಯ ಆರ್ಥಿಕ ಪ್ರಗತಿ,

ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳ ಕಾರ್ಯ—ಇವುಗಳನ್ನು ಕೈಗೊಳ್ಳುವಲ್ಲಿ ಸಹಕಾರಿ ಚಳುವಳಿಯು ಸಹಜ ಮೂಲ ಮತ್ತು ಅಧಿಕೃತ ವ್ಯವಸ್ಥೆಯಾಗಿದೆ. ಒಬ್ಬ ವ್ಯಕ್ತಿ ಒಂಟಿಯಾಗಿ ಮಾಡಲಾಗದ ಕೆಲಸವನ್ನು ಸಹಕಾರಿ ಚಳುವಳಿ ಸಾಧಿಸಬಲ್ಲದು. ಹಲವಾರು ಸದಸ್ಯರ ಹನಿ ಉಳಿತಾಯದ ಹಣವನ್ನು ಕಲೆಹಾಕಿ ಆರ್ಥಿಕವಾಗಿ ಒಂದು ಮಹಾಶಕ್ತಿಯನ್ನೇ ನಿರ್ಮಿಸಬಲ್ಲದು. ಕೇವಲ ಆರ್ಥಿಕ ಸುಭದ್ರತೆಯನ್ನು ಸಾಧಿಸುವುದೊಂದೇ ಅದರ ಕೆಲಸವಲ್ಲ. ಜನತೆಯಲ್ಲಿ ಮಿತವ್ಯಯದ ಭಾವನೆ ಮೂಡುವಂತೆ ಮಾಡಿ, ಅವರನ್ನು ಆರ್ಥಿಕವಾಗಿ ಸದಸ್ಯರನ್ನಾಗಿಸುವುದರೊಂದಿಗೆ ಉತ್ತಮ ನಾಗರಿಕರನ್ನಾಗಿ ಪರಿವರ್ತಿಸಲು ನೆರವಾಗುತ್ತದೆ. ಆರ್ಥಿಕ ಪ್ರಾಬಲ್ಯ ಕೆಲವರ ಕೈಯಲ್ಲಿ ಮಾತ್ರವೇ ಉಳಿಯದೆ ಬಹುಸಂಖ್ಯಾತರ ಕಲ್ಯಾಣಸಾಧನೆಗೆ ಸಹಾಯಕವಾಗಲು ಸಹಕಾರ ಚಳುವಳಿ ಸಮರ್ಥ ಸಾಧಕವಾಗಿದೆ. ಸಹಕಾರದ ಮುಖ್ಯ ಉದ್ದೇಶ ಒಬ್ಬಂಟಿಗ ಹಾಗೂ ಅಶಕ್ತ ವ್ಯಕ್ತಿಗಳು ಒಟ್ಟುಗೂಡುವುದು ಮತ್ತು ಒಟ್ಟಿಗೆ ಸಹಕರಿಸಿ ಕಾರ್ಯಗಳನ್ನು ಕೈಗೊಂಡು ಸಹಕಾರಿ ಚಳುವಳಿಯಿಂದ ದೊರಕುವ ಎಲ್ಲಾ ಬಗೆಯ ಸೌಕರ್ಯಗಳನ್ನೂ ಪಡೆದುಕೊಳ್ಳುವುದು. ಇದರಿಂದ ಆರ್ಥಿಕ ಹಾಗೂ ನೈತಿಕ ಶಕ್ತಿಗಳ ಸಂವರ್ಧನೆಯಾಗುತ್ತದೆ.

ಬಂಡವಾಳಶಾಹಿ ಪದ್ಧತಿಯಲ್ಲಿ ಶ್ರೀಮಂತರ ಪ್ರಭಾವ ಅಧಿಕ. ಆಸ್ತಿಯಬಲ ಇಲ್ಲಿ ಹೆಚ್ಚಿನ ವರ್ಚಸ್ಸು ಹೊಂದಿರುತ್ತದೆ. ಮನುಷ್ಯನಿಂದ ಮನುಷ್ಯನ ಸುಲಿಗೆ, ಸ್ವಾರ್ಥಸಾಧನೆಗಾಗಿ ದುಡಿಮೆದಾರರ ಶ್ರಮಶಕ್ತಿಯ ಶೋಷಣೆ ಇಲ್ಲಿ ಸಾಮಾನ್ಯ. ಅಧಿಕ ಉತ್ಪಾದನೆಯ ಮೂಲಬಿಂದುವಾಗಿರುವ ಕಾರ್ಮಿಕರು ಈ ಪದ್ಧತಿಯಲ್ಲಿ ಕಡಿಮೆ ಕೂಲಿಯನ್ನು ಸ್ವೀಕರಿಸಬೇಕಾಗುತ್ತದೆ.

ಆದರೆ ಈ ಪದ್ಧತಿಯಲ್ಲಿ ವ್ಯಕ್ತಿ ಸ್ವಾತಂತ್ರ್ಯ ಉಂಟು. ಯಾವುದೇ ಆರ್ಥಿಕ ಚಟುವಟಿಕೆಯನ್ನು ಕೈಗೊಂಡು ಮನುಷ್ಯ ತನ್ನ ಆರ್ಥಿಕ ಶ್ರೇಯಸ್ಸನ್ನು ಇಲ್ಲಿ ಸಾಧಿಸಿಕೊಳ್ಳಬಹುದು. ದಟ್ಟದರಿದ್ರನೂ ಈ ಪದ್ಧತಿಯಲ್ಲಿ ತನ್ನ ಕರ್ತೃತ್ವಶಕ್ತಿಯನ್ನು ಬಳಸಿಕೊಂಡು ಶ್ರೀಮಂತನಾಗಬಹುದು. ಆದಾಗ್ಯೂ ಇಲ್ಲಿ ಆರ್ಥಿಕ ಅಸಮತೆ ಕಂಡುಬರುವುದರಿಂದ ಶ್ರೀಮಂತರು ಮತ್ತು ಕಾರ್ಮಿಕರ ನಡುವೆ ಕಲಹಗಳು ಹೆಚ್ಚಾಗಿರುತ್ತವೆ.

ಸಮತಾವಾದ ಅಥವಾ ಕಮ್ಯುನಿಸಂ ಪದ್ಧತಿಯು ಬಂಡವಾಳ ಶಾಹಿ ಪದ್ಧತಿಗೆ ವಿರುದ್ಧವಾಗಿದೆ. ಈ ಪದ್ಧತಿಯನ್ನು ರಷ್ಯಾ, ಚೈನಾ ಮತ್ತು ಪೂರ್ವ ಐರೋಪ್ಯ ರಾಷ್ಟ್ರಗಳಲ್ಲಿ ಕಾಣಬಹುದಾಗಿದೆ. ಈ ಪದ್ಧತಿಯಲ್ಲಿ ಆಸ್ತಿ ಮತ್ತು ಸಾಧನ ಸಾಮಗ್ರಿಗಳು ಯಾವೊಬ್ಬನ ಸೊತ್ತೂ ಅಲ್ಲ. ಅದು ಇಡೀ ಸಮಾಜಕ್ಕೆ ಸೇರಿದುದು. ಸಮಾಜದ ನಾಗರಿಕರೆಲ್ಲರೂ ಅದರ ಉಪಭೋಗದ ಹಕ್ಕನ್ನು ಪಡೆದಿರುತ್ತಾರೆ. ಇಲ್ಲಿ ಆಹಾರ, ಬಟ್ಟೆ, ವಸತಿಗಳಿಗೆ ಯಾವ ಕೊರತೆಯೂ ಇಲ್ಲ. ಆದರೆ ಈ ಪದ್ಧತಿಯಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಎಡೆ ಇಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಆಳುವ ಪಕ್ಷಕ್ಕೆ ವಿಧೇಯನಾಗಿರಲೇಬೇಕು. ಪಕ್ಷಕ್ಕೆ ಎದುರಾಗಿ ಯಾವ ವ್ಯಕ್ತಿಯೂ ತನ್ನ ಅಭಿಪ್ರಾಯಗಳನ್ನು ಮಂಡಿಸುವಂತಿಲ್ಲ. ಒಂದು ವೇಳೆ ಅವನು ಹಾಗೆ ಮಾಡಿದ್ದಾದರೆ ಕಠಿಣ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಇಲ್ಲಿ ವ್ಯಕ್ತಿ ಎಂದರೆ ಆಳುವ ಪಕ್ಷದ ಗುಲಾಮನಿದ್ದಂತೆ.

ಸಹಕಾರ ಪದ್ಧತಿಯು ಇಂದು ಸರ್ವಸಮ್ಮತವಾಗಿದೆ. ಏಕೆಂದರೆ ಇದು ಒಂದು ಕಡೆ ಬಂಡವಾಳ ಪದ್ಧತಿ ಇನ್ನೊಂದು ಕಡೆ ಸಮಾಜ ಪದ್ಧತಿಯ ಪ್ರಮುಖ ದೋಷಗಳನ್ನು ತೊಡೆದು

ಹಾಕುತ್ತದೆ. ಜೊತೆಗೆ ಸಹಕಾರದ ಚೌಕಟ್ಟಿನಲ್ಲಿ ಬರುವ ಎಲ್ಲಾ ವ್ಯಕ್ತಿಗಳಿಗೂ ಸಮಾನವಾದ ಹಕ್ಕು ಮತ್ತು ಸೌಲಭ್ಯಗಳನ್ನು ಒದಗಿಸಿಕೊಡುತ್ತದೆ. ಸಹಕಾರ ಪದ್ಧತಿಯು ಬಂಡವಾಳವಾದ ಅಥವಾ ಸಮತಾವಾದ ಈ ಎರಡರ ಕುಂದುಕೊರತೆಗಳನ್ನು ನಿವಾರಿಸಿ, ನಾಗರಿಕರಿಗೆ ವ್ಯಕ್ತಿ ಹಾಗೂ ಆರ್ಥಿಕ ಸ್ವಾತಂತ್ರ್ಯ ಸಾಧನೆಗಾಗಿ ಅನುಕೂಲ ವಾತಾವರಣ ಕಲ್ಪಿಸಿಕೊಡುವ ಒಂದು ಶ್ರೇಷ್ಠ ಪದ್ಧತಿ. ಈ ಪದ್ಧತಿಯಲ್ಲಿ ಬಂಡವಾಳವಾದದಲ್ಲಿರುವ ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಮತಾವಾದದಲ್ಲಿರುವ ಆರ್ಥಿಕ ಸ್ವಾತಂತ್ರ್ಯಗಳ ಸಮ್ಮಿಲನವನ್ನು ಕಾಣಬಹುದು. ಬಂಡವಾಳಶಾಹಿಯ ಉತ್ಪಾದನಾ ಕಾರ್ಯ ಶಕ್ತಿಯನ್ನು ಮತ್ತು ಸಮಾಜವಾದದ ಸಮಾನತೆಯ ಸದ್ಗುಣವನ್ನು ಸಹಕಾರಿ ಪದ್ಧತಿ ತನ್ನಲ್ಲಿ ಅಳವಡಿಸಿಕೊಂಡು ಆ ಎರಡು ಮಾರ್ಗಗಳಲ್ಲಿರುವ ಕೆಟ್ಟಗುಣಗಳಿಂದ ಮಾರುದೂರ ನಿಂತಿದೆ. ಸಹಕಾರದ ನೆರವಿನಿಂದ ಮಾನವ ತನ್ನ ಬದುಕಿನ ರಂಗದಲ್ಲಿ ಏನನ್ನು ಬೇಕಾದರೂ ಸಾಧಿಸಬಲ್ಲನು. ಆರ್ಥಿಕ ಸಮಸ್ಯೆಗಳ ನಿವಾರಣೆಗೆ ಸಹಕಾರ ಒಂದು ರಾಮಬಾಣವಿದ್ದಂತೆ. ಸಹಕಾರದಿಂದಲೇ ಯಶಸ್ಸು, ಸಹಕಾರದಿಂದಲೇ ವಿಜಯ, ಸಹಕಾರದಿಂದಲೇ ಸುಖಶಾಂತಿಗಳು ಸಿಗಲು ಸಾಧ್ಯ. ಸಹಕಾರದಿಂದ ಮಾತ್ರ ಗಾಂಧೀಜಿ ಕಂಡ ರಾಮರಾಜ್ಯದ ಕನಸು ನನಸಾಗಲು ಸಾಧ್ಯ. ಪ್ರತಿಯೊಬ್ಬರೂ ನಿಶ್ಚಿಂತೆಯಿಂದ ನೆಮ್ಮದಿಯಿಂದ ಬಾಳಬೇಕು. ಪ್ರತಿಯೊಬ್ಬರ ಕಲ್ಯಾಣವೂ ಆಗಬೇಕು ಎನ್ನುವುದಾದರೆ ಸಹಕಾರ ನಮ್ಮ ಜೀವನ ಮಾರ್ಗವಾಗಬೇಕು. ‘ಸಹಕಾರವೇ ಜೀವನ, ಜೀವನವೇ ಸಹಕಾರ’ ಎಂಬ ಮೂಲ ಮಂತ್ರವನ್ನು ಪ್ರತಿಯೊಬ್ಬರೂ ಅನುಷ್ಠಾನಕ್ಕೆ ತರಬೇಕು.

೨. ಸಹಕಾರ ತತ್ವಗಳು

ಸಹಕಾರ ಕೆಲವು ಮೂಲಭೂತ ತತ್ವಗಳನ್ನೊಳಗೊಂಡು ರೂಪಿತವಾಗಿರುವ ಒಂದು ಸಂಘಟನೆ. ಈ ಮೂಲಭೂತ ತತ್ವಗಳು ಕೆಳಗಿನಂತಿವೆ.

ಸಹಕಾರವು ಸ್ವಯಂ ಪ್ರೇರಿತ ಸಂಘಟನೆ: ಸಹಕಾರ ನಿಜವಾಗಿಯೂ ಅಭಿವೃದ್ಧಿಯಾಗಬೇಕಾದರೆ ಸರಕಾರದ ಒತ್ತಡದಿಂದಾಗದೆ ಜನರಿಂದ ಉದ್ಭವಗೊಂಡು ಕಾರ್ಯರೂಪಕ್ಕಿಳಿಯಬೇಕು. ಪ್ರಜಾಸತ್ತಾತ್ಮಕ ತತ್ವದ ಪ್ರಕಾರ ಒತ್ತಾಯದಿಂದ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಅವಕಾಶವಿಲ್ಲದಂತಾಗುತ್ತದೆ. ಆದ್ದರಿಂದ ಸಹಕಾರದಲ್ಲಿ ಒತ್ತಾಯಕ್ಕೆ ಎಡೆಯಿಲ್ಲ. ಜನರು ತಮ್ಮ ತಮ್ಮ ಸಂಪನ್ಮೂಲಗಳನ್ನು ಐಚ್ಛಿಕವಾಗಿಯೇ ಒಟ್ಟುಗೂಡಿಸಿ, ಕಾರ್ಯ ಚಟುವಟಿಕೆ ಕೈಗೊಂಡು ತಮ್ಮ ಆರ್ಥಿಕೋನ್ನತಿ ಸಾಧಿಸಿಕೊಳ್ಳುವಂತೆ ಸಹಕಾರ ಅವರನ್ನು ಪ್ರೋತ್ಸಾಹಿಸುತ್ತದೆ.

ಪ್ರಜಾಸತ್ತಾತ್ಮಕ ಆಡಳಿತ : ಸಹಕಾರ ಸಮಾನತೆಯ ತತ್ವದ ಮೇಲೆ ಆಧಾರಗೊಂಡಿದೆ. ಇಲ್ಲಿ ಎಲ್ಲರಿಗೂ ಸಮಾನ ಮತಾಧಿಕಾರವುಂಟು. ಅಂದರೆ, ಸಹಕಾರ ಸಂಸ್ಥೆಗಳು ಪ್ರಜಾಸತ್ತಾತ್ಮಕ ಆಡಳಿತ ಹೊಂದಿರುವುದರಿಂದ ಒಬ್ಬ ಸದಸ್ಯ ಎಷ್ಟೇ ಶೇರುಗಳನ್ನು ಪಡೆದಿದ್ದರೂ ಅವನಿಗಿರುವುದು ಒಂದೇ ಮತ. ಇದರಿಂದ ಅಧಿಕಾರವು ಕೆಲವೇ ಜನರ ಬಳಿ ಕೇಂದ್ರೀಕೃತವಾಗುವುದು ತಪ್ಪುತ್ತದೆ. ಸಂಸ್ಥೆಯ ಆಡಳಿತಾನುಕೂಲತೆಗಾಗಿ ವರ್ಷಕ್ಕೆ ಒಮ್ಮೆ ಅಥವಾ ಎರಡು ಬಾರಿ ಸೇರಬಹುದಾದ ಸರ್ವಸದಸ್ಯರ ಸಭೆಯು ಕಾರ್ಯಕಾರಿ ಸಮಿತಿಯನ್ನು ಆಯ್ಕೆಮಾಡುತ್ತದೆ.

ಪೇರುದಾರರು ನಿರ್ದೇಶಕರ ಮಂಡಲಿಯನ್ನು (Board of Directors) ಚುನಾಯಿಸುತ್ತಾರೆ. ಕಾರ್ಯಕಾರಿಸಮಿತಿಯ ಸದಸ್ಯರು, ನಿರ್ದೇಶಕರು ಸಂಸ್ಥೆಯ ಆಡಳಿತವನ್ನು ನೋಡಿಕೊಳ್ಳು ತ್ತಾರೆ. ಇವರೆಲ್ಲರೂ ಸರ್ವಸದಸ್ಯರ ಸಭೆಗೆ ಹೊಣೆಗಾರರಾಗಿರು ತ್ತಾರೆ.

ಮುಕ್ತ ಸದಸ್ಯತ್ವ : ಸಹಕಾರದ ಮತ್ತೊಂದು ಲಕ್ಷಣವೆಂದರೆ ಮುಕ್ತದ್ವಾರ ಪದ್ಧತಿ. ಸಹಕಾರದ ಬಾಗಿಲು ಎಲ್ಲಾ ಬಗೆಯ ವ್ಯಕ್ತಿಗಳಿಗೂ ಹಾರ್ದಿಕ ಸ್ವಾಗತ ನೀಡುತ್ತದೆ. ಜಾತಿ, ಮತ ಅಥವಾ ಲಿಂಗಗಳಿಗೆ ಸಹಕಾರ ಹೆಚ್ಚಿನ ಗಮನ ಕೊಡುವುದಿಲ್ಲ. ಸಹಕಾರಿ ಸಂಸ್ಥೆಗಳಿಗೆ ಯಾವ ವ್ಯಕ್ತಿ ಬೇಕಾದರೂ ಬಂದು ಸದಸ್ಯತ್ವವನ್ನು ಸ್ವೀಕರಿಸಬಹುದು.

ಸೇವೆ: ಖಾಸಗಿ ವ್ಯವಹಾರ ಪದ್ಧತಿಗಳು ಲಾಭವನ್ನೇ ಮುಖ್ಯ ಗುರಿಯಾಗಿಟ್ಟುಕೊಂಡಿರುತ್ತವೆ. ಆದರೆ ಸಹಕಾರದಲ್ಲಿ ಲಾಭಕ್ಕೆ ಹೆಚ್ಚಿನ ಮಹತ್ವ ಇರುವುದಿಲ್ಲ. ಸಹಕಾರಿ ಪದ್ಧತಿಯಲ್ಲಿ ಖಾಸಗಿ ಆಸ್ತಿ ಮತ್ತು ಖಾಸಗಿ ಲಾಭದ ದೃಷ್ಟಿಗಳಿಗೆ ಎಡೆಯಿಲ್ಲ. ಸೇವೆಯೇ ಸಹಕಾರದ ಹೆಗ್ಗುರಿ. ಸಹಕಾರ ಸಂಸ್ಥೆಗಳು ಲಾಭೋ ದ್ದೇಶವಿಲ್ಲದೆ ಸೇವೆ ಸಲ್ಲಿಸುತ್ತವೆ. ಇವುಗಳನ್ನು ಸ್ಥಾಪಿಸಿರು ವುದರ ಮುಖ್ಯ ಉದ್ದೇಶ ಹಳ್ಳಿಯ ಸಾಹುಕಾರರಿಗೆ ಹೆಚ್ಚು ಬಡ್ಡಿ ತೆತ್ತು ದಿನೇ ದಿನೇ ಬಡವರಾಗುತ್ತಿರುವ ರೈತರನ್ನು ಸಾಹು ಕಾರರ ಕಪಿಮುಷ್ಟಿಯಿಂದ ಬಿಡಿಸಿ, ಅವರಿಗೆ ಕಡಿಮೆ ಬಡ್ಡಿಗೆ ಸಾಲವನ್ನು ಪೂರೈಸುವುದು, ಆದರೆ ಕೇವಲ ಸಾಲ ನೀಡಿಕೆಯೇ ಈ ಸಂಸ್ಥೆಗಳ ಮುಖ್ಯ ಗುರಿಯಲ್ಲ. ತಾವು ಕೈಗೊಂಡ ಕಾರ್ಯ ಚಟುವಟಿಕೆಗಳಿಂದ ಪಡೆದ ಲಾಭದ ಹೆಚ್ಚಿನ ಭಾಗವನ್ನು ಸಹ

ಕಾರ ಸಂಸ್ಥೆಗಳು ವಿವಿಧ ನಿಧಿಗಳಿಗೆ ಮೀಸಲಾಗಿಡುತ್ತವೆ. ಇದರಿಂದ ಆ ಹಣವನ್ನು ಸಂಸ್ಥೆಗಳ ಅಭಿವೃದ್ಧಿಗಾಗಿ, ಸದಸ್ಯರಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಬಳಸಲು ಸಾಧ್ಯವಾಗುತ್ತದೆ. ಸಹಕಾರ ಸಂಸ್ಥೆಗಳ ಮುಖ್ಯ ಧ್ಯೇಯ ಜನಸಾಮಾನ್ಯರ ಹಿತಸಾಧಿಸುವುದು. ಇವುಗಳ ಮೂಲೋದ್ದೇಶ ಸೇವೆಯೇ ಹೊರತು, ಲಾಭಗಳಿಕೆಯಲ್ಲ.

ಪರಸ್ಪರ ಸಹಾಯ : "ಒಬ್ಬ ಎಲ್ಲರಿಗಾಗಿ ಮತ್ತು ಎಲ್ಲರೂ ಒಬ್ಬನಿಗಾಗಿ" ಎಂಬುದು ಸಹಕಾರದ ಮೂಲಮಂತ್ರವಾಗಿದೆ. ಸಹಕಾರವು ಕೇವಲ ಕೆಲವು ವ್ಯಕ್ತಿಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ರೂಪಿತಗೊಂಡಿಲ್ಲ. ಸರ್ವರ ಹಿತ-ಕ್ಷೇಮಗಳನ್ನು ಸಾಧಿಸಬೇಕೆಂಬುದೇ ಸಹಕಾರದ ಇಚ್ಛೆ. ಸಹಕಾರಿ ಸಂಸ್ಥೆಗಳಿಂದ ಪ್ರತಿಯೊಬ್ಬರೂ ಉಪಯೋಗ ಹೊಂದಬೇಕೆನ್ನುವುದೇ ಸಹಕಾರಿತಜ್ಞರ ಅಭಿಪ್ರಾಯ. ಒಬ್ಬ ವ್ಯಕ್ತಿಯು ನಿಶ್ಯಕ್ತನಾಗಿರಬಹುದು ಅಥವಾ ಅಧಿಕಾರಹೀನನಾಗಿರಬಹುದು. ಆದರೆ ಈ ಸಂಸ್ಥೆಗಳಲ್ಲಿ ಎಲ್ಲರೂ ಒಟ್ಟಾಗಿ ದುಡಿಯುವುದರಿಂದ ಹಾಗೂ ಎಲ್ಲಾ ಸಂಪತ್ತನ್ನೂ ಒಟ್ಟುಗೂಡಿಸುವುದರಿಂದ ಬೇಕಾದ್ದನ್ನು ಸುಲಭವಾಗಿ ಸಾಧಿಸಬಹುದು. ಈ ಮೂಲಕ ಪರಸ್ಪರ ಹಿತ-ಸ್ವಹಿತಗಳೆರಡನ್ನೂ ಸಾಧಿಸಿದಂತಾಗುತ್ತದೆ. ಸಾಮೂಹಿಕ ಶ್ರಮಕ್ಕೆ ದೊರೆಯುವ ಯೋಗ್ಯಪ್ರತಿಫಲಕ್ಕೆ ಎಲ್ಲರೂ ಭಾಗಿಗಳಾಗುತ್ತಾರೆ. ಈ ರೀತಿ ಪರಸ್ಪರ ಸಹಾಯ, ಐಕಮತ್ಯ ಹಾಗೂ ಸಹೋದರತ್ವವು ಸಹಕಾರದ ಮುಖ್ಯ ಅಡಿಗಲ್ಲಾಗಿದೆ.

ಸಮಾನತೆ: ಇದು ಸಹಕಾರದ ಅತಿಮುಖ್ಯ ತತ್ವವಾಗಿದೆ. ಸಹಕಾರಕ್ಕೆ ಶ್ರೀಮಂತರು ಬಡವರು ಎಂಬ ಭಾವನೆಯಿಲ್ಲ. ಅದು

ಸರ್ವರನ್ನೂ ಸಮಾನತೆಯಿಂದ ಕಾಣುತ್ತದೆ. ಇಲ್ಲಿ ಶ್ರೀಮಂತಿಕೆಯ ಹಿರಿತನವಿಲ್ಲ, ಬಡತನದ ಕಿರಿತನವಿಲ್ಲ. ಸಹಕಾರಿ ಸಂಸ್ಥೆಗಳಿಂದ ದೊರೆಯುವ ಸೇವೆಯನ್ನು ಯಾರು ಬೇಕಾದರೂ ಪಡೆಯಬಹುದು. ಈ ಸಂಸ್ಥೆಗಳ ಸದಸ್ಯರ ನಡವಳಿಕೆ ಹಾಗೂ ಅವರು ತೆಗೆದು ಕೊಳ್ಳುವ ತೀರ್ಮಾನಗಳು ಸರಿಯಾಗಿರಬೇಕು. ಸಂಸ್ಥೆಯು ಹೆಚ್ಚು ಲಾಭ ಪಡೆದಲ್ಲಿ ಅದನ್ನು ಎಲ್ಲಾ ಸದಸ್ಯರಿಗೂ, ಅವರು ಹೊಂದಿರುವ ಪಾಲುಗಳಿಗನುಗುಣವಾಗಿ (ಡಿವಿಡೆಂಡ್) ಲಾಭಾಂಶದ ರೂಪದಲ್ಲಿ ಸಮನಾಗಿ ಹಂಚಲಾಗುತ್ತದೆ. ಸಂಪತ್ತಿನ ಸಮಾನಹಂಚಿಕೆ ಸಹಕಾರದ ವಿಶೇಷಲಕ್ಷಣವಾಗಿದೆ.

ತಾಟಸ್ಥ್ಯ ನೀತಿ: ಸಹಕಾರ ರಾಜಕೀಯದ ಗೊಡವೆ–ಗೊಂದಲಗಳಲ್ಲಿ ಪ್ರವೇಶಿಸುವುದಿಲ್ಲ. ಆರ್ಥಿಕ–ಸಾಮಾಜಿಕ ಕಲ್ಯಾಣವನ್ನು ಸಾಧಿಸುವುದೇ ಸಹಕಾರದ ಮೂಲೋದ್ದೇಶ.

ಜಾಹಿರಾತಿನ ತತ್ವ: ವ್ಯಾಪಾರ ವ್ಯವಹಾರಗಳ ಎಲ್ಲಾ ಲೇವಾದೇವಿಯನ್ನೂ ಗುಟ್ಟಿಲ್ಲದೆ ಮಾಡುವುದು ಸಹಕಾರದ ತತ್ವಗಳಲ್ಲೊಂದು. ಸಾಧ್ಯವಾದಷ್ಟು ಪರಮಾವಧಿ ಪ್ರಚಾರ ಕೈಗೊಳ್ಳಲು, ಪ್ರತಿಯೊಬ್ಬ ಸದಸ್ಯನಿಗೂ ಸಹಕಾರ ಸಂಸ್ಥೆಗಳ ಕಾರ್ಯ ಚಟುವಟಿಕೆಗಳ ಬಗ್ಗೆ ಮನವರಿಕೆ ಮಾಡಿಕೊಡಲು ಸಹಕಾರ ಜಾಹೀರಾತನ್ನು ಕೈಗೊಳ್ಳುತ್ತದೆ. ಸಂಸ್ಥೆಗಳು ಸಾಲಕೊಟ್ಟಿರುವುದು, ಸಾಲಕೊಡಲು ತೆಗೆದುಕೊಂಡ ಜಾಮೀನು, ವಾಪಸ್ಸು ಬಂದಿರುವ ಸಾಲದ ಹಣ, ಬಾಕಿ ಇರುವುದು ಇತ್ಯಾದಿಗಳ ಬಗ್ಗೆ ಪ್ರತಿಯೊಬ್ಬ ಸದಸ್ಯನಿಗೂ ತಿಳಿಸಲಾಗುತ್ತದೆ. ಒಟ್ಟಿನಲ್ಲಿ ಸಹಕಾರ ಸಂಸ್ಥೆಗಳ ಲೆಕ್ಕಪತ್ರಗಳು ಹಾಗೂ ಕಾರ್ಯಕ್ರಮವು

ಒಂದು ತೆರದಿಟ್ಟ ಪುಸ್ತಕ. ಸದಸ್ಯರಿಂದ ಯಾವುದನ್ನೂ ಗುಟ್ಟಾಗಿಡಬಾರದೆಂಬುದೇ ಈ ತತ್ವದ ಮುಖ್ಯ ಉದ್ದೇಶ.

ಗೌರವ ಸೇವೆ: ಸಾರ್ವಜನಿಕ ಸೇವಾ ಮನೋವೃತ್ತಿ ಹೊಂದಿರುವವರು ಸಹಕಾರ ಸಂಸ್ಥೆಗಳಲ್ಲಿ ಗೌರವ ಸೇವೆ ಸಲ್ಲಿಸಲು ಮುಂದೆ ಬರುವುದುಂಟು. ಆದರೆ ಈ ರೀತಿ ಗೌರವಸೇವೆ ಮಾಡುವವರ ಆಡಳಿತವು ಸಾಮಾನ್ಯವಾಗಿ ಅದಕ್ಷತೆ ಹಾಗೂ ನಿರ್ಲಕ್ಷ್ಯ ಮನೋಭಾವನೆಯಿಂದ ಕೂಡಿರುತ್ತದೆ. ಇವರು ಸಂಸ್ಥೆಯ ಅಭಿವೃದ್ಧಿಯಲ್ಲಿ ಹೆಚ್ಚಿನ ಆಸಕ್ತಿ ವಹಿಸುವುದಿಲ್ಲ, ಏಕೆಂದರೆ ಇವರು ಉಚಿತ ಸೇವೆ ಮಾಡುವುದರಿಂದ ಇವರಿಗೆ ಸಂಸ್ಥೆಯಿಂದ ಯಾವ ಲಾಭವೂ ಇರುವುದಿಲ್ಲ. ಅಲ್ಲದೆ, ಇವರು ಕೇವಲ ವೇಳೆಯನ್ನು ಕಳೆಯಲು ಈ ಬಗೆಯ ವೃತ್ತಿಗಳನ್ನು ಕೈಗೊಂಡಿರುವುದುಂಟು. ಸಾಮಾನ್ಯವಾಗಿ ಶ್ರೀಮಂತರು ಪ್ರಾರಂಭದಲ್ಲಿ ಗೌರವಾರ್ಥ ಸೇವೆಯಲ್ಲಿ ಉತ್ಸಾಹ ತೋರಿದರೂ ಕಾಲಕ್ರಮೇಣ ಅವರ ಉತ್ಸಾಹ ಕುಂದುತ್ತದೆ. ಆದ್ದರಿಂದ ಸಹಕಾರ ಸಂಸ್ಥೆಗಳು ತ್ವರಿತ ವೇಗದಲ್ಲಿ ಬೆಳವಣಿಗೆಯನ್ನು ಹೊಂದಬೇಕಾದರೆ ವೇತನಕೊಟ್ಟು ತರಬೇತಿ ಹೊಂದಿದ, ಉತ್ಸಾಹದಿಂದ ದುಡಿಯುವ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬೇಕು. ಸಹಕಾರ ಧರ್ಮದ ಉದ್ದಿಮೆಯಲ್ಲ. ಇದೊಂದು ವ್ಯಾಪಾರದ ಸಂಘಟನೆ. ಆದಕಾರಣ ಇದಕ್ಕೆ ದಕ್ಷತೆಯಿಂದ ಕೆಲಸ ಮಾಡುವ ಹಾಗೂ ಸುವ್ಯವಸ್ಥಿತ ರೀತಿಯಲ್ಲಿ ಆಡಳಿತ ನೋಡಿಕೊಳ್ಳುವ ಸಿಬ್ಬಂದಿ ಇರಬೇಕು. ಈ ದೃಷ್ಟಿಯಿಂದ ಇತ್ತೀಚಿಗೆ ಗೌರವ ಸೇವೆಯ ತತ್ವವನ್ನು ಅನುಸರಿಸುತ್ತಿಲ್ಲ.

ಐಕ್ಯತೆ, ಮಿತವ್ಯಯ: ಐಕ್ಯತೆ ಮತ್ತು ಮಿತವ್ಯಯಗಳನ್ನು

ಸಹಕಾರದ ತತ್ವಗಳೆಂದು ಇತ್ತೀಚೆಗೆ ಪರಿಗಣಿಸಲಾಗಿದೆ. ಐಕ್ಯತೆಯು ಸಹಕಾರದ ಮಾರ್ಗದರ್ಶನ ತತ್ವ. ಶಿಸ್ತು, ಸಮಾನತೆ, ಪರಸ್ಪರ ತ್ಯಾಗ ಹಾಗೂ ಹೊಂದಾಣಿಕೆ, ವಿಶ್ವಾಸ ಮತ್ತು ಗೌರವ ಮೂಡಿಸಿ ಸಾಮಾಜಿಕ ಐಕ್ಯತೆಗೆ ಸಹಕಾರ ನೆರವಾಗುತ್ತದೆ. ಮಿತ ವ್ಯಯ ಬುದ್ಧಿಯನ್ನು ಹೆಚ್ಚಿಸಿ ಹಳ್ಳಿಗರ ಜೀವನದ ಅಂತಸ್ತನ್ನು ಉತ್ತಮಗೊಳಿಸುವ ವಿಶಿಷ್ಟ ಗುಣವನ್ನು ಸಹಕಾರ ಪಡೆದಿದೆ. ಅಲ್ಪ ಚೈತನ್ಯವುಳ್ಳ ರೈತರು ತಮ್ಮಲ್ಲಿರುವ ಸ್ವಲ್ಪ ಹಣದಿಂದಲೇ ಸಹಕಾರ ಸಂಸ್ಥೆಯೊಂದನ್ನು ಏರ್ಪಡಿಸಿಕೊಂಡರೆ 'ಸಂಘವೇ ಶಕ್ತಿ' ಎಂಬಂತೆ ತಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬಹುದು. ಸಹಕಾರದಿಂದ ವ್ಯಕ್ತಿಸ್ವಾತಂತ್ರ್ಯಕ್ಕೆ ಮನ್ನಣೆ ದೊರೆಯುತ್ತದೆ. ಶೋಷಣೆ ರಹಿತ ಸಮಾಜ ನಿರ್ಮಾಣವಾಗುತ್ತದೆ. ಇಂತಹ ಉದಾತ್ತ ತತ್ವವು ಸಹಕಾರವನ್ನುಳಿದು ಬೇರೆ ಯಾವ ಪದ್ಧತಿಯಲ್ಲೂ ಕಾಣಸಿಗದು.

ಕೈಗಾರಿಕೆ, ವ್ಯಾಪಾರ ಮುಂತಾದ ಕ್ಷೇತ್ರಗಳಿಗೆ ಅನ್ವಯಿಸಲಾಗಿರುವ ಸಹಕಾರ ತತ್ವವನ್ನು ಕೃಷಿಕ್ಷೇತ್ರಕ್ಕೂ ಅನ್ವಯಿಸಲಾಗಿದೆ. ವಾಸ್ತವವಾಗಿ ಕೃಷಿಕ್ಷೇತ್ರದಲ್ಲೇ ಸಹಕಾರ ತತ್ವಗಳು ಹೆಚ್ಚಿನ ಯಶಸ್ಸು ಗಳಿಸಿವೆ ಎನ್ನಬಹುದು. ಅಧಿಕ ಕೃಷಿ ಉತ್ಪಾದನೆಗೆ, ಆರ್ಥಿಕ ಬೆಳವಣಿಗೆಗೆ ಸಹಕಾರ ಒಂದು ಸಾರ್ವಭೌಮ ಔಷಧಿಯಿದ್ದಂತೆ. ಸಹಕಾರ ತತ್ವದ ಅಗತ್ಯವು ಕೃಷಿ ಕ್ಷೇತ್ರದಲ್ಲಿ ಮೊದಲಿನಿಂದ ಕಡೆಯವರೆವಿಗೂ ಪೂರ್ತಿಯಾಗಿ ತುಂಬಿದೆ ಎನ್ನಬಹುದು. ರೈತರಿಗೆ ಉತ್ಪಾದನೆಯ ಸಾಲ ನೀಡಿಕೆ, ಬೀಜ, ಗೊಬ್ಬರ, ಉಪಕರಣ ಇತ್ಯಾದಿಗಳ ಪೂರೈಕೆ, ಕೃಷಿ ಉತ್ಪನ್ನದ ಸಂಗ್ರಹ, ಪರಿಷ್ಕರಣ ಮತ್ತು ಮಾರಾಟ, ರೈತರ ಋಣ ಪರಿಹಾರ ಮತ್ತು ಭೂ ಅಭಿವೃದ್ಧಿಗಾಗಿ ನೆರವು, ಸಹಕಾರಿಬೇಸಾಯ

—ಹೀಗೆ ಸಹಕಾರವನ್ನು ಕೃಷಿಯ ಎಲ್ಲಾ ವಿಭಾಗಗಳಿಗೂ ಅನ್ವಯಿಸಲಾಗಿದೆ. ಸಾಮಾನ್ಯವಾಗಿ ರೈತರು ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಅಷ್ಟೇನೂ ಮುಂದುವರಿದವರಲ್ಲ. ವ್ಯಕ್ತಿಶಃ ಇವರು ಸಬಲರೂ ಅಲ್ಲ. ಇಡೀ ದೇಶದ ತುಂಬ ವ್ಯಾಪಕವಾಗಿ ಹರಡಿದ್ದರೂ ಕೈಗಾರಿಕಾ ಕಾರ್ಮಿಕರಂತೆ ಇವರು ಸಂಘಟಿತರಾಗಿಲ್ಲ. ಅಲ್ಲದೆ ಕೃಷಿ ಉತ್ಪಾದನೆಯ ಘಟಕಗಳೂ ಸಾಧಾರಣವಾಗಿ ಚಿಕ್ಕವು. ಉತ್ಪಾದನೆಗೆ ಮುಖ್ಯವಾಗಿ ಬೇಕಾಗಿರುವ ಅಂಶಗಳನ್ನು ಹೊಂದಿಸಿಕೊಳ್ಳುವುದರಲ್ಲೂ, ಉತ್ಪಾದನೆಯಾದ ವಸ್ತುಗಳನ್ನು ಮಾರಾಟ ಮಾಡುವುದರಲ್ಲೂ ರೈತರು ಅನೇಕರನ್ನು ಅವಲಂಬಿಸ ಬೇಕಾಗುತ್ತದೆ. ಅಜ್ಞರಾದ ರೈತರು ಲಾಭಾಕಾಂಕ್ಷೆಯಿಂದ ಕೂಡಿದವರಿಂದ ಬಹು ಸುಲಭವಾಗಿ ವಂಚಿಸಲ್ಪಡುತ್ತಾರೆ. ಲಾಭ ಬಡುಕರು ರೈತರ ದೌರ್ಬಲ್ಯದ ದುರುಪಯೋಗ ಪಡೆಸಿಕೊಂಡು ಅವರನ್ನು ಶೋಷಿಸುತ್ತಾರೆ. ಇದನ್ನು ತಪ್ಪಿಸುವಲ್ಲಿ ಸಹಕಾರ ಉತ್ತಮ ಸಾಧನವಾಗಿ ಪರಿಣಮಿಸಿದೆ. ರೈತರಿಗೆ ಸಹಕಾರ ಶೈಕ್ಷಣಿಕ ಮಹತ್ವವುಳ್ಳದ್ದಾಗಿದೆ. ಅದು ಆಡಳಿತ ಗ್ರಹಣ ಶಕ್ತಿಯನ್ನು ಹೆಚ್ಚಿಸುವುದರೊಂದಿಗೆ ವ್ಯವಹಾರಜ್ಞಾನ ಹಾಗೂ ತಾಂತ್ರಿಕ ಅಭಿವೃದ್ಧಿಗೆ ನೆರವನ್ನು ನೀಡುತ್ತದೆ. ಸಹಕಾರ ಆರ್ಥಿಕ ರಂಗದಲ್ಲಿ ಸಂಪತ್ತನ್ನೂ, ಸಾಮಾಜಿಕ ರಂಗದಲ್ಲಿ ಸಮಾನತೆಯನ್ನೂ ತರುತ್ತದೆ. ವೈಯಕ್ತಿಕ ಆಸಕ್ತಿಯು ಮಾಯವಾಗಿ, ವ್ಯಕ್ತಿಯಲ್ಲಿ ಸಾಮಾಜಿಕ ಪ್ರಜ್ಞೆ ಮೂಡುವಂತೆ ಮಾಡುತ್ತದೆ. ಸಹಕಾರದಲ್ಲಿ ಸಂಪತ್ತಿಗಿಂತಲೂ ಮನುಷ್ಯನ ವ್ಯಕ್ತಿತ್ವಕ್ಕೆ ಮಹತ್ವ ಹೆಚ್ಚು. ಸಹಕಾರದಿಂದ ರೈತರು ತಮ್ಮ ವ್ಯಕ್ತಿ ಸ್ವಾತಂತ್ರ್ಯವನ್ನು ಕಳೆದುಕೊಳ್ಳದೆ ಇತರರೊಂದಿಗೆ ಸರಿಸಮಾನವಾಗಿ ತಮ್ಮ ಹಿತಗಳನ್ನು ರಕ್ಷಿಸಿಕೊಳ್ಳಬಹುದು. ಸಹಕಾರದ ಆಡಳಿತ ವ್ಯವಸ್ಥೆಯಲ್ಲಿ ತಾವೂ

ಪಾಲ್ಗೊಂಡು, ಫಲಗಳನ್ನು ಸ್ವತಃ ಅನುಭವಿಸಬಹುದು. ರೈತರ ಸಾಮಾಜಿಕ, ಆರ್ಥಿಕ, ಜೀವನದಲ್ಲಿ ಬದಲಾವಣೆಯಾಗಬೇಕಾದರೆ ಅದು ಸಹಕಾರದಿಂದ ಮಾತ್ರ ಸಾಧ್ಯ. ಬಡ ರೈತರ ಆರ್ಥಿಕ ಕಲ್ಯಾಣಕ್ಕೆ ಸಹಕಾರವೊಂದೇ ಸಾಧನ. ಸಹಕಾರ ತತ್ವಗಳನ್ನು ಅಳವಡಿಸಿಕೊಳ್ಳುವ ವ್ಯವಸ್ಥೆಯಿಂದ ಮಾತ್ರ ಕೃಷಿ ಅಭಿವೃದ್ಧಿ ಸಾಧ್ಯ. ಸಹಕಾರಿ ತತ್ವದ ಪ್ರಾಮಾಣಿಕ ಆಚರಣೆಯಿಂದ ಮಾತ್ರ ಜನತೆಯಲ್ಲಿ ಐಕ್ಯತೆ ಮೂಡಿಸಿ ಆದರ್ಶ, ಸುಭದ್ರ ಸಮಾಜವನ್ನು ಹೊಂದಲು ಸಾಧ್ಯ. ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ಆರ್ಥಿಕ ಯೋಜನೆಗಳನ್ನು ರೂಪಿಸಿರುವ ರಾಷ್ಟ್ರಗಳಿಗೆ ಸಹಕಾರಿ ತತ್ವವು ಜೀವನಾಡಿಯಾಗಿದೆ ಎಂದರೆ ತಪ್ಪಲ್ಲ. ನೂಲುವುದು, ನೇಯುವುದು, ಮೀನು ಹಿಡಿಯುವುದು ಮತ್ತು ಹಳ್ಳಿಗಳಲ್ಲಿನ ಇನ್ನಿತರ ಸಣ್ಣ ಪ್ರಮಾಣದ ಉದ್ದಿಮೆಗಳ ಅಭಿವೃದ್ಧಿಗಾಗಿ ಸಹಕಾರಿ ತತ್ವವು ಯೋಗ್ಯಸಾಧನವಾಗಿದೆ.

೩. ಸಹಕಾರದ ಇತಿಹಾಸ

ಇತರ ದೇಶಗಳಲ್ಲಿ : ಸಹಕಾರಿ ಪದ್ಧತಿಯು ವಿಶ್ವದಲ್ಲಿ ರೂಪುಗೊಳ್ಳಲು ಮುಖ್ಯಕಾರಣ ಇಂಗ್ಲೆಂಡ್‌ದೇಶದಲ್ಲುಂಟಾದ ಕೈಗಾರಿಕಾ ಕ್ರಾಂತಿ. ಆದ್ದರಿಂದಲೇ ಇಂಗ್ಲೆಂಡ್ ದೇಶವನ್ನು "ಸಹಕಾರದ ತೌರುಮನೆ" ಎಂದು ಕರೆಯಲಾಗಿದೆ.

ಇಂಗ್ಲೆಂಡಿನಲ್ಲಿ 18ನೆಯ ಶತಮಾನದ ಉತ್ತರಾರ್ಧದಲ್ಲಿ ಹಲವಾರು ಬಗೆಯ ಯಂತ್ರಗಳನ್ನು ಕಂಡುಹಿಡಿಯಲಾಯಿತು. ಯಂತ್ರಗಳ ಬಳಕೆಯಿಂದಾಗಿ ಗಿರಣಿಗಳಲ್ಲಿನ ಉತ್ಪಾದನೆಯು

ಪ್ರಮಾಣ ಅಧಿಕಗೊಂಡಿತು. ಕಡಿಮೆ ದರದ ಯಂತ್ರ ನಿರ್ಮಿತ ವಸ್ತುಗಳಿಗೆ ಬೇಡಿಕೆ ಹೆಚ್ಚಿತು. ಇದರ ಫಲವಾಗಿ ಸಣ್ಣ ಕೈಗಾರಿಕೆಗಳು ತಯಾರಿಸಿದ ವಸ್ತುಗಳಿಗೆ ಬೇಡಿಕೆ ಕುಗ್ಗಿ ಸಾವಿರಾರು ಜನ ನಿರುದ್ಯೋಗ ಅನುಭವಿಸಬೇಕಾಯಿತು. ಜನ ಹೊಟ್ಟೆಪಾಡಿಗಾಗಿ ಪಟ್ಟಣಗಳನ್ನು ಸೇರಲಾರಂಭಿಸಿದರು. ಪಟ್ಟಣಗಳಲ್ಲಿ ಇವರ ಜೀವನ ಅಸಹನೀಯವಾಯಿತು. ಗಿರಣಿಗಳ ಒಡೆಯರು ಲಾಭ ದಾಸೆಯಿಂದ ಕಾರ್ಮಿಕರನ್ನು ಹೆಚ್ಚು ಕಾಲ ದುಡಿಸಲಾರಂಬಿಸಿದರು. ಸಣ್ಣ ಮಕ್ಕಳು, ಹೆಂಗಸರೂ ಸಹ 12 13 ಗಂಟೆಗಳವರೆಗೆ ವಿಶ್ರಾಂತಿ ಇಲ್ಲದೆ ದುಡಿಯಬೇಕಾಗಿತ್ತು. ಈ ಬಡ ಕಾರ್ಮಿಕರು ವಾಸಿಸುತ್ತಿದ್ದುದು ಗಾಳಿ ಬೆಳಕಿಲ್ಲದ ಕೊಳಚೆ ಗುಡಿಸಲುಗಳಲ್ಲಿ. ಹಣ ಸಂಪಾದನೆಯೊಂದನ್ನೇ ಮುಖ್ಯ ಗುರಿಯಾಗಿಟ್ಟುಕೊಂಡಿದ್ದ ಬಂಡವಾಳದಾರರು ಬಡ ಕಾರ್ಮಿಕರ ದುಸ್ಥಿತಿಯತ್ತ ಗಮನಕೊಡಲಿಲ್ಲ. ಸರಕಾರವೂ ಇವರ ಕಷ್ಟನಿವಾರಣೆಗಾಗಿ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಇದರಿಂದಾಗಿ ಬಂಡವಾಳದಾರರ ಸರ್ವಾಧಿಕಾರ ಎಲ್ಲೆ ಮೀರಿತು.

ಇಂತಹ ಹೀನ ಪರಿಸ್ಥಿತಿಯಲ್ಲಿ ರಾಬರ್ಟ್ ಓವನ್ ಎಂಬುವನು ಕಾರ್ಮಿಕರ ಕಗ್ಗತ್ತಲಿನ ಬಾಳಿನಲ್ಲಿ ಬೆಳಕಾಗಿ ಪ್ರವೇಶಿಸಿದನು. ಸ್ವತಃ ಗಿರಣಿಯೊಡೆಯನಾಗಿದ್ದ ಓವನ್ ಸಮಾಜದಲ್ಲಿನ ಬಡವರ ಗೋಳು, ಅವರ ನಿರಂತರ ಶೋಷಣೆಗಳನ್ನು ಕಣ್ಣಾರೆ ಕಂಡು ಕಣ್ಣೀರು ಮಿಡಿದನು. ಇದಕ್ಕೆ ಪರಿಹಾರ ಮಾರ್ಗವನ್ನು ಕಂಡು ಹಿಡಿಯಬೇಕೆಂದು ನಿಶ್ಚಯಿಸಿದನು. ಇದಕ್ಕೆ ಪೂರಕವಾಗಿ ಅವನು ತನ್ನ ಗಿರಣಿಯಲ್ಲಿಯ ಕೂಲಿಕಾರರ ಕೆಲಸದ ಅವಧಿಯನ್ನು ಕಡಿಮೆ ಮಾಡಿದ್ದಲ್ಲದೆ, ಅವರ ಸಂಬಳವನ್ನೂ ಹೆಚ್ಚಿಸಿದನು. ಕೂಲಿಕಾರರಿಗೆಂದೇ ಕಡಿಮೆ ದರದ ಅಂಗಡಿಯೊಂದನ್ನು ಸ್ಥಾಪಿಸಿ

ದನು. ಕೂಲಿಕಾರರ ಮಕ್ಕಳ ಶಿಕ್ಷಣ ವ್ಯವಸ್ಥೆ ಮಾಡಿದನು. ಕೂಲಿಕಾರರಿಗೆ ಸಹಕಾರ ತತ್ವದ ಮಹತ್ವವನ್ನು ಉಪದೇಶಿಸಿದನು. ಸಹಕಾರದಿಂದ ಕೆಲಸಗಾರರ ಹಿತರಕ್ಷಣೆ, ಕಲ್ಯಾಣ ಸಾಧ್ಯವೆಂದೂ, ಸಹಕಾರಿ ತತ್ವದ ತಳಹದಿಯ ಮೇಲೆ ಉತ್ಪಾದಕರ ಸಂಘಗಳನ್ನೂ ಸ್ಥಾಪಿಸಬೇಕೆಂದೂ ಕೆಲಸಗಾರರನ್ನು ಹುರಿದುಂಬಿಸಿದನು. ಕಾರ್ಮಿಕರಿಗೆ ಮಿತವ್ಯಯದ ಮಹತ್ವದ ಬಗ್ಗೆ ತಿಳಿ ಹೇಳಿ, ತಮ್ಮ ಉಳಿತಾಯದ ಹಣವನ್ನು ಕಡಿಮೆದರದ ಅಂಗಡಿಗಳಲ್ಲಿ ತೊಡಗಿಸುವಂತೆ ಮತ್ತು ಆ ಅಂಗಡಿಗಳ ಆಡಳಿತವನ್ನು ಅವರೇ ವಹಿಸಿಕೊಳ್ಳುವಂತೆ ಸೂಚಿಸಿದನು. ಹೀಗೆ ಓವನ್ ತನ್ನ ಕಲ್ಯಾಣ ಕಾರ್ಯಗಳಿಂದ ಜನಪ್ರಿಯನಾದನು. ಪರಸ್ಪರ ತಿಳುವಳಿಕೆ ಹಾಗೂ ಸೌಹಾರ್ದತೆಗಳ ಫಲವಾಗಿ ಅವನ ಗಿರಣಿಯಲ್ಲಿ ಉತ್ಪಾದನೆಯ ಪ್ರಮಾಣ ಹೆಚ್ಚಿತು.

ರಾಬರ್ಟ್ ಓವನ್ ತೋರಿಸಿಕೊಟ್ಟ ಸಹಕಾರಿ ತತ್ವಗಳಿಗನುಸಾರವಾಗಿ, ಇಂಗ್ಲೆಂಡಿನ ಬಂಡವಾಳದಾರರಿಂದ ಬೇಸತ್ತ 28 ಜನ ರಾಕ್‌ಡೇಲ್ ಎಂಬ ಊರಿನ ನೇಕಾರರು 1844 ರಲ್ಲಿ ಸಹಕಾರಿ ಉಗ್ರಾಣ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಆರ್ಥಿಕ ಶಕ್ತಿಯನ್ನು ಸುಧಾರಿಸಿಕೊಳ್ಳುವ ಉದ್ದೇಶದಿಂದ ಸ್ಥಾಪಿತವಾದ ಈ ಸಂಸ್ಥೆಗೆ 'ಸಹಕಾರ ಸಂಸ್ಥೆ' ಎಂದು ನಾಮಕರಣ ಮಾಡಲಾಯಿತು. ಸಂಸ್ಥೆಯನ್ನು ಸ್ಥಾಪಿಸುವುದಕ್ಕೆ ಮೊದಲು ಇವರ ಬದುಕು ಬಹು ದುರ್ಭರವಾಗಿತ್ತು. ವಾರವೊಂದಕ್ಕೆ ಕೇವಲ 6 ಪೆನ್ನಿಗಳಲ್ಲಿ ಇವರ ಜೀವನ ನಡೆಯಬೇಕಾಗಿತ್ತು. ಈ ಅಲ್ಪ ಕೂಲಿಯಲ್ಲಿ ಜೀವನಾವಶ್ಯಕ ವಸ್ತುಗಳನ್ನು ಕೊಳ್ಳುವುದೂ ದುಸ್ತರವಾಗಿತ್ತು. ಇಂತಹ ಸ್ಥಿತಿಯಲ್ಲಿ ಇವರು ಸಂಪು ಹೂಡಿದರೂ ಅದು ಯಶಸ್ವಿಯಾಗಲಿಲ್ಲ. 1843ರಲ್ಲಿ ಈ ಅಶಿಕ್ಷಿತ ನೇಕಾರರು ಒಟ್ಟುಗೂಡಿ

ತಮ್ಮ ಜೀವನವನ್ನು ತಾವೇ ಸ್ವತಃ ಸುಧಾರಿಸಿಕೊಳ್ಳುವ ನಿಶ್ಚಯ ಮಾಡಿದರು. ಅದರಂತೆ ಪ್ರತಿಯೊಬ್ಬರೂ ವಾರಕ್ಕೆ 2 ಪೆನ್ನಿಗಳಂತೆ ಉಳಿತಾಯಮಾಡಿ, ಆ ಹಣದಿಂದ ಒಂದು ಅಂಗಡಿಯನ್ನು ಸ್ಥಾಪಿಸುವ ನಿರ್ಣಯ ಕೈಗೊಂಡರು. ಒಂದು ಮನೆಯನ್ನು ಬಾಡಿಗೆಗೆ ಹಿಡಿದು ಸುಲಭ ದರದಲ್ಲಿ ಜೀವನಾವಶ್ಯಕ ವಸ್ತುಗಳನ್ನು ಮಾರುವ ಉದ್ದೇಶದಿಂದ ಒಂದು ಅಂಗಡಿಯನ್ನು ಸ್ಥಾಪಿಸಿದರು. ತಲಾ ಒಂದು ಪೌಂಡಿನಂತೆ ಬಂಡವಾಳ ತೊಡಗಿಸಿದರು. ಪ್ರಾರಂಭದಲ್ಲಿ ಈ ನೇಕಾರರು ಅನೇಕ ಕಷ್ಟಗಳನ್ನು ಎದುರಿಸಬೇಕಾಯಿತು. ಹಲವು ಟೀಕೆಗಳಿಗೆ ಒಳಗಾಗಬೇಕಾಯಿತು. ಆದಾಗ್ಯೂ ಇವರು ಎದೆಗುಂದಲಿಲ್ಲ. ಕ್ರಮೇಣ ಈ ಸಂಸ್ಥೆಯು ಪ್ರತಿಯೊಬ್ಬರೂ ಅಚ್ಚರಿ ಪಡುವಷ್ಟು ಮಟ್ಟಿಗೆ ಯಶಸ್ವಿಯಾಯಿತು. 1851ರಲ್ಲಿ ಪ್ರತಿ ವಾರದ ಮಾರಾಟ 4 ಪೌಂಡಿನಿಂದ 130 ಪೌಂಡಿಗೆ ಏರಿತು. ಸದಸ್ಯರ ಸಂಖ್ಯೆ 74ಕ್ಕೆ ಹೆಚ್ಚಿತು. ಸಂಘದ ಲಾಭದ ಅಂಶವೂ ಅಧಿಕ ಪ್ರಮಾಣದಲ್ಲಿ ಹೆಚ್ಚಿತು. ರಾಕ್ ಡೇಲನ ನೇಕಾರರು ಗಳಿಸಿದ ಯಶಸ್ಸು ಉಳಿದ ಪಟ್ಟಣಗಳ ಕೂಲಿಕಾರರಿಗೆ ಸ್ಫೂರ್ತಿದಾಯಕವಾಯಿತು. ಹೀಗೆ ಇಂಗ್ಲೆಂಡಿನಲ್ಲಿ ಸಹಕಾರಿ ಚಳುವಳಿ ಜನತೆಯ ಸ್ವಯಂಪ್ರೇರಣೆಯಿಂದ ಉಕ್ಕಿ ಹರಿದು ಬಂದಿತು. ಇಂಗ್ಲೆಂಡಿನ ಅದ್ಭುತ ಸಾಹಸದಿಂದ ಪ್ರೇರೇಪಿತಗೊಂಡ ಇತರ ರಾಷ್ಟ್ರಗಳು ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಲು ಮುಂದೆ ಬಂದವು. ಇಂಗ್ಲೆಂಡಿನಲ್ಲಿ ಸಹಕಾರಿ ಉಗ್ರಾಣಗಳು ಮುಂದುವರಿದಂತೆ ಡೆನ್ಮಾರ್ಕ್‌ದಲ್ಲಿ ಮಾರಾಟ ಸಂಸ್ಥೆಗಳೂ, ಫ್ರಾನ್ಸ್ ಮತ್ತು ಬೆಲ್ಜಿಯಂಗಳಲ್ಲಿ ವಿಮಾ ಸಂಸ್ಥೆಗಳೂ, ನಾರ್ವೆ ಸ್ವೀಡನ್‌ಗಳಲ್ಲಿ ತುಂಡು ಜಮೀನುಗಳನ್ನು ಒಟ್ಟುಗೂಡಿಸುವ ಸಂಸ್ಥೆಗಳೂ, ಜರ್ಮನಿ ಮತ್ತು ಇಟಲಿ ದೇಶಗಳಲ್ಲಿ ಸಾಲ ಸಂಸ್ಥೆ

ಗಳೂ ಹೀಗೆ ಆರ್ಥಿಕ ವ್ಯವಸ್ಥೆಯ ವಿವಿಧ ಚಟುವಟಿಕೆಗಳಿಗೂ ಸಹಕಾರಿ ತತ್ವವನ್ನು ಅನ್ವಯಿಸಿ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸಲಾಯಿತು.

ಸಹಕಾರಿ ಚಳುವಳಿಯು ವಿಶ್ವದ ಒಂದೊಂದು ದೇಶದಲ್ಲಿ ಒಂದೊಂದು ಬಗೆಯಲ್ಲಿ ಅಭಿವೃದ್ಧಿ ಹೊಂದಿವೆ. ಪ್ರಧಾನವಾಗಿ ಇಂಗ್ಲೆಂಡ್, ಡೆನ್ಮಾರ್ಕ್, ಅಮೆರಿಕ, ಚೈನಾ, ಭಾರತ, ಜಪಾನ್ ರಾಷ್ಟ್ರಗಳಲ್ಲಿ ಸಹಕಾರಿ ಚಳುವಳಿಯು ವಿಶೇಷವಾಗಿ ಪ್ರಗತಿಯನ್ನು ಸಾಧಿಸಿದೆ. ಏಷ್ಯಾ ಮತ್ತು ಆಫ್ರಿಕನ್ ರಾಷ್ಟ್ರಗಳಲ್ಲಿ ಉಂಟಾದ ಸಹಕಾರಿ ಚಳುವಳಿಯಿಂದಾಗಿ ಈಗ ಆ ರಾಷ್ಟ್ರಗಳು ಪ್ರಗತಿಪಥದಲ್ಲಿ ಸಾಗುತ್ತಿವೆ. ಜಪಾನಿನಲ್ಲಿ 1948ರ ಕೃಷಿ ಸಹಕಾರ ಸಂಸ್ಥೆಗಳು, ರೇಷ್ಮೆಕೈಗಾರಿಕೆಯ ಸಹಕಾರಸಂಸ್ಥೆಗಳು, ಸಹಕಾರಿ ತೋಟಗಾರಿಕೆ ಸಂಸ್ಥೆಗಳು, ಪಶುಪಾಲನೆ ಸಂಸ್ಥೆಗಳು, ಸಹಕಾರಿ ಹೈನದ ಸಂಸ್ಥೆಗಳು ಮೊದಲಾದುವು ಆ ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಹೆಚ್ಚು ಸಹಕಾರಿಯಾಗಿವೆ. ಜೊತೆಗೆ ಕೆಲವು ಕೃಷಿ ಸಂಸ್ಥೆಗಳು ಯಂತ್ರೋಪಕರಣಗಳನ್ನು, ಕ್ರಿಮಿನಾಶಕಗಳನ್ನು ಹಂಚುವುದರಲ್ಲಿ ತೊಡಗಿವೆ. ಹಾಗೆಯೇ ಆಫ್ರಿಕಾದಲ್ಲೂ ಸಹಕಾರ ವಿಶೇಷವಾಗಿ ಪ್ರಚಾರಗೊಂಡಿದೆ. ಪೂರ್ವ ಆಫ್ರಿಕಾದ ಟಾಂಗನಿಕಾ, ಕೆನ್ಯಾ ಹಾಗೂ ಯುಗಾಂಡಗಳಲ್ಲಿ ಸಹಕಾರ ವಿಶಿಷ್ಟ ಪ್ರಗತಿ ಸಾಧಿಸಿದೆ. ಟಾಂಗನಿಕಾದ ಹತ್ತಿ, ಕಾಫಿ ಉತ್ಪಾದನಾ ಸಹಕಾರ ಸಂಸ್ಥೆಗಳು ಮಹತ್ತರವಾದ ಯಶಸ್ಸನ್ನು ಸಾಧಿಸಿವೆ. ಯುಗಾಂಡದ ಸಹಕಾರಿ ಹತ್ತಿ ಸಂಸ್ಥೆಗಳು ಹೆಚ್ಚಿನ ಪ್ರಮಾಣದ ರಫ್ತು ವ್ಯಾಪಾರವನ್ನು ಮುಂದುವರಿಸಿಕೊಂಡು ಬಂದಿವೆ. ಹತ್ತೊಂಬತ್ತನೆಯ ಶತಮಾನದ ದ್ವಿತೀಯಾರ್ಧದಲ್ಲಿ ಯೂರೋಪು, ಅಮೆರಿಕಗಳಲ್ಲಿ ಅನೇಕ ಕೃಷಿಕರ ಸಹಕಾರ ಸಂಸ್ಥೆ

ಗಳು ವ್ಯಾಪಕವಾಗಿ ಸ್ಥಾಪಿತವಾದುವು. ರೈತರಿಗೆ ಅಗತ್ಯವಾಗಿ ಬೇಕಾದ ಸೌಲಭ್ಯಗಳನ್ನು ನೀಡಲು ಪ್ರಚಲಿತವಾಗಿದ್ದ ಸಾಧನಗಳು ಅಸಮರ್ಪಕವಾಗಿದ್ದ ಕಡೆಗಳಲ್ಲೆಲ್ಲಾ ಅವನ್ನು ಒದಗಿಸುವುದು ಈ ಸಂಸ್ಥೆಗಳ ಉದ್ದೇಶವಾಗಿತ್ತು. ಸಾಲ, ವಿಮೆ, ಮಾರಾಟ, ಕೃಷಿಗೆ ಆಗತ್ಯವಾದ ವಸ್ತುಗಳ ಕೊಳ್ಳುವಿಕೆ ಇವು ಈ ಸಂಸ್ಥೆಗಳು ನೀಡತೊಡಗಿದ ಸೇವೆಗಳು.

ಮೊಟ್ಟಮೊದಲು ಸ್ಥಾಪಿತಗೊಂಡಿದ್ದ ಸಂಸ್ಥೆಗಳು ಸ್ಥಳೀಯವಾಗಿದ್ದುವು. ಆದರೆ ಕ್ರಮೇಣ ಆರ್ಥಿಕ ವ್ಯವಸ್ಥೆ ಹೆಚ್ಚು ಬೆಳೆದಂತೆ, ಸಹಕಾರವೂ ಬೆಳೆದು ಅನೇಕ ಸ್ಥಳೀಯ ಸಂಸ್ಥೆಗಳು ಒಕ್ಕೂಟಗಳನ್ನು ರಚಿಸಿಕೊಂಡು ತಮ್ಮ ಸೇವೆಯನ್ನು ವಿಸ್ತರಿಸಿದುವು. ಇಪ್ಪತ್ತನೆಯ ಶತಮಾನದ ಪ್ರಥಮಾರ್ಧದಲ್ಲಿ ಈ ಸಂಸ್ಥೆಗಳು ಕೃಷಿ ಉತ್ಪನ್ನಗಳನ್ನು ಪರಿಷ್ಕರಿಸುವ, ರೈತರಿಗೆ ಅಗತ್ಯವಾದ ವಸ್ತುಗಳನ್ನು ತಯಾರಿಸುವ ಕಾರ್ಯಗಳಲ್ಲಿ ನಿರತವಾದುವು. ದ್ವಿತೀಯ ಮಹಾಯುದ್ಧದ ನಂತರ ಸಹಕಾರ ಸಂಸ್ಥೆಗಳ ಕಾರ್ಯಕ್ಷೇತ್ರ ಬಹಳಷ್ಟು ವಿಸ್ತಾರಗೊಂಡಿತು. ಹೀಗೆ ಮೊಟ್ಟಮೊದಲು ರಾಬರ್ಟ್ ಓವನ್ ನಿಂದ (Robert Owen) ಇಂಗ್ಲೆಂಡಿನಲ್ಲಿ ಜನ್ಮ ತಾಳಿದ ಸಹಕಾರಿ ಚಳುವಳಿಯು ಇಂದು ಇಡೀ ವಿಶ್ವದಲ್ಲಿ ವಿವಿಧ ರೂಪಗಳಲ್ಲಿ ಪ್ರಸರಣ ಹೊಂದಿ ವರ್ಷ ವರ್ಷವೂ ಮೇರೆ ಮೀರಿದ ಪ್ರಗತಿಯನ್ನು ಸಾಧಿಸುತ್ತಿದೆ.

೪. ಪ್ರಾಚೀನ ಭಾರತದಲ್ಲಿ ಸಹಕಾರ

ಭಾರತಕ್ಕೆ ಸಹಕಾರ ಹೊಸದೇನೂ ಅಲ್ಲ. ಬಹಳ ಹಿಂದೆಯೇ ಭಾರತದ ಜನ ಸಹಕಾರದ ಬಗ್ಗೆ ತಿಳಿದವರಾಗಿದ್ದು, ಅದನ್ನು

ಅನುಸರಿಸುತ್ತಿದ್ದರು. ಪ್ರಾಚೀನ ಭಾರತದಲ್ಲಿ ಸಹಕಾರ ನಾಲ್ಕು ರೂಪಗಳನ್ನು ತಳೆದಿತ್ತು.

1) ಕುಲ 2) ಗ್ರಾಮ 3) ಶ್ರೇಣಿ 4) ಜಾತಿ

ಕುಲ : ಭಾರತದ ಸಮಾಜದಲ್ಲಿ ಸಹಕಾರಿ ಚಟುವಟಿಕೆಯು ಮೊಟ್ಟಮೊದಲು ಕುಲದ ರೂಪದಲ್ಲಿ ಉದಯಿಸಿತು. ಕುಲ ಎನ್ನುವುದು ಒಂದು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಂಘಟನೆಯಾಗಿದ್ದು ಅದರಲ್ಲಿ ಮಿತ್ರರು, ನೆಂಟರಿಷ್ಟರು, ರಕ್ತ ಸಂಬಂಧಿಗಳು ಮುಂತಾದವರು ತಮ್ಮ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಆಸಕ್ತಿಗಳನ್ನು ಹೊಂದಲು ಒಟ್ಟಿಗೆ ಸೇರಿ ಸಹಕಾರ ಮನೋಭಾವದಿಂದ ದುಡಿಯುತ್ತಿದ್ದರು. ಸಮಾಜ ಬಲಯುತವಾಗಿ ವಿಸ್ತಾರಗೊಂಡಂತೆ ಕ್ರಮೇಣ ಸಾಮಾಜಿಕ ಮತ್ತು ಆರ್ಥಿಕ ಸಹಕಾರವು ಅವಿಭಕ್ತ ಕುಟುಂಬಗಳ ಮಿತಿಗೆ ಒಳಪಟ್ಟಿತು. ಈ ವ್ಯವಸ್ಥೆಯಲ್ಲಿ ಭೂಮಿಯು ಕುಟುಂಬದ ಎಲ್ಲರಿಗೂ ಸೇರಿದ್ದು ಎಲ್ಲರೂ ಕೃಷಿ ಕಾರ್ಯಗಳಲ್ಲಿ ಭಾಗಿಯಾಗುತ್ತಿದ್ದರು. ವಯಸ್ಕರು ಕುಟುಂಬದ ಕಾರ್ಯಗಳನ್ನು ಹಂಚಿಕೊಳ್ಳುತ್ತಿದ್ದರು. ಕುಟುಂಬದ ಎಲ್ಲ ಸದಸ್ಯರೂ ಒಂದೇ ಮನೆಯಲ್ಲಿ ವಾಸಿಸುತ್ತಿದ್ದು ಒಟ್ಟು ಆಸ್ತಿಯಿಂದ ಕುಟುಂಬದ ವೆಚ್ಚಗಳನ್ನು ನಿರ್ವಹಿಸಲಾಗುತ್ತಿತ್ತು. ಭ್ರಾತೃತ್ವ ಹಾಗೂ ಪರಸ್ಪರ ಸಹಾಯಗಳು ಅವಿಭಕ್ತ ಕುಟುಂಬದ ಮುಖ್ಯ ಅಡಿಗಲ್ಲುಗಳಾಗಿದ್ದುವು.

ಗ್ರಾಮ : ಕುಲವು ಒಂದು ಸ್ಥಿರವಾದ ಅಂಗವಾಗಿ ರೂಪುಗೊಂಡನಂತರ ಸಹಕಾರವು ಗ್ರಾಮದ ಮಟ್ಟದಲ್ಲಿ ವಿಕಾಸ ಹೊಂದಿತು. ಗ್ರಾಮ ಸಭೆಯು ಸಹಕಾರಿ ಸಂಘಟನೆಯಾಗಿದ್ದು,

ಹಳ್ಳಿಯ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಗೆ ಬೇಕಾದ ಕಾರ್ಯಗಳನ್ನು ಕೈಗೊಳ್ಳುತ್ತಿತ್ತು. ಹಳ್ಳಿಯ ಭೂಮಿಗಳು, ರಸ್ತೆಗಳು, ಹೆದ್ದಾರಿಗಳು, ಉದ್ಯಾನವನಗಳು, ಹುಲ್ಲುಗಾವಲುಗಳು, ಇತ್ಯಾದಿಗಳ ಸುಧಾರಣೆಯ ಕಾರ್ಯವನ್ನು ಗ್ರಾಮ ಸಭೆಯು ನಿರ್ವಹಿಸುತ್ತಿತ್ತು. ಕೃಷಿಕರು ಹಾಗೂ ಕುಶಲ ಕರ್ಮಿಗಳು ಅವರವರ ಕ್ಷೇತ್ರದಲ್ಲಿ ಆಗಾಗ್ಯೆ ಒಟ್ಟಿಗೆ ಸೇರಿ ಸಹಕಾರ ಭಾವನೆಯಿಂದ ದುಡಿಯುತ್ತಿದ್ದರು. ಸದಸ್ಯರೆಲ್ಲರೂ ಒಟ್ಟಿಗೆ ಕಲಿತು, ಕೊಳ್ಳುವ, ಮಾರುವ, ಉಪಕರಣಗಳನ್ನು ಪಡೆಯುವ, ಉತ್ಪಾದನೆಗೆ ಬೇಕಾದ ಬೀಜಗಳನ್ನು ಹಾಗೂ ಇತರ ಬಾಬುಗಳನ್ನು ಪಡೆಯುವ ಕಾರ್ಯಗಳನ್ನು ಮಾಡುತ್ತಿದ್ದರು.

ಶ್ರೇಣಿ : ಶ್ರೇಣಿಯು ವೇದಗಳ ಯುಗದ ನಂತರ ಬೆಳಕಿಗೆ ಬಂದಿತು. ಇದು ಕುಶಲಕರ್ಮಿಗಳ, ಕೈಗಾರಿಕಾ ಹಾಗೂ ಕೈಕಸಬುದಾರರ, ವ್ಯಾಪಾರಿಗಳ, ಬ್ಯಾಂಕರುಗಳ, ಕೃಷಿಕರ, ಮನೆಕಟ್ಟುವವರ ಸಹಕಾರ ಮತ್ತು ಆರ್ಥಿಕ ಸಂಘಟನೆಯಾಗಿತ್ತು. ಶ್ರೇಣಿಯು ಬ್ಯಾಂಕರ್ ಮತ್ತು ವ್ಯಾಪಾರಿ ಸಂಘವಾಗಿದ್ದುದೇ ಅಲ್ಲದೆ ಪರೋಪಕಾರದ ಸಂಸ್ಥೆಯಾಗಿಯೂ ಕಾರ್ಯನಿರ್ವಹಿಸುತ್ತಿತ್ತು.

ಜಾತಿ : ಜಾತಿಯ ಮಟ್ಟದಲ್ಲಿ ಸಹಕಾರವು ಹೆಚ್ಚಾಗಿ ಶಿಕ್ಷಣ ಸಹಾನುಭೂತಿ, ದಯೆ, ಪರೋಪಕಾರ, ಪರಿಹಾರಕಾರ್ಯ ಇತ್ಯಾದಿ ಉದ್ದೇಶಗಳಿಗೆ ಮೀಸಲಾಗಿತ್ತು. ಯಾವಾಗ ಒಂದು ವೃತ್ತಿ, ಕಸಬು ಅಥವಾ ವ್ಯಾಪಾರವು ಒಂದು ನಿರ್ದಿಷ್ಟ ಜಾತಿಯೊಂದಿಗೆ ವಿಲೀನಗೊಂಡಿತೋ ಆಗ ಸಹಕಾರವು ಸಮಾಜದ

ಆರ್ಥಿಕ ಚಟುವಟಿಕೆಗಳ ಮುಖ್ಯ ಅಂಗವಾಗಿ ರೂಪುಗೊಂಡಿತು. ಆದರೆ ಇಂದು ಜಾತಿಪದ್ಧತಿಯು ನಶಿಸುತ್ತಿರುವುದರಿಂದಲೂ, ಭೂ ಸುಧಾರಣೆಗಳನ್ನು ಜಾರಿಗೆ ತಂದಿರುವುದರಿಂದಲೂ, ಆರ್ಥಿಕ ಅಭಿವೃದ್ಧಿಯ ಕಾರ್ಯಕ್ರಮಗಳಿಂದಲೂ, ಒಂದೇ ಸೂರಿನಡಿಯಲ್ಲಿ ಒಟ್ಟಿಗೆ ವಾಸಿಸುವ ವ್ಯವಸ್ಥೆ ಮಾಯವಾಗುತ್ತಿರುವುದರಿಂದಲೂ, ಆಧುನಿಕ ಪ್ರಜಾಪ್ರಭುತ್ವ ವಿಚಾರಗಳು ಹರಡುತ್ತಿರುವುದರಿಂದಲೂ, ಎಲ್ಲಕ್ಕಿಂತಲೂ ಹೆಚ್ಚಾಗಿ ಜನರ ಜೀವನದಲ್ಲಿ ಆರ್ಥಿಕ ವಿಚಾರಗಳು ತೀವ್ರವಾಗಿ ವಿಸ್ತಾರಗೊಳ್ಳುತ್ತಿರುವುದರಿಂದಲೂ ಸಹಕಾರ ಒಡೆದು ಚೂರಾಗುತ್ತಿದೆ.

೫. ಭಾರತದಲ್ಲಿ ಸಹಕಾರ ಚಳುವಳಿ

ಭಾರತದಲ್ಲಿ ಸಹಕಾರಿ ಚಳುವಳಿಗೆ ಒಂದು ಸುದೀರ್ಘವಾದ ಇತಿಹಾಸವಿದೆ. ನಮ್ಮ ದೇಶದಲ್ಲಿ ಸಹಕಾರಿ ಚಳುವಳಿಯು ಸುಮಾರು ಅರ್ಧಶತಮಾನಕ್ಕೂ ಹಿಂದೆ ಪ್ರಾರಂಭವಾಯಿತು ಎನ್ನಬಹುದು. ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ನಮ್ಮ ದೇಶದ ಹಳ್ಳಿಗಳ ಪರಿಸ್ಥಿತಿ ಬಹು ಶೋಚನೀಯವಾಗಿತ್ತು. ಆಗ ಸಾಲದ ಸಮಸ್ಯೆಯು ಸಾಮಾನ್ಯ ಜನರ ಅತಿದೊಡ್ಡ ಸಮಸ್ಯೆಯಾಗಿತ್ತು. ಆಗಿನ ಕಾಲದ ಶ್ರೀಮಂತರ ಸಾಲ ನೀಡಿಕೆಯ ಪದ್ಧತಿಯಲ್ಲಿನ ಅನಿಷ್ಟ ಭಾರತದ ಪ್ರಗತಿಯ ಹಾದಿಯಲ್ಲಿ ದೊಡ್ಡ ಮುಳ್ಳಾಗಿದ್ದಿತು. ಈ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡ ಶ್ರೀಮಂತರ ಶೋಷಣೆಯಿಂದಾಗಿ ಲಕ್ಷಾಂತರ ರೈತರು ಸಾಗುವಳಿಯ ಭೂಮಿಯನ್ನು ಕಳೆದುಕೊಳ್ಳುವುದು ಆಗ ಸಾಮಾನ್ಯವಾಗಿತ್ತು. ಇದರಿಂದ ಗ್ರಾಮೀಣ

ಋಣಭಾರ . ವ್ಯಾಪಕವಾಗತೊಡಗಿತು. 1904ರ ಮುನ್ನ ಸರಕಾರಕ್ಕೆ ರೈತರ ಸಮಸ್ಯೆಗಳ ಬಗ್ಗೆ ತಿಳಿಯದಿರಲಿಲ್ಲ. 1882ರಲ್ಲೇ ವಿಲಿಯಂ ನೆಡ್ಡರ್ ಬರ್ನ್ ಮತ್ತು ಜಸ್ಟೀಸ್ ರ್‍ಯಾನಡೇ ರೈತರಿಗೆ ಸಾಲ ಪೂರೈಸುವ ಉದ್ದೇಶದಿಂದ ಕೃಷಿ ಬ್ಯಾಂಕುಗಳನ್ನು ಸ್ಥಾಪಿಸಲು ಒಂದು ಯೋಜನೆಯನ್ನು ಸಿದ್ದಪಡಿಸಿದ್ದರು. ಈ ಯೋಜನೆಯ ಕೆಲವು ಆವಶ್ಯಕ ಅಂಶಗಳನ್ನು ಮಾತ್ರ ಭೂಸುಧಾರಣೆ ಮತ್ತು ಕೃಷಿ ಸಾಲ ಕಾಯಿದೆಗಳಲ್ಲಿ ಬಳಸಿಕೊಳ್ಳಲಾಯಿತು. ಇದರ ಪ್ರಕಾರ ರೈತರು ಸರಕಾರದಿಂದ ಉತ್ಪಾದನಾ ಉದ್ದೇಶಗಳಿಗೆ ವರ್ಷಕ್ಕೆ ಶೇಕಡ 6ರಷ್ಟು ಬಡ್ಡಿದರದಲ್ಲಿ ಸಾಲವನ್ನು ಪಡೆಯಬಹುದಾಗಿತ್ತು. ಸರಕಾರ 1883ರಲ್ಲಿ ಭೂಸುಧಾರಣೆ ಕಾನೂನು, 1884ರಲ್ಲಿ ರೈತರಿಗಾಗಿ ಸಾಲದ ಕಾನೂನುಗಳನ್ನು ಜಾರಿಗೆ ತಂದಿತು. ಈ ಕಾಯಿದೆಗಳನ್ವಯ ರೈತರಿಗೆ ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ನೀಡಲಾಯಿತು. ಈ ಸಾಲಗಳಿಗೆ 'ತಕಾವಿಸಾಲ' ಎನ್ನುತ್ತಾರೆ. 1883ರ ಭೂಸುಧಾರಣೆ ಕಾನೂನಿನಲ್ಲಿ ಭೂಮಿಯನ್ನು ಒತ್ತೆಯಾಗಿಟ್ಟುಕೊಂಡು ಆದರ ಭದ್ರತೆಯ ಆಧಾರದ ಮೇಲೆ ದೀರ್ಘಾವಧಿಯ ತಕಾವಿ ಸಾಲಗಳನ್ನು ಕೆಳಕಂಡ ಉದ್ದೇಶಗಳಿಗೆ ರೈತರಿಗೆ ಪೂರೈಸಲಾಗುತ್ತಿತ್ತು.

1. ಬಾವಿಗಳ, ಕೆರೆಗಳ ನಿರ್ಮಾಣ.
2. ಭೂಮಿಯನ್ನು ಕೃಷಿ ಕಾರ್ಯಕ್ಕೆ ಸಿದ್ಧಗೊಳಿಸುವಿಕೆ.
3. ಪ್ರವಾಹ, ಭೂಸವೆತ ಇತ್ಯಾದಿಗಳಿಂದ ಭೂಮಿಯ ರಕ್ಷಣೆ.
4. ಭೂಮಿಯ ಶಾಶ್ವತ ಸುಧಾರಣೆ.

ಇದರ ಜೊತೆಗೆ ಕೃಷಿಕರ ಸಾಲ ಕಾಯಿದೆಯ ಮೂಲಕ ರೈತರಿಗೆ ದನಕರುಗಳನ್ನು ಕೃಷಿ ಉಪಕರಣಗಳನ್ನು ಹಾಗೂ

ಬೀಜಗಳನ್ನು ಕೊಳ್ಳಲು ಅಲ್ಪಾವಧಿ ಸಾಲದ ಸೌಲಭ್ಯವನ್ನು ಪೂರೈಸಲಾಯಿತು. ಆದರೆ ಈ ಕಾನೂನುಗಳು ರೈತರಿಗೆ ಪ್ರಯೋಜನಕಾರಿಯಾಗಲಿಲ್ಲ. ಇದಕ್ಕೆ ಕಾರಣ ಸಾಲಕೊಡು ವುದರಲ್ಲಿ ವಿಳಂಬ, ಸಾಲವಸೂಲಿ ಮಾಡುವ ಕಠಿಣ ಕ್ರಮ, ಕಡಿಮೆ ಪ್ರಮಾಣದ ಸಾಲ ಇತ್ಯಾದಿ ದೋಷಗಳು. ಇದರಿಂದ ರೈತರ ದುಸ್ಥಿತಿಯಲ್ಲಿ ಯಾವ ಸುಧಾರಣೆಯೂ ಆಗಲಿಲ್ಲ. ಆಗ ಹೊಸದೊಂದು ಮಾರ್ಗವನ್ನು ಕಂಡುಕೊಳ್ಳುವುದು ಆಗತ್ಯ ವಾಯಿತು. ಇದೇ ಅವಧಿಯಲ್ಲಿ ಜರ್ಮನಿಯಲ್ಲಿ ಕೆಲವು ಸಂಸ್ಥೆ ಗಳು ತಲೆ ಎತ್ತಿದುವು. ಆಗ ಫ್ರೆಡರಿಕ್ ವಿಲಿಯಂ ರೈಫಿಸನ್ ಎಂಬ ಆಡಳಿತಗಾರ, ರೈತರ ಉದ್ಧಾರಕ್ಕಾಗಿ ರೈತರದೇ ಆದ ಒಂದು ಸಂಸ್ಥೆಯನ್ನು ಪರಸ್ಪರ ಸಹಾಯ ಮತ್ತು ಸ್ವಸಹಾಯ ಗಳ ಸೂತ್ರದ ಆಧಾರದ ಮೇಲೆ ಕಟ್ಟಿದ. ಈ ಸಂಸ್ಥೆ ರೈತರ ಆರ್ಥಿಕಸ್ಥಿತಿಯನ್ನು ಸುಧಾರಿಸುವಲ್ಲಿ ಯಶಸ್ವಿಯಾಯಿತು. ಕ್ರಮೇಣ ಜರ್ಮನಿಯ ಈ ಬಗೆಯ ಸಂಸ್ಥೆಗಳು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಅಸ್ತಿತ್ವಕ್ಕೆ ಬಂದುವು. ಈ ಸಂಸ್ಥೆ ಗಳು ತುಂಬಾ ಜನಪ್ರಿಯವಾಗತೊಡಗಿ, ಜನತೆಯ ಆಶೋತ್ತರ ಗಳನ್ನು ನೆರವೇರಿಸುವುದರಲ್ಲಿ ಯಶಸ್ವಿಯಾದುವು. ಇದರಿಂದ ದೇಶದ ವಿವಿಧ ಭಾಗಗಳ ಜನಸಮೂಹ ಸಹಕಾರ ಚಳುವಳಿಯಿಂದ ಆಕರ್ಷಿತರಾದರು. ಜರ್ಮನಿಯಲ್ಲಿ ಬೆಳೆದ ಚಳುವಳಿ ಭಾರತ ದಲ್ಲೂ ನಡೆಯಲು ಪರಿಸ್ಥಿತಿಗಳು ಪಕ್ವವಾಗತೊಡಗಿದವು. ಅಂದಿನ ಮದರಾಸು ಸರಕಾರ 1892ರಲ್ಲಿ ಸಹಕಾರ ಸಂಸ್ಥೆಗಳ ಸ್ಥಾಪನೆಯ ಬಗ್ಗೆ ಸೂಕ್ತವಾದ ಸಲಹೆಗಳನ್ನು ನೀಡಲು ಫ್ರೆಡರಿಕ್ ನಿಕೋಲ್‌ಸನ್ ಎಂಬ ಅಧಿಕಾರಿಯನ್ನು ಯೂರೋಪಿಗೆ ಕಳಿಸಿ ಕೊಟ್ಟಿತು. ಇದೇ ಸಮಯದಲ್ಲಿ ಹಿಂದೆ ಸಂಯುಕ್ತ ಪ್ರಾಂತ್ಯ

ವಾಗಿದ್ದು ಈಗಿನ ಉತ್ತರ ಪ್ರದೇಶದಲ್ಲಿ ಇದೇ ಕಾರ್ಯಕ್ಕಾಗಿ ಅಲ್ಲಿಯ ಸರಕಾರ ದೋಪರ್ನೆ ಎಂಬ ಅಧಿಕಾರಿಯನ್ನು ನೇಮಿಸಿತು. ಇವರಿಬ್ಬರೂ ಸೇರಿ ಸಹಕಾರದ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ನಡೆಸಿ ವರದಿಗಳನ್ನು ತಮ್ಮ ತಮ್ಮ ಸರಕಾರಗಳಿಗೆ ಸಲ್ಲಿಸಿದರು. ಈ ವರದಿಗಳ ಆಧಾರದ ಮೇಲೆ ಸರಕಾರ ಜರ್ಮನಿದೇಶದ ರೈಫಿಸನ್ ಸಹಕಾರ ಲೇವಾದೇವಿ ಸಂಸ್ಥೆಗಳ ಮಾದರಿಯಲ್ಲಿ ಸಾಲ ಕೊಡುವ ಸಂಸ್ಥೆಗಳನ್ನು ಸ್ಥಾಪಿಸ ಬೇಕೆಂದು ಶಾಸನ ನೀಡಿತು. 1901ರಲ್ಲಿ ಭಾರತ ಸರಕಾರ ಕ್ಷಾಮ ಅಧ್ಯಯನ ಸಮಿತಿಯನ್ನು ನೇಮಕ ಮಾಡಿತು. ಈ ಸಮಿತಿಯೂ ಸಹಕಾರ ಪದ್ಧತಿಯನ್ನು ಅನುಷ್ಠಾನಕ್ಕೆ ತರಲು ಶಿಫಾರ್ಸುಮಾಡಿತು. ಇದೇ ವೇಳೆಗೆ ಇಂಗ್ಲೆಂಡ್ ದೇಶವು ಸಹ ಕಾರ ಸಂಸ್ಥೆಗಳ ಮೂಲಕ ಪ್ರವರ್ಧಮಾನಕ್ಕೆ ಬಂದುದರಿಂದ, ಉತ್ತೇಜನಗೊಂಡ ಭಾರತ ಸರಕಾರ 1904ರಲ್ಲಿ ಕಾಯಿದೆಯನ್ನು ಹೊರಡಿಸಿ ನ್ಯಾಯಬದ್ಧವಾದ ಸಹಕಾರಿ ಚಳುವಳಿಗೆ ನಾಂದಿ ಹಾಡಿತು. ಈ ಕಾಯಿದೆಯ ಮೂಲಕ ಕೃಷಿ ಸಹಕಾರ ಅಧಿಕೃತ ವಾಗಿ ಪದಾರ್ಪಣ ಮಾಡಿದಂತಾಯಿತು. ಈ ರೀತಿ ಭಾರತದಲ್ಲಿ ಇಂದು ಕಂಡು ಬರುತ್ತಿರುವ ಸಹಕಾರಿ ಸಂಸ್ಥೆಗಳು ಭಾರತೀಯ ಮೂಲದಿಂದ ಬಂದುವಲ್ಲ, ಅವು ವಿದೇಶೀಯ ಮೂಲಗಳಿಂದ ಅನು ಕರಣೆ ಮಾಡಿದವುಗಳಾಗಿವೆ. ಭಾರತದಲ್ಲಿ ಸಹಕಾರಿಪದ್ಧತಿಯನ್ನು ಅಂಗೀಕರಿಸಿದ ಮುಖ್ಯ ಉದ್ದೇಶ ರೈತರಿಗೆ, ಸಣ್ಣ ಪ್ರಮಾಣದ ಉದ್ದಿಮೆಗಳನ್ನು ಅವಲಂಬಿಸಿ ಜೀವನ ಸಾಗಿಸುವವರಿಗೆ ಮಿತ ವ್ಯಯ, ಸ್ವಾವಲಂಬನೆ ಮತ್ತು ಸಹಕಾರಗಳ ಮಹತ್ವವನ್ನು ತಿಳಿಸಿಕೊಟ್ಟು, ಅವುಗಳನ್ನು ಅನುಸರಿಸುವಂತೆ ಪ್ರೇರೇಪಿಸುವುದು. ಭಾರತದಲ್ಲಿ ಸಹಕಾರಿ ಚಳುವಳಿ ಮುಖ್ಯವಾಗಿ ಆರಂಭವಾದುದು

ಇತರ ದೇಶಗಳಂತೆ ಬಡಜನರ ಜೀವನ ಸುಧಾರಣೆಗಾಗಿಯೇ. ಭಾರತದಲ್ಲಿ ಸಹಕಾರಿ ಚಳುವಳಿ ಪ್ರಾರಂಭವಾದನಂತರ ಇದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಪ್ರತಿಯೊಂದು ರಾಜ್ಯದಲ್ಲಿಯೂ ರಿಜಿಸ್ಟ್ರಾರ್ ಹಾಗೂ ಅವರಿಗೆ ಬೇಕಾದ ಕಾರ್ಯಾಲಯ ಸಿಬ್ಬಂದಿ, ಕಾಗದ ಪತ್ರಗಳು ಇತ್ಯಾದಿಗಳ ಏರ್ಪಾಟನ್ನು ಮಾಡಲಾಯಿತು. ರಿಜಿಸ್ಟ್ರಾರ್ ಅವರು ಸಹಕಾರದ ವಿಧಿನಿಯಮಗಳು ಹಾಗೂ ಶಾಸನಗಳ ಪ್ರಕಟಣೆಗಳನ್ನು ಪ್ರಕಟಪಡಿಸಿದರು. ಸಹಕಾರಿ ತತ್ವವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹರಡುವ ವ್ಯವಸ್ಥೆಯನ್ನು ಈ ಅವಧಿಯಲ್ಲೇ ಕೈಗೊಳ್ಳಲಾಯಿತು. 1904ರ ಕಾಯಿದೆಯನ್ವಯ ಗ್ರಾಮ ಸಹಕಾರಿ ಸಂಸ್ಥೆಗಳು ಮತ್ತು ನಗರ ಸಹಕಾರಿ ಸಂಸ್ಥೆಗಳು ಸ್ಥಾಪಿತವಾದವು. ಸಂಸ್ಥೆಯ ಸದಸ್ಯರಲ್ಲಿ 4/5ರಷ್ಟು ಜನ ರೈತರಾಗಿದ್ದರೆ ಅದನ್ನು ಗ್ರಾಮ ಸಂಸ್ಥೆ ಎಂದೂ, 4/5ರಷ್ಟು ಜನ ಬೇರೆಯವರಾಗಿದ್ದರೆ ಅದನ್ನು ನಗರ ಸಂಸ್ಥೆಯೆಂದೂ ಪರಿಗಣಿಸಲಾಯಿತು. ಜನತೆಯಲ್ಲಿ ಸಹಕಾರಿತತ್ವವನ್ನು ಹರಡಲು ಸಂಸ್ಥೆಗಳಿಗೆ ಮತ್ತು ಅವುಗಳ ಸದಸ್ಯರಿಗೆ ಆದಾಯ ತೆರಿಗೆ ರಿಯಾಯಿತಿ, ಸ್ಟ್ಯಾಂಪ್ ಡ್ಯೂಟಿ ರಿಯಾಯಿತಿ, ರಿಜಿಸ್ಟ್ರೇಷನ್ ರಿಯಾಯಿತಿ ಮುಂತಾದ ಸವಲತ್ತುಗಳನ್ನು ಒದಗಿಸಲಾಯಿತು. ಇದರಿಂದಾಗಿ ಸಹಕಾರ ಸಂಸ್ಥೆಗಳು ಕೆಲವು ಕಡೆಗಳಲ್ಲಿ ಸುವ್ಯವಸ್ಥಿತ ರೀತಿಯಲ್ಲಿ ಕೆಲಸಮಾಡಲು ಅನುಕೂಲವಾಯಿತು. ಆದರೆ 1904ರ ಕಾನೂನಿನಲ್ಲಿ ಕೇವಲ ಸಾಲದ ಸಂಸ್ಥೆಗಳಿಗೆ ಪ್ರಾಧಾನ್ಯತೆ ನೀಡಲಾಗಿತ್ತೇ ಹೊರತು ಸಾಲರಹಿತ ಸಹಕಾರಿ ಸಂಸ್ಥೆಗಳ ಸ್ಥಾಪನೆಗೆ ಅವಕಾಶ ನೀಡಿರಲಿಲ್ಲ. ಗ್ರಾಮ ಹಾಗೂ ನಗರ ಸಂಘಗಳಲ್ಲಿನ ಅಂತರ ಕ್ರಮಬದ್ಧವಾಗಿರಲಿಲ್ಲ. ಪ್ರಾಥಮಿಕ ಸಹಕಾರಿ ಸಾಲ ಸಂಸ್ಥೆಗಳ ಬೆಳವಣಿಗೆಗೆ

ಪೂರಕವಾಗಿರುವ ಸೆಂಟ್ರಲ್ ಬ್ಯಾಂಕು ಮುಂತಾದ ಕೇಂದ್ರ ಸಂಸ್ಥೆಗಳ ರಚನೆಗೆ ಈ ಕಾನೂನಿನಲ್ಲಿ ಪ್ರವೇಶವಿರಲಿಲ್ಲ. ಹೀಗಾಗಿ ಸಹಕಾರ ಸಂಸ್ಥೆಗಳು ಬೆಳೆದಾಗ್ಯೂ ಜನರಲ್ಲಿ ಅದೇ ಪ್ರಮಾಣದಲ್ಲಿ ಸಹಕಾರದ ಬಗ್ಗೆ ವಿಶ್ವಾಸ, ಅಭಿಮಾನಗಳು ಬೆಳೆಯಲಿಲ್ಲ. ಆದ್ದರಿಂದ 1912ರಲ್ಲಿ ಪುನಃ ಹೊಸ ಕಾಯಿದೆಯನ್ನು ಪಾಸುಮಾಡಲಾಯಿತು. 1904ರ ಕಾನೂನು ಕೇವಲ ಸಹಕಾರಿ ಸಾಲಕ್ಕೆ ಮಾತ್ರ ಸೀಮಿತವಾಗಿದ್ದರೆ 1912ರ ಕಾನೂನು ಸಹಕಾರದ ಬಹುಮುಖ ಬೆಳವಣಿಗೆಗೆ ಅವಕಾಶ ನೀಡಿತು. ಈ ಕಾಯಿದೆಯು ಸಹಕಾರ ಸಂಸ್ಥೆಗಳ ನಿಯಮಗಳನ್ನು ಸಡಿಲಗೊಳಿಸಿದ್ದರಿಂದ ಸಹಕಾರಿ ಚಳುವಳಿಗೆ ಹೊಸ ಉತ್ಸಾಹ ಬಂದಂತಾಗಿ ದೇಶಾದ್ಯಂತ ವಿವಿಧ ರೀತಿಯ ಸಂಸ್ಥೆಗಳು ಸ್ಥಾಪಿಸಲ್ಪಟ್ಟವು. ಇದರಿಂದ ಕೇವಲ ಸಾಲ ನೀಡಿಕೆಯ ಕಾರ್ಯವನ್ನೇ ಅಲ್ಲದೆ, ಇತರ ಬಗೆಯ ಕಾರ್ಯಕ್ರಮಗಳನ್ನೂ ಸಹಕಾರ ಸಂಸ್ಥೆಗಳು ಕೈಗೊಳ್ಳುವಂತಾಯಿತು. ಈ ಕಾಯಿದೆಯನ್ವಯ ಸಹಕಾರಿ ಮಾರಾಟ ಸಂಸ್ಥೆಗಳು, ವಿಮಾ ಸಹಕಾರ ಸಂಸ್ಥೆಗಳು, ಸಹಕಾರಿ ಬೇಸಾಯ, ಉಗ್ರಾಣಗಳು, ಗ್ರಾಹಕರ ಸಂಸ್ಥೆಗಳು ಅನುಷ್ಠಾನಕ್ಕೆ ಬಂದವು. ಈ ಕಾಯಿದೆಯ ಪ್ರಕಾರ ಎಲ್ಲಾ ಸಹಕಾರ ಸಂಸ್ಥೆಗಳ ಆಡಳಿತವು ಕೇಂದ್ರ ಸರಕಾರದ ಹತೋಟಿಯಲ್ಲಿದ್ದಿತು. ಆ ನಂತರ ಉಂಟಾದ ರಾಜಕೀಯ ಸುಧಾರಣೆಗಳ ಪರಿಣಾಮವಾಗಿ ಸಹಕಾರ ಸಂಸ್ಥೆಗಳ ಆಡಳಿತವು ಆಯಾಯ ರಾಜ್ಯ ಸರಕಾರಗಳಿಗೆ ವರ್ಗಾಯಿಸಲ್ಪಟ್ಟಿತು. ಭಾರತದಲ್ಲಿ 1914ರ ವೇಳೆಗೆ ವಿವಿಧ ಸಹಕಾರಿ ಸಂಸ್ಥೆಗಳ ಸಂಖ್ಯೆ 15000ಕ್ಕೂ ಹೆಚ್ಚಿತ್ತು. 1919ರಲ್ಲಿ ಭಾರತದಲ್ಲಿ ಮತ್ತೊಂದು ಸಹಕಾರಿ ಕಾಯಿದೆಯನ್ನು ಕಾರ್ಯರೂಪಕ್ಕೆ ತರಲಾಯಿತು. ಈ ಅವಧಿಯಲ್ಲಿ ಸಹಕಾರಿ

ಚಳುವಳಿಯು ಒಂದು ಹೊಸ ಘಟ್ಟವನ್ನು ಪ್ರವೇಶಿಸಿತು. ಇದರಿಂದಾಗಿ ಮುಂಬೈ, ತಮಿಳುನಾಡು, ಬಿಹಾರಗಳಲ್ಲಿ ಪ್ರತ್ಯೇಕವಾದ ಸಹಕಾರ ಸಂಸ್ಥೆಗಳ ಕಾನೂನುಗಳು ರೂಪುಗೊಂಡವು. 1930ರಲ್ಲಿ ಉಂಟಾದ ಆರ್ಥಿಕ ಮುಗ್ಗಟ್ಟು ಸಹಕಾರಿ ಚಳುವಳಿಗೆ ದೊಡ್ಡ ಪೆಟ್ಟು ಕೊಟ್ಟಿತು. ಈ ವರ್ಷದಲ್ಲಿ ವಿಶ್ವದ ಹಲವು ರಾಷ್ಟ್ರಗಳು ಬೆಲೆಗಳು ಇಳಿದಿದ್ದರ ಪರಿಣಾಮವಾಗಿ ಕಠಿಣ ಸ್ಥಿತಿಯನ್ನು ಎದುರಿಸಬೇಕಾಯಿತು. ಭಾರತವೂ ಇದಕ್ಕೆ ಹೊರತಾಗಲಿಲ್ಲ. ಕೃಷಿಕರು ಸಹಕಾರಿ ಸಂಸ್ಥೆಗಳಿಂದ ಪಡೆದ ಹಣವನ್ನು ಹಿಂದಿರುಗಿಸಲು ಅಸಮರ್ಥರಾದರು. ತತ್ಫಲವಾಗಿ ಅನೇಕ ಸಂಸ್ಥೆಗಳು ತಮ್ಮ ಕಾರ್ಯಗಳನ್ನು ಮುಂದುವರಿಸಲಾಗದೆ ಮುಚ್ಚಲ್ಪಟ್ಟವು. ಈ ಅವಧಿಯಲ್ಲಿ ಪ್ರತಿಶತ 24ರಷ್ಟು ಸಹಕಾರಿ ಸಂಸ್ಥೆಗಳು ದಿವಾಳಿ ತೆಗೆದವೆಂದು ಹೇಳಲಾಗಿದೆ. ಆದಾಗ್ಯೂ 1919–1930ರ ಕಾಲಾವಧಿಯಲ್ಲಿ ಸಹಕಾರಿ ಚಳುವಳಿಯ ಪ್ರಗತಿ ತೃಪ್ತಿಕರವಲ್ಲದಿದ್ದರೂ ಸಮಾಧಾನಕರವಾಗಿತ್ತು. 1935ರಲ್ಲಿ ನಮ್ಮ ದೇಶದಲ್ಲಿ ರಿಜರ್ವ್ ಬ್ಯಾಂಕ್ ಸ್ಥಾಪಿತವಾಯಿತು. ಆ ನಂತರ ಸಹಕಾರಿ ಚಳುವಳಿಗೆ ಹೊಸ ಚೈತನ್ಯ ಬಂದಿತು. 1937ರಲ್ಲಿ ಸಹಕಾರ ತತ್ವಗಳನ್ನು ಪ್ರಚಾರಗೊಳಿಸುವ ಸಂಪೂರ್ಣ ಹೊಣೆಯನ್ನು ರಾಜ್ಯಸರಕಾರಗಳಿಗೆ ಕೊಡಲಾಯಿತು. ಇದರಿಂದ ಚಳುವಳಿಯು ಯಶಸ್ವಿಯಾಗಿ ಮುನ್ನಡೆಯಲು ಕಾರಣವಾಯಿತು. ದ್ವಿತೀಯ ಮಹಾಯುದ್ಧ ಮತ್ತು ಅನಂತರದ ಪರಿಸ್ಥಿತಿಯು ಸಹಕಾರ ಚಳುವಳಿಗೆ ಹೊಸ ಹುರುಪನ್ನು ನೀಡಿತು. ಈ ಅವಧಿಯಲ್ಲಿ ಆಹಾರೋತ್ಪಾದನೆ, ಕೃಷಿ ಸಂಪತ್ತು, ಮಾರಾಟ, ಗ್ರಾಮಕೈಗಾರಿಕೆ, ವಸತಿನಿರ್ಮಾಣ ಇವೇ ಮೊದಲಾದ ಕಾರ್ಯಗಳು ಸಹಕಾರಿ ಚಳುವಳಿಯ ಚೌಕಟ್ಟಿನಲ್ಲಿ ಯಶಸ್ವಿಯಾಗಿ

ನಡೆದುವು. ಬೆಲೆಗಳು ಏರಿದ್ದರಿಂದಾಗಿ ರೈತರ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಿತು. 1930ರ ಆರ್ಥಿಕ ಮುಗ್ಗಟ್ಟಿನಿಂದಾಗಿ ದುಸ್ಥಿತಿಗೊಳಗಾಗಿದ್ದ ಅನೇಕ ಸಂಸ್ಥೆಗಳು ಈ ಅವಧಿಯಲ್ಲಿ ಚೇತರಿಸಿಕೊಂಡವು. ಸಂಸ್ಥೆಗಳಲ್ಲಿನ ಸದಸ್ಯರ ಸಂಖ್ಯೆ ಹೆಚ್ಚಿತು. ಯುದ್ಧಾವಶ್ಯಕ ಮತ್ತು ಜನತೆಯ ಬೇಡಿಕೆಗಳನ್ನು ಪೂರೈಸಲು ಸಹಕಾರಿ ತತ್ವಗಳ ಆಧಾರದ ಮೇಲೆ ಉತ್ಪಾದಕ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಯುದ್ಧಾನಂತರ ಸರಕಾರವು ಆಹಾರದ ಕೊರತೆ, ನಿರಾಶ್ರಿತರ ಪುನರ್ನಿವೇಶನ ಮುಂತಾದ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಆದ್ದರಿಂದ ಆಹಾರದ ಸಮನಾದ ಹಂಚಿಕೆ, ನಿರಾಶ್ರಿತರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿ ಕೊಡುವುದು ಇತ್ಯಾದಿ ಉದ್ದೇಶಗಳಿಗಾಗಿ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಆದಾಗ್ಯೂ ಪರಕೀಯರ ಆಡಳಿತ ಕಾಲದಲ್ಲಿ ಮಾಡಿದ ಈ ಎಲ್ಲಾ ಪ್ರಯತ್ನಗಳೂ ಹೆಚ್ಚಿನ ಪ್ರಗತಿಯನ್ನೇನೂ ಸಾಧಿಸಲಿಲ್ಲ. ಆದರೆ ಈ ಪ್ರಯತ್ನಗಳಿಂದ ಸಹಕಾರಿ ಚಳುವಳಿಯು ಹಾಗೂ ಹೀಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬರುವುದು ಸಾಧ್ಯವಾಯಿತು. ಭಾರತ ಸ್ವಾತಂತ್ರ್ಯಗಳಿಸಿದ ನಂತರ ಸಹಕಾರಿ ಚಳುವಳಿ ಸ್ವಯಂ ಸ್ಫೂರ್ತಿಯಿಂದ ಅಭಿವೃದ್ಧಿ ಹೊಂದಲಾರಂಭಿಸಿತು.

೬. ಪಂಚವಾರ್ಷಿಕ ಯೋಜನೆಗಳಲ್ಲಿ ಸಹಕಾರ ಚಳುವಳಿ

ಭಾರತ ಪುನರ್ನಿರ್ಮಾಣವಾಗಬೇಕಾದರೆ ಆರ್ಥಿಕ ಪ್ರಗತಿ ಮತ್ತು ಸಾಮಾಜಿಕ ಬದಲಾವಣೆಗಳನ್ನು ಸಾಧಿಸುವುದು ಮುಖ್ಯ.

ಈ ದಿಸೆಯಲ್ಲಿ ಆರ್ಥಿಕ ವ್ಯವಸ್ಥೆಯ ಮೂಲಭೂತ ಸ್ವಭಾವದಲ್ಲಿ ಬದಲಾವಣೆಯನ್ನು ತರಲು ಸಹಕಾರ ಒಂದು ಉತ್ತಮ ಹಾಗೂ ಪ್ರಧಾನ ಮಾರ್ಗವಾಗಿದೆ. ಆದ್ದರಿಂದಲೇ ಸ್ವಾತಂತ್ರ್ಯ ನಂತರದ ಮುಖ್ಯ ಕಾರ್ಯಕ್ರಮವಾದ ಆರ್ಥಿಕ ಪುನರ್ರಚನೆಯಲ್ಲಿ ಸರಕಾರ ಸಹಕಾರಕ್ಕೆ ಹೆಚ್ಚಿನ ಮಹತ್ವ ನೀಡಿತು. ಭಾರತ ಸ್ವಾತಂತ್ರ್ಯ ನಂತರ ಆರ್ಥಿಕ ಸಾಧನೆಗಾಗಿ, ಪ್ರಜಾಸತ್ತಾತ್ಮಕ ಯೋಜನಾ ವ್ಯವಸ್ಥೆಯನ್ನು ರಾಷ್ಟ್ರೀಯ ಬದುಕಿನ ಒಂದು ಅಂಗವಾಗಿ ಅಂಗೀಕರಿಸಿತು. ಆರ್ಥಿಕ ಅಭಿವೃದ್ಧಿಯ ಮೂಲಕ ಜನ ಜೀವನವನ್ನು ಮೇಲ್ಮಟ್ಟಕ್ಕೇರಿಸುವುದು ಈ ಯೋಜನೆಗಳ ಮೂಲ ಮತ್ತು ಅಂತಿಮ ಆಶಯ. ಪರಿಪೂರ್ಣವಾದ ಸಮಾಜರಚನೆ ಮತ್ತು ಸರ್ವರಿಗೂ ಉತ್ತಮಜೀವನದ ಸಮಾನ ಅವಕಾಶವನ್ನೊದಗಿಸುವ ಒಂದು ಸಾಮಾಜಿಕ ವ್ಯವಸ್ಥೆಯ ನಿರ್ಮಾಣ—ಇದು ಪಂಚವಾರ್ಷಿಕ ಯೋಜನೆಗಳ ಮೂಲೋದ್ದೇಶ. ಈ ಉದ್ದೇಶ ಸಾಧನೆಗೆ ಸಹಕಾರ ರಾಮಬಾಣವಿದ್ದಂತೆ. ಆದ್ದರಿಂದಲೇ 1951ರಿಂದ ಜಾರಿಗೆ ಬಂದ ಆರ್ಥಿಕ ಯೋಜನೆಗಳಲ್ಲಿ ಸಹಕಾರಿ ಚಳುವಳಿಗೆ ವಿಶೇಷ ಪ್ರಾಧಾನ್ಯತೆ ನೀಡಲಾಗಿದೆ. ಭಾರತದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಮಹತ್ವಪೂರ್ಣ ಅಭಿವೃದ್ಧಿ ಕಾರ್ಯಗಳಲ್ಲಿ ಗುರುತಿಸಬಹುದಾದ ಒಂದು ಅತಿಮುಖ್ಯ ಅಂಶವೆಂದರೆ ಯೋಜನೆಗಳಲ್ಲಿ ಸಹಕಾರಕ್ಕೆ ಕೊಟ್ಟಿರುವ ಸ್ಥಾನ. ನಮ್ಮ ದೇಶದಲ್ಲಿ 1904 ರಷ್ಟು ಹಿಂದೆಯೇ ಸಹಕಾರಿ ಚಳುವಳಿಯನ್ನು ಕೈಗೊಳ್ಳಲಾಯಿತಾದರೂ ಅದಕ್ಕೆ ಚೈತನ್ಯ ಬಂದುದು ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲೇ ಎನ್ನಬಹುದು. ಯೋಜನೆಗಳು ಪ್ರಜಾಪ್ರಭುತ್ವ ಹಾಗೂ ಸಮಾಜವಾದದ ನೀತಿಗಳ ಅಡಿಗಲ್ಲ ಮೇಲೆ ನಿಂತಿರುವುದರಿಂದ ನಮ್ಮ ದೇಶದಲ್ಲಿ ಮುಖ್ಯವಾಗಿ ಗ್ರಾಮಾಂತರ ಅಭಿ

ವೃದ್ಧಿ ಕಾರ್ಯಗಳಲ್ಲಿ ಸಹಕಾರಿ ಚಳುವಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ಪಂಚವಾರ್ಷಿಕ ಯೋಜನಾವಧಿಯಲ್ಲಿ ಸಹಕಾರಿ ಚಳುವಳಿ ಅನೇಕ ಉದ್ದೇಶಗಳನ್ನು ಹೊಂದಿದೆ. ಉದಾಹರಣೆಗೆ ಸಹಕಾರಿ ಸಾಲ ಯೋಜನೆಯನ್ನು ಪುನರ್ ವ್ಯವಸ್ಥೆಗೊಳಿಸಿ, ಬಲ ಗೊಳಿಸುವುದು, ಕೃಷಿ ಉತ್ಪನ್ನ ಮಾರಾಟ ಸಂಸ್ಕರಣದ ಸಾಮರ್ಥ್ಯ ವನ್ನು ಹೆಚ್ಚಿಸುವುದು, ಉಗ್ರಾಣ ಮಳಿಗೆಗಳ ನಿರ್ಮಾಣ ಹಾಗೂ ಅವುಗಳ ಸಂಗ್ರಹಣಾಶಕ್ತಿಯನ್ನು ಹೆಚ್ಚಿಸುವುದು, ಗ್ರಾಹಕರ ಸಂಸ್ಥೆಗಳನ್ನು ವಿಸ್ತರಿಸುವುದು, ಸಹಕಾರ ಬ್ಯಾಂಕಿಂಗ್, ವಿಮಾ ಯೋಜನೆ, ಶಿಕ್ಷಣ, ಸಾಗಣೆ ಸೌಕರ್ಯಗಳನ್ನು ಹೆಚ್ಚಿಸುವುದು ಇತ್ಯಾದಿ. ಸ್ವಾತಂತ್ರ್ಯಾನಂತರ ರಾಷ್ಟ್ರದ ಬಡ ರೈತರ ಉನ್ನತಿ ಗಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅನೇಕ ಸಮಿತಿಗಳು ವ್ಯಾಪಕವಾದ ಪರಿಶೀಲನೆ ನಡೆಸಿ, ಸಹಕಾರ ಚಳುವಳಿಯ ಬಗ್ಗೆ ರಚನಾತ್ಮಕ ಸಲಹೆಗಳನ್ನು ನೀಡಿದುವು. ಸುಮಾರು ನಲವತ್ತು ವರ್ಷಗಳ ಹಿಂದೆಯೇ ನಮ್ಮ ದೇಶದ ಗ್ರಾಮಾಂತರ ಸಾಲ ಪರಿ ಶೀಲನಾ ಸಮಿತಿಯು 'ಭಾರತದ ಭವಿಷ್ಯ ಸುಭದ್ರಗೊಳ್ಳಬೇಕಾದರೆ ಸಹಕಾರ ಸಂಸ್ಥೆಗಳಲ್ಲದೆ ಬೇರೆಮಾರ್ಗವೇ ಇಲ್ಲ' ಎಂದು ತನ್ನ ವರದಿಯನ್ನು ಸಲ್ಲಿಸಿತ್ತು. ಸ್ವಾತಂತ್ರ್ಯಾನಂತರ ಭಾರತದಲ್ಲಿ ಈ ಮಾತಿಗೆ ಹೆಚ್ಚಿನ ಪುಷ್ಟಿದೊರೆಯಿತು. ವಾಸ್ತವವಾಗಿ ಆರಂಭ ದಲ್ಲಿ ನಮ್ಮ ದೇಶದ ಸಹಕಾರ ಚಳುವಳಿ ಒಂದು ರೀತಿಯಲ್ಲಿ ಸರ ಕಾರದ ಚಳುವಳಿಯೇ ಆಗಿತ್ತು. ಇದು ಸಹಕಾರ ಚಳುವಳಿಯ ಮೂಲತತ್ವಕ್ಕೆ ವಿರೋದವಾದ್ದರಿಂದ ಸರಕಾರ ಆ ನಂತರ ಸಹ ಕಾರ ಚಳುವಳಿಯನ್ನು ಆದಷ್ಟು ಸ್ವಯಂ ಜನತಾ ಚಳುವಳಿಯ ನ್ನಾಗಿ ಮಾಡಲು ಅನೇಕ ಸುಧಾರಣೆಗಳನ್ನು ಕೈಗೊಂಡಿತು.

ಪ್ರಥಮ ಪಂಚವಾರ್ಷಿಕ ಯೋಜನೆ: ಪ್ರಥಮ ಪಂಚವಾರ್ಷಿಕ ಯೋಜನಾವಧಿಯಲ್ಲಿ ಸಹಕಾರವನ್ನು ಯೋಜಿತ ಆರ್ಥಿಕ ಕ್ರಿಯೆಯ ಮುಖ್ಯ ಉಪಕರಣವೆಂದು ಅಂಗೀಕರಿಸಲಾಯಿತು. ಉತ್ಪಾದನಾ ಉದ್ದೇಶಗಳಿಗೆ ಸಮರ್ಪಕವಾಗಿ ಸಾಲವನ್ನು ವಿತರಣೆ ಮಾಡುವಲ್ಲಿ ಸರಕಾರಕ್ಕಿಂತಲೂ ಸಹಕಾರವು ಸುಧಾರಿಸಿದ ಹಾಗೂ ಯೋಗ್ಯಸಾಧನವೆಂದು ಪರಿಗಣಿಸಲಾಯಿತು. ಪ್ರಥಮ ಪಂಚವಾರ್ಷಿಕ ಯೋಜನಾವಧಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಕ್ರಾಂತಿಯನ್ನೆಬ್ಬಿಸಿ ಜನರನ್ನು ಹಾಗೂ ಆ ಪ್ರದೇಶಗಳನ್ನು ಉತ್ತಮ ಮಟ್ಟಕ್ಕೇರಿಸಲು ಹೆಚ್ಚಿನ ಪ್ರಮಾಣದಲ್ಲಿ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಈ ಅವಧಿಯಲ್ಲಿ ಸಹಕಾರಿ ಚಳುವಳಿಯ ಪುನರ್ ವ್ಯವಸ್ಥೆ ಮತ್ತು ತೀವ್ರ ಅಭಿವೃದ್ಧಿಗಾಗಿ ಕ್ರಮಗಳನ್ನು ಕೈಗೊಳ್ಳಲಾಯಿತು. ಸಹಕಾರಿ ಸಂಸ್ಥೆಗಳು ಬೀಜ, ಗೊಬ್ಬರ, ಯಂತ್ರೋಪಕರಣಗಳನ್ನು ಸಾಲದ ರೂಪದಲ್ಲಿ ಸುಲಭಬೆಲೆಗೆ ರೈತರಿಗೆ ಒದಗಿಸುವಂತೆ ವ್ಯವಸ್ಥೆಮಾಡಲಾಯಿತು. ಅಭಿವೃದ್ಧಿಯ ಉದ್ದೇಶಗಳಿಗೆ ಸಹಕಾರ ಸಂಸ್ಥೆಗಳ ಮೂಲಕ ತಕಾವಿ ಸಾಲವನ್ನು ಹಂಚಲಾಯಿತು. ಈ ಅವಧಿಯಲ್ಲಿ ಸಹಕಾರ ಸಂಸ್ಥೆಗಳು ಸಾಲ ನೀಡಿಕೆಯ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡವು. ಈ ಯೋಜನೆಯಲ್ಲಿ ಶೇಕಡ 50ರಷ್ಟು ಹಳ್ಳಿಗಳನ್ನು ಹಾಗೂ ಶೇಕಡ 30 ರಷ್ಟು ಗ್ರಾಮವಾಸಿಗಳನ್ನು ಸಹಕಾರದ ವ್ಯಾಪ್ತಿಯಲ್ಲಿ ತರುವ ಎಲ್ಲಾ ಪ್ರಯತ್ನಗಳನ್ನೂ ಮಾಡಲಾಯಿತು. ಈ ಯೋಜನಾವಧಿಯಲ್ಲಿ ಸರಕಾರ ಮತ್ತು ಸಹಕಾರ ಸಂಸ್ಥೆಗಳು ಒಟ್ಟು 130 ಕೋಟಿ ರೂ. ಸಾಲ ಒದಗಿಸಿದುವು.

ಸಾಲದ ಹಂಚಿಕೆ ಪ್ರಥಮ ಯೋಜನೆಯಲ್ಲಿ ಕೆಳಕಂಡಂತೆ ಇದ್ದಿತು.

ಅಲ್ಪಾವಧಿ ಸಾಲ	100 ಕೋಟಿ ರೂ.
ಮಧ್ಯಮಾವಧಿ ಸಾಲ	25 ಕೋಟಿ ರೂ.
ದೀರ್ಘಾವಧಿ ಸಾಲ	5 ಕೋಟಿ ರೂ.

ಈ ಯೋಜನೆಯು ಸಹಕಾರಿ ಬೇಸಾಯ, ಮಾರುಕಟ್ಟೆ, ಸಂಸ್ಕರಣ ಇತ್ಯಾದಿಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಒದಗಿಸುವ ಬಗ್ಗೆ ಆದ್ಯತೆ ನೀಡಿತು. ಈ ಯೋಜನೆಯಲ್ಲಿ ವಾಸ್ತವವಾಗಿ 5.15 ಕೋಟಿ ರೂ. ಗಳನ್ನು ವೆಚ್ಚ ಮಾಡಲಾಯಿತು. ಆದರೆ ಮಾಡಿದ್ದ ವೆಚ್ಚದ ಅಂದಾಜು 6.16 ಕೋಟಿ ರೂ.

ಸಾಧನೆ: ಪ್ರಥಮ ಯೋಜನೆಯಲ್ಲಿ ಪ್ರಾಥಮಿಕ ಕೃಷಿ ಸಾಲ ಸಂಸ್ಥೆಗಳ ಸಂಖ್ಯೆಯು 1.15 ಲಕ್ಷದಿಂದ 1.59 ಲಕ್ಷಗಳಿಗೆ ಹೆಚ್ಚಿತು. ಸದಸ್ಯರ ಸಂಖ್ಯೆ 51.54 ಲಕ್ಷಗಳಿಂದ 77.91 ಲಕ್ಷಗಳಿಗೆ ಹೆಚ್ಚಿತು. ಈ ಅವಧಿಯಲ್ಲಿ ಸಹಕಾರ ಸಂಸ್ಥೆಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ತರಬೇತಿ ನೀಡಲು ಸಹಕಾರಿ ತರಬೇತಿಯ ಸಮಿತಿಯನ್ನು ಸ್ಥಾಪಿಸಲಾಯಿತು. ಮಹಾರಾಷ್ಟ್ರ, ತಮಿಳು ನಾಡು ಮುಂತಾದ ಕೆಲವು ರಾಜ್ಯಗಳಲ್ಲಿ ಸಹಕಾರಿ ಮಾರಾಟ ಹಾಗೂ ಸಂಸ್ಕರಣಗಳಲ್ಲಿ ಸ್ವಲ್ಪ ಮಟ್ಟಿಗೆ ಪ್ರಗತಿ ಕಂಡು ಬಂದಿತು.

1950–51ರಿಂದ 1955–56ರಲ್ಲಿ ಸಹಕಾರ ಸಂಸ್ಥೆಗಳ ಪ್ರಗತಿ

	1950–51	1955–56
1 ಪ್ರಾಥಮಿಕ ಕೃಷಿಸಾಲ ಸಂಸ್ಥೆಗಳ ಸಂಖ್ಯೆ	115.462	159.936
2 ಸದಸ್ಯರ ಸಂಖ್ಯೆ (ಲಕ್ಷಗಳಲ್ಲಿ)	51.54	77.91

3 ಗ್ರಾಮೀಣ ಜನಸಂಖ್ಯೆಯ ಶೇಕಡವಾರು	10.3	15.6
4 ಸಾಲದ ಹಂಚಿಕೆ (ಕೋಟಿ ರೂ. ಗಳಲ್ಲಿ)	22.90	50.16

ಮೂಲ :–Agricultural Problems of India· C. B. Memoria ಪುಟ. 574

ದ್ವಿತೀಯ ಪಂಚವಾರ್ಷಿಕ ಯೋಜನೆ: ದ್ವಿತೀಯ ಯೋಜನೆಯನ್ನು ಅಖಿಲಭಾರತ ಗ್ರಾಮೀಣ ಸಾಲ ಸಮಿತಿ ವರದಿಯ ಶಿಫಾರಸ್ಸಿನ ಆಧಾರದ ಮೇಲೆ ಸಾಲ, ಮಾರಾಟ ಹಾಗೂ ಸಂಸ್ಕರಣದ ಬಗ್ಗೆ ರೂಪಿಸಲಾಯಿತು. ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ರಚಿತವಾದ ಯೋಜನೆಗಳಿಗೆ ಸಹಕಾರವು ಮೂಲಾಧಾರವಾದ್ದರಿಂದ ದ್ವಿತೀಯ ಯೋಜನೆಯಲ್ಲಿ (1956–1961) ಸಹಕಾರಿ ಸಂಸ್ಥೆಗಳ ಚಟುವಟಿಕೆಗಳನ್ನು ವಿಸ್ತರಿಸಲಾಯಿತು. ದ್ವಿತೀಯ ಯೋಜನೆಯಲ್ಲಿ ಸಹಕಾರದ ಮಹತ್ವವನ್ನು ಕುರಿತು ಈ ರೀತಿ ಹೇಳಲಾಗಿದೆ "ಸಹಕಾರವು ಕೇವಲ ಆರ್ಥಿಕ ಚಟುವಟಿಕೆಗಳಿಗೆ ಆಧಾರವಾಗಿರದೆ, ಸಮಾಜದ ಎಲ್ಲಾ ಚಟುವಟಿಕೆಗಳಿಗೂ ಅನ್ವಯಿಸಬಹುದಾದ ಮುಖ್ಯ ವಿಷಯವಾಗಿದೆ." ಆದ್ದರಿಂದಲೇ ನರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಎಲ್ಲಾ ಸಂಸ್ಥೆಗಳೂ ಸಹಕಾರಿ ತತ್ವಗಳ ಮೇಲೆ ನಿರ್ಮಿಸಲ್ಪಡಬೇಕು ಎಂಬ ನೀತಿಯನ್ನು ಈ ಅವಧಿಯಲ್ಲಿ ರೂಪಿಸಲಾಯಿತು. ಈ ಅವಧಿಯಲಿ ಕೈಗೊಂಡ ಕಾರ್ಯಕ್ರಮಗಳೆಲ್ಲವೂ ಅಖಿಲ ಭಾರತ ಗ್ರಾಮೀಣ ಸಾಲ ಸಮೀಕ್ಷಾ ಸಮಿತಿಯ ಸಲಹೆಗಳ ಮೇರೆಗೆ ನಡೆದುವು. ಈ ಯೋಜನೆಯಲ್ಲಿ ಕೆಲವು ಗುರಿಗಳನ್ನು ಹೊಂದಲು ನಿರ್ಧರಿಸಲಾಯತು. ಆ ಗುರಿಗಳು ಕೆಳಕಂಡಂತಿದ್ದುವು.

	1955–56	1960–61
ಪ್ರಾಥಮಿಕ ಕೃಷಿಸಾಲ ಸಂಸ್ಥೆಗಳ ಸದಸ್ಯರ ಸಂಖ್ಯೆ.	5 ದಶಲಕ್ಷ.	15 ದಶಲಕ್ಷ.
ಅಲ್ಪಾವಧಿ ಸಾಲ.	30 ಕೋಟಿ ರೂ.	159 ಕೋಟಿ ರೂ.
ಮಧ್ಯಮಾವಧಿ ಸಾಲ.	10 ಕೋಟಿ ರೂ.	50 ಕೋಟಿ ರೂ.
ದೀರ್ಘಾವಧಿ ಸಾಲ.	3 ಕೋಟಿ ರೂ.	25 ಕೋಟಿ ರೂ.

ಆಧಾರ:–C. B. ಮೆಮೋರಿಯ Agricultural Problems of India ಪುಟ. 574

ಸಕ್ಕರೆ ಹಾಗೂ ಹತ್ತಿಯ ಸಹಕಾರಿ ಸಂಸ್ಕರಣಕ್ಕೆ ಉತ್ತೇಜನ ಕೊಡುವುದು, ಕೃಷಿ ಉತ್ಪನ್ನವನ್ನು ಸಂಗ್ರಹಿಸಲು ಗ್ರಾಮೀಣ ಉಗ್ರಾಣಗಳು ಹಾಗೂ ಮಾರುಕಟ್ಟೆ ಸಂಘಗಳ ಉಗ್ರಾಣಗಳನ್ನು ನಿರ್ಮಿಸುವುದು, ವಿವಿಧೋದ್ದೇಶ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡುವುದು, ತರಬೇತಿ ಸೌಲಭ್ಯಗಳನ್ನು ಹೆಚ್ಚಿಸುವುದು ಇತ್ಯಾದಿ ಗುರಿಗಳನ್ನು ಈ ಯೋಜನೆ ಒಳಗೊಂಡಿತ್ತು. ಈ ಅವಧಿಯಲ್ಲಿ ಸ್ಥಾಪಿಸಬೇಕಾಗಿದ್ದ ಮಾರಾಟ ಸಂಸ್ಥೆಗಳ ಸಂಖ್ಯೆ 1800. ಸಹಕಾರಿ ಸಕ್ಕರೆ ಕಾರ್ಖಾನೆಗಳು 35. ಕೇಂದ್ರ ಮತ್ತು ರಾಜ್ಯ ಸರಕಾರಗಳ ಮಾರುಕಟ್ಟೆಗಳು 350 ಹಾಗೂ ಮಾರಾಟ ಸಂಸ್ಥೆಗಳ ಉಗ್ರಾಣಗಳು 1500. ಇವುಗಳೊಂದಿಗೆ ಉತ್ಪಾದಕ ಹಾಗೂ ಇತರ ಸಹಕಾರಿ ಸಂಸ್ಥೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ವಿಶಿಷ್ಟ ಗುರಿಗಳನ್ನು ಇಟ್ಟುಕೊಳ್ಳಲಾಗಿತ್ತು. ಈ ಅವಧಿಯಲ್ಲಿ 34 ಕೋಟಿ ರೂ.ಗಳನ್ನು ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗಾಗಿ ವೆಚ್ಚ ಮಾಡಲಾಯಿತು. ಕೇಂದ್ರ ಸರಕಾರ ರಾಷ್ಟ್ರೀಯ ಸಹಕಾರ ವಿಕಾಸ ನಿಧಿಯನ್ನು ಸ್ಥಾಪಿಸಿತು. ಇದ

ರಿಂದ ರಾಜ್ಯಸರಕಾರಗಳು ಈ ನಿಧಿಯಿಂದ ಸಾಲ ತೆಗೆದುಕೊಂಡು ಅದನ್ನು ಸಾಲರಹಿತ ಸಂಸ್ಥೆಗಳ ಬಂಡವಾಳದಲ್ಲಿ ತೊಡಗಿಸಲು ಅನುಕೂಲವಾಯಿತು. ಸುವ್ಯವಸ್ಥಿತ ಆಡಳಿತಕ್ಕಾಗಿ ಪುಣೆ (Poona), ರಾಂಚಿ, ಮದರಾಸುಗಳಲ್ಲಿ ಸಹಕಾರಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಯಿತು. ರಾಷ್ಟ್ರೀಯ ಸಹಕಾರ ಉಗ್ರಾಣ ಮತ್ತು ಅಭಿವೃದ್ಧಿ ಮಂಡಲಿಯು ಇದೇ ಅವಧಿಯಲ್ಲಿ ಸ್ಥಾಪಿತವಾಯಿತು. ಈ ಮಂಡಲಿಗೆ ಕೃಷಿ ಉತ್ಪನ್ನಗಳ ಸಂಗ್ರಹಣ, ಸಂಸ್ಕರಣ ಮತ್ತು ಮಾರಾಟ ವ್ಯವಸ್ಥೆಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಕೈಗೊಳ್ಳಲು ಬೇಕಾದ ಜವಾಬ್ದಾರಿಯನ್ನು ವಹಿಸಿಕೊಡಲಾಯಿತು. ದ್ವಿತೀಯ ಯೋಜನಾವಧಿಯಲ್ಲಿ ಇಂಪೀರಿಯಲ್ ಬ್ಯಾಂಕು ರಾಷ್ಟ್ರೀಕರಣವಾಯಿತು. ಇದು 1961ರ ವೇಳೆಗೆ 438 ಶಾಖೆಗಳನ್ನು ಪ್ರಾರಂಭಿಸಿತು. ಆದರೆ ವಾಸ್ತವವಾಗಿ 400 ಶಾಖೆಗಳನ್ನು ತೆರೆಯುವ ಗುರಿ ಇದ್ದಿತು. ಈ ಯೋಜನೆಯಲ್ಲಿ ಗ್ರಾಮೀಣ ಸಾಲದ ಸೌಲಭ್ಯಗಳನ್ನು ಹೆಚ್ಚಿಸಲ ರಿಜರ್ವ್ ಬ್ಯಾಂಕಿನ ನಿಯಮಗಳನ್ನು ತಿದ್ದುಪಡಿ ಮಾಡಲಾಯಿತು ದ್ವಿತೀಯ ಯೋಜನೆಯಲ್ಲಿ ಸರಕಾರ ಬೃಹತ್ ಸಂಸ್ಥೆಗಳು ನಿರ್ಮಾಣ ಕಾರ್ಯವನ್ನು ಕೈಗೊಂಡಿತು. 1960-61ರ ವೇಳೆಗೆ 10,400 ಬೃಹತ್ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸುವ ಗುರಿ ಇದ್ದಿತು. ದ್ವಿತೀಯ ಯೋಜನೆಯ ಕೊನೆಗೆ ದೇಶದಲ್ಲಿ ಒಟ್ಟು 3,32,488 ವಿವಿಧ ಸಹಕಾರಿ ಸಂಸ್ಥೆಗಳು ಹಲವು ರೀತಿಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಸಹಾಯ ನೀಡಿದುವು. 1960-61ರಲ್ಲಿ ಪ್ರಾಥಮಿಕ ಸಾಲ ಸಂಸ್ಥೆಗಳು ಸುಮಾರು 202 ಕೋಟಿ ರೂಪಾಯಿಗಳ ಸಾಲ ಒದಗಿಸಿದುವು. ಅಂದರೆ ಪ್ರತಿಯೊಬ್ಬ ರೈತನಿಗೆ ಸರಾಸರಿ ಸಾಲದ ಹಣ 119 ರೂಪಾಯಿ

ಗಳಷ್ಟು ಇದ್ದಿತು. ಈ ಯೋಜನಾವಧಿಯಲ್ಲಿ 18,000 ಪ್ರಾಥಮಿಕ ಮಾರುಕಟ್ಟೆ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. 4100 ಗ್ರಾಮೀಣ ಉಗ್ರಾಣಗಳ ಪುನರ್ ನಿರ್ಮಾಣಕ್ಕೆ, 1668 ಮಂಡಿ ಮಟ್ಟದ ಉಗ್ರಾಣಗಳಿಗೆ ಸಹಾಯಧನ ನೀಡಲಾಯಿತು.

1955-56ರಿಂದ 1960-61ರ ಅವಧಿಯಲ್ಲಿ ಉಂಟಾದ ಪ್ರಗತಿಯನ್ನು ಕೆಳಗಿನ ಪಟ್ಟಿ ಸ್ಪಷ್ಟ ಪಡಿಸುತ್ತದೆ.

	1955-56	1960-61
1 ಸಂಸ್ಥೆಗಳ ಸಂಖ್ಯೆ (ಲಕ್ಷಗಳಲ್ಲಿ)	2.40	3.32
2 ಪ್ರಾಥಮಿಕ ಸಂಘಗಳ ಸದಸ್ಯರ ಸಂಖ್ಯೆ (ಲಕ್ಷಗಳಲ್ಲಿ)	176	342
3 ಷೇರು ಬಂಡವಾಳ (ಕೋಟಿ ರೂ. ಗಳಲ್ಲಿ)	77	221
4 ಪ್ರಾಥಮಿಕ ಸಹಕಾರಿ ಸಂಸ್ಥೆಗಳು ಮಂಜೂರು ಮಾಡಿದ ಸಾಲ (ಕೋಟಿ ರೂ. ಗಳಲ್ಲಿ)	50	203

ಈ ರೀತಿ ದ್ವಿತೀಯ ಯೋಜನಾವಧಿಯಲ್ಲಿ ಸಹಕಾರಿ ಚಳುವಳಿಯು ಎಲ್ಲಾ ಕ್ಷೇತ್ರಗಳಲ್ಲೂ ಗಣನೀಯ ಪ್ರಗತಿ ಸಾಧಿಸಿತು.

ಮೂಲ :–Agricultural Problems of India. C. B. Memoria. ಪುಟ.577

ತೃತೀಯ ಪಂಚವಾರ್ಷಿಕ ಯೋಜನೆ: ತೃತೀಯ ಯೋಜನೆಯ ಪ್ರಕಾರ "ಪ್ರಜಾಪ್ರಭುತ್ವ ಹಾಗೂ ಸಮಾಜವಾದಕ್ಕೆ ಹೊಣೆಯಾದ ಯೋಜಿತ ಅರ್ಥವ್ಯವಸ್ಥೆಯಲ್ಲಿ ಅದರಲ್ಲೂ ಕೃಷಿಗೆ ಸಂಬಂಧಪಟ್ಟ ಹಲವಾರು ಆರ್ಥಿಕ ಜೀವನ ವಿಭಾಗಗಳಲ್ಲಿ ಸಹಕಾರವು ಮುಖ್ಯ ಸಂಘಟನೆಯ ತಳಹದಿಯಾಗುತ್ತದೆ." ಈ

ಯೋಜನೆಯಲ್ಲೂ ಕೃಷಿ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟಿದ್ದರಿಂದ ಸಹಕಾರಿ ಕ್ಷೇತ್ರ ವಿಶಿಷ್ಟ ಸ್ಥಾನ ಪಡೆಯಿತು. ಅಭಿವೃದ್ಧಿ ಕಾರ್ಯಗಳ ಯಶಸ್ಸಿಗೆ ಸಹಕಾರ ಮುಖ್ಯ ಸಾಧನ ವೆನ್ನುವುದು ಈ ಯೋಜನೆಯಲ್ಲಿ ಮನದಟ್ಟಾಯಿತು. ಈ ಅವಧಿಯಲ್ಲಿ ಸಮಾಜವಿಕಾಸ ಕಾರ್ಯಗಳಲ್ಲಿ ಸಹಕಾರ ಸಂಸ್ಥೆಗಳು ಮಹತ್ವದ ಪಾತ್ರವಹಿಸಬೇಕೆಂದು ಸ್ಪಷ್ಟಪಡಿಸ ಲಾಯಿತು. ಈ ಅವಧಿಯಲ್ಲಿ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಯನ್ನು ಸಹಕಾರಿ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯತಿ ಗಳು ವಹಿಸಿಕೊಂಡುವು. ಸಹಕಾರದ ಸಾಮಾನ್ಯ ಅಭಿ ವೃದ್ಧಿಗಾಗಿ 80 ಕೋಟಿ ರೂಪಾಯಿಗಳನ್ನು ಈ ಅವಧಿಯಲ್ಲಿ ಮೀಸಲಾಗಿಡಲಾಗಿತ್ತು. ಉತ್ಪಾದನೆಯನ್ನು ಹೆಚ್ಚಿಸಲು ಸಹ ಕಾರಿ ಬೇಸಾಯಕ್ಕೆ ಆದ್ಯತೆ ನೀಡಲಾಯಿತು. ಈ ಅವಧಿಯಲ್ಲಿ ಸಹಕಾರ ಸಂಸ್ಥೆಗಳು ಹಾಗೂ ಅವುಗಳ ಸದಸ್ಯರ ಸಂಖ್ಯೆ ಗಣ ನೀಯವಾಗಿ ಹೆಚ್ಚಿತು. ಈ ಯೋಜನೆಯಲ್ಲಿ ಕೃಷಿ ಸಾಲ ವ್ಯವ ಹಾರಗಳನ್ನು ನೋಡಿಕೊಳ್ಳಲು ರಾಷ್ಟ್ರೀಯ ಸಹಕಾರಾಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಇದರ ಮುಖ್ಯಕೆಲಸ ಕೃಷಿ ಸಾಲದ ಚಟುವಟಿಕೆಗಳ ಬಗ್ಗೆ ಪರಿಶೀಲನೆ ನಡೆಸಿ, ರೈತರಿಗೆ ಅಗತ್ಯವಾಗಿ ಬೇಕಾದ ಸಾಲ ಹಾಗೂ ಸಾಧನ ಸಾಮಗ್ರಿಗಳನ್ನು ಸಕಾಲದಲ್ಲಿ ಪೂರೈಸಲು ಸಹಕಾರ ಸಂಸ್ಥೆಗಳಿಗೆ ಆದೇಶನೀಡುವುದು. ಜೊತೆಗೆ ವಿವಿಧ ರೀತಿಯ ಸಹಕಾರಿ ಸಂಸ್ಥೆಗಳನ್ನು ವ್ಯವಸ್ಥೆಗೊಳಿಸಿ ಜನತೆಯ ಮೂಲ ಹಾಗೂ ಸಾಮಾನ್ಯ ಬೇಡಿಕೆಗಳನ್ನು ಪೂರೈಸಲು ಅನೇಕ ಪ್ರಯತ್ನಗಳನ್ನು ಕೈಗೊಳ್ಳಲಾಯಿತು. ತೃತೀಯ ಯೋಜನೆಯಲ್ಲಿ ಸಹಕಾರಿ ಸಂಸ್ಥೆಗಳ ಮೂಲಕ

ಕೊಡುವ ಅಲ್ಪಾವಧಿ ಸಾಲವನ್ನು 530 ಕೋಟಿ ರೂ.ಗಳಿಗೂ, ದೀರ್ಘಾವಧಿ ಸಾಲವನ್ನು 150 ಕೋಟಿ ರೂ.ಗಳಿಗೂ ಏರಿಸಬೇಕೆಂಬ ಗುರಿ ಇದ್ದಿತು. ಆದರೆ ಸಾಲದ ಸಂಸ್ಥೆಗಳು ಈ ಅವಧಿಯಲ್ಲಿ 341.65 ಲಕ್ಷರೂ.ಗಳ ಅಲ್ಪಾವಧಿ ಹಾಗೂ ಮಧ್ಯಮಾವಧಿ ಸಾಲಗಳನ್ನೂ, 163.23 ಕೋಟಿ ರೂಗಳ ದೀರ್ಘಾವಧಿ ಸಾಲವನ್ನೂ ಪೂರೈಸಿದುವು. ಈ ಅವಧಿಯಲ್ಲಿ ಮಾರಾಟದ ಸಹಕಾರಿ ಸಂಸ್ಥೆಗಳು ಸುಮಾರು 400 ಕೋಟಿ ರೂ.ಗಳ ದವಸ ಧಾನ್ಯಗಳನ್ನು ಮಾರಾಟ ಮಾಡುವ ಗುರಿ ಇತ್ತು. ಗ್ರಾಹಕರ ಸಂಸ್ಥೆಗಳು, ಕೈಗಾರಿಕೆಗಳಲ್ಲಿ ಸಹಕಾರ, ಮನೆಕಟ್ಟುವಿಕೆ ಇತ್ಯಾದಿಗಳಿಗೆ ಪ್ರಾಮುಖ್ಯತೆ ಕೊಡಲಾಯಿತು. ತೃತೀಯ ಯೋಜನಾವಧಿಯಲ್ಲಿ ಸಹಕಾರಿ ಬೇಸಾಯ ಸಂಸ್ಥೆಗಳ ಸ್ಥಾಪನೆಗೆ ಹೆಚ್ಚು ಪ್ರೋತ್ಸಾಹ ಕೊಡಲಾಯಿತು. ಸಹಕಾರಿ ಸಂಸ್ಕರಣ ಸಂಸ್ಥೆಗಳಿಗೂ ಮತ್ತು ಗ್ರಾಹಕರ ಸಂಸ್ಥೆಗಳಿಗೂ ಉತ್ತೇಜನ ನೀಡಲಾಯಿತು. ಔದ್ಯೋಗಿಕ ಸಂಸ್ಥೆಗಳ ಸ್ಥಾಪನೆಗೂ ಯೋಗ್ಯ ವಾತಾವರಣವನ್ನು ಕಲ್ಪಿಸಿಕೊಡಲಾಯಿತು. 1960-61ರಲ್ಲಿ 30,000 ಔದ್ಯೋಗಿಕ ಸಹಕಾರಿ ಸಂಸ್ಥೆಗಳಿದ್ದುದು 1965-66ರ ವೇಳೆಗೆ 40,000ಕ್ಕೆ ಹೆಚ್ಚಿತು. ಈ ಯೋಜನೆಯಲ್ಲಿ ಸಹಕಾರಿ ತತ್ವವನ್ನು ಉತ್ಪಾದನೆಯ ವಿವಿಧ ಕ್ಷೇತ್ರಗಳಿಗೆ ವಿಸ್ತರಿಸಲಾಯಿತು. ಸಾಲ ಸಂಸ್ಥೆಗಳು ನೀಡಿದ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲದ ಮೊತ್ತವು 1965-66ರ ವೇಳೆಗೆ 400 ಕೋಟಿ ರೂಪಾಯಿಗಳಿಗೆ ಏರಿತು. ದೀರ್ಘಾವಧಿ ಸಾಲದ ಮೊತ್ತದಲ್ಲಿ ಕೂಡ ಹೆಚ್ಚಳ ಕಂಡು ಬಂದಿತು. 1965ರ ಜೂನ್ ತಿಂಗಳ ಕೊನೆಗೆ 2231 ಸಹಕಾರಿ ಮಾರಾಟ ಸಂಸ್ಥೆಗಳು ಸ್ಥಾಪಿಸಲ್ಪಟ್ಟವು. 1960-61ರಲ್ಲಿ ಈ ಸಂಸ್ಥೆಗಳ ಮೂಲಕ ಮಾರಾ

ಟವಾದ ಉತ್ಪತ್ತಿಯ ಮೌಲ್ಯ 174 ಕೋಟಿ ರೂಪಾಯಿಗಳಿದ್ದುದು 1964–65ರ ವೇಳೆಗೆ 301 ಕೋಟಿ ರೂಪಾಯಿಗಳಿಗೆ ಏರಿತು. ದೇಶದ ವಿವಿಧ ಆರ್ಥಿಕ ಚಟುವಟಿಕೆಗಳು ಸಹಕಾರಿ ಕ್ಷೇತ್ರಕ್ಕೊಳಪಟ್ಟು ಸದಸ್ಯರ ಹಾಗೂ ಜನಸಾಮಾನ್ಯರ ಕಲ್ಯಾಣ ಸಾಧಿಸಬೇಕಾದರೆ ಯೋಗ್ಯಶಿಕ್ಷಣ ಮತ್ತು ತರಬೇತಿ ಅಗತ್ಯ. ಈ ದೃಷ್ಟಿಯಿಂದ 1966ರ ಕೊನೆಗೆ ಸುಮಾರು 38,665 ಮೇಲ್ದರ್ಜೆಯ ಹಾಗೂ ಕೆಳದರ್ಜೆಯ ಅಧಿಕಾರಿಗಳಿಗೆ ತರಬೇತಿ ಕೊಡಲಾಯಿತು.

ಮೂರನೆ ಯೋಜನೆಯಲ್ಲಿ ಸಹಕಾರಿ ಕ್ಷೇತ್ರದಲ್ಲಿ ನಿರ್ಧರಿಸಿದ ಗುರಿಗಳು ಹೀಗಿತ್ತು.

	1960–61ರ ಅಂತ್ಯದಲ್ಲಿ ಇದ್ದುದು	1965–66ರ ಗುರಿ
ಪ್ರಾಥಮಿಕ ಸಹಕಾರಿ ಸಂಸ್ಥೆಗಳ ಸಂಖ್ಯೆ.	2.1 ಲಕ್ಷ.	2.3 ಲಕ್ಷ.
ಸದಸ್ಯರ ಸಂಖ್ಯೆ.	1.7 ಕೋಟಿ.	3.7 ಕೋಟಿ.
ಸಹಕಾರಿ ಸಂಸ್ಥೆಗಳ ಮೂಲಕ ಕೊಡಬೇಕಾದ ಅಲ್ಪಾವಧಿ ಹಾಗೂ ಮಧ್ಯಮಾವಧಿ ಸಾಲ.	208 ಕೋಟಿ.	530 ಕೋಟಿ.
ಸಹಕಾರಿ ಸಂಸ್ಥೆಗಳ ಮೂಲಕ ಕೊಡಬೇಕಾದ ದೀರ್ಘಾವಧಿ ಸಾಲ.	37 ಕೋಟಿ.	150 ಕೋಟಿ.
ಸೇವಾ ಸಹಕಾರ ಸಂಸ್ಥೆಗಳು ಹೊಸ ಸಂಘಟನೆಯ ಮೂಲಕ		28750
ಚಾಲ್ತಿಯಲ್ಲಿರುವ ಸಂಸ್ಥೆಗಳನ್ನು ಪುನರ್ ಘಟಿಸುವ ಮೂಲಕ		52180
ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು		265

ಹೊಸ ಮಾರುಕಟ್ಟೆಗಳ ಸಂಘಟನೆ	600
ಮಾರುಕಟ್ಟೆ ಸಂಸ್ಥೆಗಳ ಉಗ್ರಾಣಗಳು	900
ಗ್ರಾಮೀಣ ಉಗ್ರಾಣಗಳು	9200
ಸಹಕಾರಿ ಸಕ್ಕರೆ ಕಾರ್ಖಾನೆಗಳು	25
ಇತರೆ ಸಂಸ್ಕರಣ ಸಂಸ್ಥೆಗಳು	783
ಸಹಕಾರಿ ಬೇಸಾಯ ಸಂಸ್ಥೆಗಳು	3200

ಮೂಲ :—C. B. Memoria Agricultural Problems of India.—ಪುಟ. 584

ತೃತೀಯ ಯೋಜನೆಯ ಅಂತ್ಯದ ವೇಳೆಗೆ ಶೇಕಡ 89ರಷ್ಟು ಹಳ್ಳಿಗಳನ್ನು ಪ್ರಾಥಮಿಕ ಕೃಷಿ ಸಾಲ ಸಂಸ್ಥೆಗಳು ಹಮ್ಮಿಕೊಂಡಿದ್ದುವು. ಒಟ್ಟು 191904 ಸಂಸ್ಥೆಗಳಿದ್ದು, ಇವುಗಳ ವಿಸ್ತರಣೆಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಲಾಯಿತು. ಈ ಯೋಜನಾವಧಿಯಲ್ಲಿ ಎಲ್ಲಾ ಬಗೆಯ ಕೃಷಿ ಸಾಲ ಸಂಸ್ಥೆಗಳ ಒಟ್ಟು ಸದಸ್ಯರ ಸಂಖ್ಯೆ 26.1 ದಶಲಕ್ಷವಿತ್ತು. ಈ ಅವಧಿಯಲ್ಲಿ ಸಹಕಾರಿ ಸಂಸ್ಕರಣ ಕ್ಷೇತ್ರದಲ್ಲಿ 582 ಘಟಕಗಳನ್ನು ಸ್ಥಾಪಿಸಲಾಯಿತು. ಇದರ ಜೊತೆಗೆ 78 ಸಹಕಾರಿ ಸಕ್ಕರೆ ಕಾರ್ಖಾನೆಗಳು, 155 ಹತ್ತಿಬೀಜ ಬೇರ್ಪಡಿಸುವ ಸಂಸ್ಥೆಗಳು, 329 ಬತ್ತ ಕುಟ್ಟುವ ಸಂಸ್ಥೆಗಳು, 142 ಹತ್ತಿಗಿರಣಿಗಳು, 298 ಎಣ್ಣೆ ಹಿಂಡುವ ಸಂಸ್ಥೆಗಳು, ಹಾಗೂ 22 ಹಣ್ಣು ಮತ್ತು ತರಕಾರಿ ಸಂಸ್ಥೆಗಳು ಇದ್ದುವು. 1960–61ರಲ್ಲಿ ಸಹಕಾರಿ ಅಂಗಡಿಗಳ ಸಂಖ್ಯೆ 7058 ಇದ್ದುದು 1965–66ರ ವೇಳೆಗೆ 13077ಕ್ಕೆ ಹೆಚ್ಚಿತು. ಇವುಗಳ ಸದಸ್ಯರ ಸಂಖ್ಯೆ 13.41 ಲಕ್ಷಗಳಿಂದ 29.30 ಲಕ್ಷಗಳಿಗೆ ಹೆಚ್ಚಿತು. ಈ ಸಂಸ್ಥೆಗಳು ಮಾರಾಟ ಮಾಡಿದ ಉತ್ಪನ್ನ 44 ಕೋಟಿ ರೂ. ಗಳಿಂದ 198 ಕೋಟಿ ರೂ. ಗಳಿಗೆ ಹೆಚ್ಚಿತು.

ಚತುರ್ಥ ಪಂಚವಾರ್ಷಿಕ ಯೋಜನೆ : ನಾಲ್ಕನೆಯ ಪಂಚವಾರ್ಷಿಕ ಯೋಜನೆಯು ವಾಸ್ತವವಾಗಿ 1966ರಲ್ಲಿ ಕಾರ್ಯರೂಪಕ್ಕೆ ಬರಬೇಕಾಗಿದ್ದುದು ಕೆಲವು ಅನಿವಾರ್ಯ ಕಾರಣಗಳಿಂದ ಕಾರ್ಯರೂಪಕ್ಕೆ ಬರಲು ಸಾಧ್ಯವಾಗದೆ ವಾರ್ಷಿಕ ಯೋಜನೆಗಳಿಗೆ ಎಡೆಮಾಡಿಕೊಟ್ಟಿತು. ಈ ಯೋಜನೆಗಳ ಅವಧಿಯಲ್ಲಿ ಕೃಷಿರಂಗದ ಮೇಲೆ 1624 ಕೋಟಿ ರೂ. ಗಳನ್ನು ವೆಚ್ಚ ಮಾಡಲಾಯಿತಲ್ಲದೆ ಕೃಷಿಯ ಅಭಿವೃದ್ಧಿಗೆ ಒಳ್ಳೆಯ ತಳಹದಿಯನ್ನು ಹಾಕಲಾಯಿತು. 1967–68ನೆಯ ವಾರ್ಷಿಕ ಯೋಜನೆಯಲ್ಲಿ ಸಹಕಾರಿ ಸಂಸ್ಥೆಗಳು ಕೃಷಿ ಅಭಿವೃದ್ಧಿಗೆ 159 ಕೋಟಿ ರೂ. ಗಳನ್ನು ವೆಚ್ಚ ಮಾಡಿದುವು. ಆ ವರ್ಷ 85 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಹೆಚ್ಚು ಇಳುವರಿ ತಳ ಕೊಡುವ ಬೆಳೆಗಳನ್ನು ಬೆಳೆಯಲಾಯಿತು. 1969ರ ಏಪ್ರಿಲ್ ಒಂದರಿಂದ ಚತುರ್ಥ ಯೋಜನೆಯು ಅನುಷ್ಠಾನಕ್ಕೆ ಬಂದಿತು. ಈ ಯೋಜನೆಯನ್ನು ಭಾರತದ ಆರ್ಥಿಕ ವಿಕಾಸದ ಇತಿಹಾಸದಲ್ಲಿ ಅತ್ಯಂತ ಮಹತ್ವದ ಹಾಗೂ ದಿಟ್ಟ ಹೆಜ್ಜೆ ಎನ್ನಬಹುದು. ಈ ಯೋಜನೆಯು ಒಂದು ಬೃಹತ್ ಯೋಜನೆಯಾಗಿದ್ದು, ಅದರ ಗಾತ್ರದಷ್ಟೇ ಗುರಿಗಳು ಭಾರಿಯಾಗಿದ್ದುವು. ಕೃಷಿ ಕ್ಷೇತ್ರದ ಬೆಳವಣಿಗೆಗೆ ಈ ಯೋಜನೆಯಲ್ಲಿ ಆದ್ಯತೆ ನೀಡಲಾಯಿತು. ಕೃಷಿಯ ವಿಸ್ತರಣೆ, ಆಹಾರದ ಬೆಳೆಗಳ ಅಭಿವೃದ್ಧಿ ಹಾಗೂ ಸಣ್ಣ ರೈತರ ಕಡೆ ಹೆಚ್ಚಿನ ಗಮನ ನೀಡಲಾಯಿತು. ಈ ಅವಧಿಯಲ್ಲಿ ರೈತರಿಗೆ ಸಾಕಷ್ಟು ನೀರಿನ ಅನುಕೂಲತೆ, ಉತ್ತಮ ಬೀಜಗಳು, ಗೊಬ್ಬರ ಮತ್ತು ಸಾಲಗಳನ್ನು ಸಕಾಲದಲ್ಲಿ ಒದಗಿಸಲಾಯಿತು. ನವೀನ ರೀತಿಯ ಬೆಳೆಯನ್ನು ಬೆಳೆಯುವ ವಿಧಾನಕ್ಕೆ ಬೇಕಾಗಿರುವ ಯಂತ್ರೋಪಕರಣಗಳನ್ನು ಪೂರೈಸಲಾಯಿತು. ರೈತರ ಮನವೊಲಿಸಿ ಅವರು ಹೆಚ್ಚು ಬೆಳೆ ಬೆಳೆಯಲು ಉತ್ತೇಜನ

ಕೊಡಲಾಯಿತು. ಕೃಷಿ ಸಹಕಾರ ಸಂಸ್ಥೆಗಳಿಗೆ ಮತ್ತು ಗ್ರಾಹಕರ ಸಹಕಾರ ಸಂಸ್ಥೆಗಳಿಗೆ ಸಹಕಾರಿ ಅಭಿವೃದ್ಧಿಯ ಕಾರ್ಯ ನಿರ್ವಹಣೆಯಲ್ಲಿ ವಿಶಿಷ್ಟ ಸ್ಥಾನ ಕೊಡಲಾಯಿತು. ಈ ಯೋಜನೆ ಯಲ್ಲಿ ಕೃಷಿ ರಂಗದಲ್ಲಿ 5.59% ಹೆಚ್ಚಳ ಪಡೆಯಬೇಕೆಂದು ಅಂದಾಜು ಮಾಡಿದ್ದು, ಇದು ಈ ಯೋಜನೆಯ ಅತಿ ಮುಖ್ಯ ಗುರಿಯಾಗಿತ್ತು. ಈ ಅವಧಿಯಲ್ಲಿ ಸಹಕಾರದ ಅಭಿವೃದ್ಧಿಗೆ ವಿಶೇಷ ಗಮನ ಕೊಡಲಾಗಿದ್ದು, ಸಹಕಾರ ಸಂಸ್ಥೆಗಳು ಯೋಜಕರು ಗೊತ್ತುಪಡಿಸಿದ 129 ದಶಲಕ್ಷ ಟನ್ ಆಹಾರ ಧಾನ್ಯಗಳನ್ನು ಪಡೆಯಲು ಶ್ರಮಿಸುವುದರೊಂದಿಗೆ ಮಹತ್ತರ ವಾದ ಪಾತ್ರ ವಹಿಸಿದುವು. ಸಹಕಾರ ಸಂಸ್ಥೆಗಳು, ಭೂ ಅಭಿವೃದ್ಧಿ ಬ್ಯಾಂಕುಗಳು, ತಮ್ಮ ನಿಯಮಗಳನ್ನು ಸಣ್ಣ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಬದಲಾಯಿಸಿದುವು. ಈ ಅವಧಿ ಯಲ್ಲಿ ಸಣ್ಣ ರೈತರಿಗೆ ಸಾಲ, ಉಪಕರಣಗಳನ್ನು ಒದಗಿಸಲು ಸರಕಾರ ಸಹಕಾರಿ ಬ್ಯಾಂಕುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸಹಾಯಧನ ನೀಡುವುದರೊಂದಿಗೆ ಸಹಕಾರದ ಅಭಿವೃದ್ಧಿಗೆ 690 ಕೋಟಿ ರೂ. ಗಳನ್ನು ವೆಚ್ಚಮಾಡಿತು. 1960–61ರಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು (ಕೇಂದ್ರ ಮತ್ತು ಪ್ರಾಥಮಿಕ ಶಾಖೆ ಗಳು) 12ಕೋಟಿ ರೂ.ಗಳ ಸಾಲವನ್ನೂ, 1965–66ರ ವೇಳೆಗೆ 58 ಕೋಟಿ ರೂ. ಗಳನ್ನು ನೀಡಿದ್ದವು. ಆದರೆ 1973–74ರ ಹೊತ್ತಿಗೆ ಈ ಪ್ರಮಾಣ 173ಕೋಟಿ ರೂ. ಗಳಿಗೆ ಏರಿತು. ಈ ಅವಧಿಯಲ್ಲಿ ಶೇಕಡ 90ರಷ್ಟು ಹಳ್ಳಿಗಳನ್ನು, ಶೇಕಡ 60ರಷ್ಟು ಗ್ರಾಮವಾಸಿಗಳನ್ನು ಸಹಕಾರದ ವ್ಯಾಪ್ತಿಯಲ್ಲಿ ತರಲು ಶ್ರಮಿಸ ಲಾಯಿತು. ಈ ಯೋಜನೆಯಲ್ಲಿ ಸಹಕಾರ ಸಂಸ್ಥೆಗಳು ಗ್ರಾಮಾಂತರ ಪ್ರದೇಶಗಳಲ್ಲಿನ ಕೃಷಿಯ ಅದಕ್ಷತೆ ಮತ್ತು ಕಡಿಮೆ

ಉತ್ಪಾದನೆಯನ್ನು ನಿರ್ಮೂಲನಗೊಳಿಸಲು ರೈತರಿಗೆ ಬೇಕಾದ ಅಗತ್ಯಗಳನ್ನು ಸುಲಭ ದರದಲ್ಲಿ ಒದಗಿಸಿದುವು. ಇದು ಕೃಷಿ ಕ್ರಾಂತಿಯ ಯಶಸ್ಸಿಗೆ ಮುಖ್ಯ ಕಾರಣವಾಯಿತು. ಈ ಯೋಜನಾವಧಿಯಲ್ಲಿ ಸಹಕಾರ ಸಂಸ್ಥೆಗಳು 650 ಕೋಟಿ ರೂ. ಗಳ ಗೊಬ್ಬರ ಹಾಗೂ 115 ಕೋಟಿ ರೂ. ಗಳ ಇತರ ಸಾಮಗ್ರಿ ಗಳನ್ನು ರೈತರಿಗೆ ಹಂಚುವ ಅಂದಾಜಿತ್ತು.

ನಾಲ್ಕನೇ ಯೋಜನಾವಧಿಯಲ್ಲಿ ಸಹಕಾರಿ ಕ್ಷೇತ್ರದ ಉದ್ದೇಶಗಳು ಹೀಗಿದ್ದುವು.

1 ಪ್ರಾಥಮಿಕ ಸಾಲ ಸಂಸ್ಥೆಗಳನ್ನು ಪುನರ್‌ಘಟಿಸುವುದು.

2 ಬಲಹೀನವಾದ ಜಿಲ್ಲಾ ಹಾಗೂ ಕೇಂದ್ರ ಸಹಕಾರಿ ಬ್ಯಾಂಕು ಗಳನ್ನು ಪುನರ್‌ಘಟಿಸುವುದು.

3 ಪ್ರಾಥಮಿಕ ಸಂಸ್ಥೆಗಳಿಗೆ ಅಪೆಕ್ಸ್ ಬ್ಯಾಂಕ್‌ಗಳಿಂದ ನೇರವಾಗಿ ಹಣಕಾಸಿನ ನೆರವನ್ನು ಒದಗಿಸುವುದು.

4 ಸುಸ್ತಿ ಬಾಕಿಗಳನ್ನು ಕಡಿಮೆ ಮಾಡುವುದು.

5 ಕೃಷಿ ಸಾಲ ಸ್ಥಿರತೆಯ ನಿಧಿಯನ್ನು ಬಲಪಡಿಸುವುದು.

6 ತರಬೇತಿ ಹೊಂದಿದ ದಕ್ಷ ಸಿಬ್ಬಂದಿಯನ್ನು ಪ್ರಾಥಮಿಕ ಸಂಸ್ಥೆಗಳ ಮೇಲ್ವಿಚಾರಣೆಗೆ ಒಳಪಡಿಸುವುದು.

7 ಠೇವಣಿಗಳ ಸಂಗ್ರಹಣೆಗೆ ಉತ್ತೇಜನ ನೀಡಲು ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಿ ಬ್ಯಾಂಕುಗಳ ಹೆಚ್ಚು ಶಾಖೆಗಳನ್ನು ಸ್ಥಾಪಿಸುವುದು.

8 750 ಕೋಟಿ ರೂ.ಗಳ ಅಲ್ಪಾವಧಿ ಹಾಗೂ ಮಧ್ಯಮಾವಧಿ ಸಾಲವನ್ನೂ ಮತ್ತು 900 ಕೋಟಿ ರೂ.ಗಳ ದೀರ್ಘಾವಧಿ ಸಾಲವನ್ನೂ ಸಹಕಾರಿ ಸಂಸ್ಥೆಗಳಿಗೆ ಒದಗಿಸುವುದು.

9 ಸಹಕಾರಿ ಸಂಸ್ಥೆಗಳ ಮತ್ತು ಭೂ ಅಭಿವೃದ್ಧಿ ಬ್ಯಾಂಕುಗಳ

ನೀತಿ ಹಾಗೂ ಪದ್ಧತಿಗಳನ್ನು ಸಣ್ಣ ಹಿಡುವಳಿಗಳಿಗೆ ಅನುಕೂಲವಾಗುವಂತೆ ಅಳವಡಿಸುವುದು.

10 ಸಹಕಾರಿ ಸಂಸ್ಥೆಗಳಿಗೆ 900 ಕೋಟಿ ರೂ. ಮೌಲ್ಯದ ಕೃಷಿ ಬೆಳೆಗಳ ವ್ಯವಸ್ಥೆಯ ನಿರ್ವಹಣೆಯನ್ನು ವಹಿಸುವುದು. ಇದರ ಜೊತೆಗೆ ಸಹಕಾರಿ ಸಂಸ್ಥೆಗಳು 25 ಕೋಟಿ ರೂ.ಗಳ ಕೃಷಿ ವಸ್ತುಗಳನ್ನು ಅಂತರರಾಜ್ಯಗಳಲ್ಲೂ, 10 ಕೋಟಿ ರೂ.ಗಳನ್ನು ರಫ್ತು ವ್ಯಾಪಾರದಲ್ಲಿ ನಿರ್ವಹಿಸುವಂತೆ ಮಾಡುವುದು ಮತ್ತು 550 ಸಹಕಾರಿ ಸಂಸ್ಕರಣ ಘಟಕಗಳನ್ನು ಸ್ಥಾಪಿಸುವುದು.

11 ಗ್ರಾಹಕರ ಸಂಘಗಳ ಮೂಲಕ 500 ಕೋಟಿ ರೂ.ಗಳ ಗ್ರಾಹಕರ ವಸ್ತುಗಳನ್ನು ಹಂಚುವುದು.

12 ಸಹಕಾರ ಸಂಸ್ಥೆಗಳಿಂದ 650 ಕೋಟಿ ರೂ.ಗಳ ರಾಸಾಯನಿಕ ಗೊಬ್ಬರಗಳ ಮಾರಾಟವನ್ನು ನಿರ್ವಹಿಸುವುದು. 50 ಕೋಟಿ ರೂ. ಗಳ ಸುಧಾರಿಸಿದ ಬೀಜಗಳು, 50 ಕೋಟಿ ರೂ. ಗಳ ಕ್ರಿಮಿನಾಶಕಗಳು, 15 ಕೋಟಿ ರೂ. ಗಳ ಕೃಷಿ ಉಪಕರಣಗಳನ್ನು ಹಂಚುವುದು.

13 ನಿಶ್ಯಕ್ತ ಸಹಕಾರಿ ಬೇಸಾಯ ಸಂಸ್ಥೆಗಳನ್ನು ಪುನರ್‌ಘಟಿಸುವುದು, ಹೊಸ ಸಂಸ್ಥೆಗಳನ್ನು ಬೆಳವಣಿಗೆ ಹೊಂದಬಹುದಾದ ಪ್ರದೇಶಗಳಲ್ಲಿ ಮಾತ್ರ ಸ್ಥಾಪಿಸುವುದು.

ನಾಲ್ಕನೇ ಯೋಜನೆಯಲ್ಲಿ 1973–74ರ ವೇಳೆಗೆ ಸಾಧಿಸಬೇಕಾದ ಗುರಿಗಳು ಹೀಗಿದ್ದುವು.

		1973–74
1	ಪ್ರಾಥಮಿಕ ಕೃಷಿಸಾಲ ಸಂಸ್ಥೆಗಳ ಸದಸ್ಯರ ಸಂಖ್ಯೆ (ದಶಲಕ್ಷಗಳಲ್ಲಿ)	42

2	ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳ ಮಂಜೂರಾತಿ (ಕೋಟಿ ರೂ.ಗಳಲ್ಲಿ)	750
3	ದೀರ್ಘಾವಧಿ ಸಾಲಗಳ ಮಂಜೂರಾತಿ (ಕೋಟಿ ರೂ.)	700
4	ಸಹಕಾರಿ ಮಾರುಕಟ್ಟೆಗಳು ಮಾರಾಟ ಮಾಡಬೇಕಾದ ಕೃಷಿಉತ್ಪನ್ನ (ಕೋಟಿ ರೂ.ಗಳಲ್ಲಿ)	900
5	ಸಹಕಾರಿ ಕೃಷಿ ಸಂಸ್ಕರಣ ಘಟಕಗಳು	2000
6	ಸಹಕಾರಿ ಸಂಸ್ಥೆಗಳಿಂದ ಮಾರಾಟ ಮಾಡಬೇಕಾದ ಗೊಬ್ಬರಗಳು (ಕೋಟಿ ರೂ.ಗಳಲ್ಲಿ)	650
7	ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಹಕರ ವಸ್ತುಗಳ ಹಂಚಿಕೆ (ಕೋಟಿ ರೂ.)	500
8	ನಗರ ಗ್ರಾಹಕ ಸಹಕಾರ ಸಂಸ್ಥೆಗಳಿಂದ ಚಿಲ್ಲರೆ ಮಾರಾಟ	400

ಮೂಲ: C.B. Memoria Agricultural Problems of India. ಪುಟ. 587

ನಾಲ್ಕನೇ ಯೋಜನೆಯು ಮಿಶ್ರ ಪ್ರಗತಿಯನ್ನು ಸಾಧಿಸಿತು. ಕೃಷಿ ಉತ್ಪನ್ನದ ಸಹಕಾರಿ ಮಾರಾಟದ ಗುರಿ ಈ ಯೋಜನೆಯಲ್ಲಿ 900 ಕೋಟಿ ರೂ.ಗಳ ಮೌಲ್ಯದ್ದಾಗಿತ್ತು. ಆದರೆ ವಾಸ್ತವವಾಗಿ 1000 ಕೋಟಿ ರೂ.ಗಳ ಕೃಷಿ ಉತ್ಪನ್ನವನ್ನೂ ಮಾರಾಟ ಮಾಡಿ ದಾಖಲೆಯನ್ನು ನಿರ್ಮಿಸಲಾಯಿತು. ಸಹಕಾರಿ ಸಾಲ ಮತ್ತು ಸಹಕಾರಿ ಸಂಗ್ರಹಣದ ಬಗ್ಗೆಯೂ ಈ ಯೋಜನೆಯಲ್ಲಿ ನಿರೀಕ್ಷಿಸಿದ ಮಟ್ಟದಲ್ಲಿ ಗುರಿಯನ್ನು ಹೊಂದಲಾಯಿತು. ಎಲ್ಲಾ ಸಹಕಾರಿ ಸಂಸ್ಥೆಗಳ ಒಟ್ಟು ಪ್ರಗತಿಯನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

ಸಹಕಾರಿ ಚಳುವಳಿಯ ಪ್ರಗತಿ:

ವರ್ಷ	ಸಂಸ್ಥೆಗಳ ಸಂಖ್ಯೆ (ಲಕ್ಷಗಳಲ್ಲಿ)	ಪ್ರಾಥಮಿಕ ಸದಸ್ಯರ ಸಂಖ್ಯೆ (ಲಕ್ಷಗಳಲ್ಲಿ)	ಶೇರು ಬಂಡವಾಳ (ಕೋಟಿ ರೂ.)	ಕಾರ್ಯ ನಿರ್ವಾಹಕ ಬಂಡವಾಳ ಕೋಟಿ ರೂ.
1950–51 ಯೋಜನೆ–೧	1.8	137	45	276
1955–56 ಯೋಜನೆ–೨	2.4	176	77	469
1960–61 ಯೋಜನೆ–೩	3.3	378	260	1535
1965–66	3·5	503	450	2800
1967–68	3.3	544	586	3682
1968–69	3·3	585	663	4473
1969–70	3·2	588	753	5156
1970–71	3·2	591	851	6810
1971–72	3·2	614	944	7695

ಮೂಲ: Ministry of Industries and civil supplies. Department of Co-operation Annual report for 1974-75. ಪುಟ. 390.

ಐದನೇ ಯೋಜನೆಯಲ್ಲಿ ಸಹಕಾರ : ಐದನೇ ಯೋಜನೆಯಲ್ಲಿ ಸಹಕಾರಿ ಕ್ಷೇತ್ರಕ್ಕೆ ವಿಶಿಷ್ಟ ಸ್ಥಾನ ನೀಡಲಾಯಿತು. ರೈತರ, ಕಾರ್ಮಿಕರ ಮತ್ತು ಗ್ರಾಹಕರ ಆವಶ್ಯಕತೆಗಳಿಗೆ ವಿಶಿಷ್ಟ ಗಮನವನ್ನು ನೀಡುವ ಮೂಲಕ ಸಹಕಾರಿ ಕ್ಷೇತ್ರವನ್ನು ಶಕ್ತಿಯುತವನ್ನಾಗಿ ಮಾಡಬೇಕೆಂದು ಐದನೇ ಯೋಜನೆಯ

ಪ್ರಮುಖ ಉದ್ದೇಶವಾಗಿತ್ತು. ಈ ಯೋಜನೆಯಲ್ಲಿ ಸಹಕಾರಿ ಬೆಳವಣಿಗೆಯು ಕೆಲವು ನಿರ್ದಿಷ್ಟವಾದ ಉದ್ದೇಶಗಳನ್ನು ಹೊಂದಿತ್ತು.

1 ಕೃಷಿಯಲ್ಲಿ ಅಭಿವೃದ್ಧಿ ಹೊಂದಲು ಕೃಷಿ ಸಹಕಾರಿ ಸಂಸ್ಥೆಗಳನ್ನು ಬಲಗೊಳಿಸುವುದು (ಸಾಲದ ಪೂರೈಕೆ, ಮಾರು ಕಟ್ಟೆ ಮತ್ತು ಸಂಸ್ಕರಣ).

2 ಕೃಷಿ ಸಾಲಕ್ಷೇತ್ರದಲ್ಲಿ ಪ್ರಾದೇಶಿಕ ಅಸಮತೆಯನ್ನು ತೊಡೆದು ಹಾಕುವುದು.

ಸಹಕಾರಿ ಸಂಸ್ಥೆಗಳ ಸ್ವರೂಪವನ್ನು ಸಣ್ಣ ರೈತರಿಗೆ ಹಾಗೂ ಬುಡಕಟ್ಟು ಜನಾಂಗದವರಿಗೆ ಹೆಚ್ಚು ಉಪಯುಕ್ತವಾಗುವಂತೆ ಬದಲಿಸುವುದು.

ಐದನೇ ಯೋಜನೆಯಲ್ಲಿ ಸಹಕಾರಿ ಕ್ಷೇತ್ರದಲ್ಲಿ ನಿರ್ಧರಿಸಿದ ಗುರಿಗಳು (ಕೋಟಿ ರೂ.ಗಳಲ್ಲಿ)

	1973–74	**1978–79**
ಅಲ್ಪಾವಧಿ ಸಾಲ	700	1300
ಮಧ್ಯಮಾವಧಿ ಸಾಲ	200	325
ದೀರ್ಘಾವಧಿ ಸಾಲ	900	1500
ಸಹಕಾರಿ ಸಂಸ್ಥೆಗಳಿಂದ ಮಾರಾಟ ಮಾಡಬೇಕಾದ ಸರಾಸರಿ ಕೃಷಿಉತ್ಪನ್ನ	1100	1900
ಸಹಕಾರಿ ಸಂಸ್ಕರಣ ಘಟಕಗಳ ಸಂಖ್ಯೆ	1500	2150
ಸಹಕಾರಿ ಸಂಗ್ರಹಣದ ಶಕ್ತಿ	33 ಲಕ್ಷ ಟನ್	68 ಲಕ್ಷ ಟನ್

ಸಹಕಾರಿ ಸಂಸ್ಥೆಗಳಿಂದ ಮಾರಾಟ ಮಾಡಬೇಕಾದ ಗ್ರಾಹಕರ ವಸ್ತುಗಳ ಮೌಲ್ಯ	300 ಕೋಟಿ	600 ಕೋಟಿ
ಸಹಕಾರಿ ಸಂಸ್ಥೆಗಳ ಮೂಲಕ ಮಾರಾಟ ಮಾಡಬೇಕಾದ ರಾಸಾಯನಿಕ ಗೊಬ್ಬರಗಳ ಮೌಲ್ಯ	350 ಕೋಟಿ	380 ಕೋಟಿ

ಮೂಲ: Draft outline of the Fifth five year plan.

ಇಂದು ನಾವು ಯೋಜನಾ ಪಥದಲ್ಲಿ ಬಹುದೂರ ಸಾಗಿ ಬಂದಿದ್ದೇವೆ. ಪಂಚವಾರ್ಷಿಕ ಯೋಜನೆಗಳಲ್ಲಿ ಸರಕಾರ ಕೈಗೊಳ್ಳುತ್ತಿರುವ ಪ್ರಯತ್ನಗಳನ್ನು ಗಮನಿಸಿದಾಗ ಸಹಕಾರಿ ಚಳುವಳಿಗೆ ನಮ್ಮ ದೇಶದಲ್ಲಿ ಭವ್ಯ ಭವಿಷ್ಯವಿರುವುದು ಕಂಡು ಬರುತ್ತದೆ. ಇದರಿಂದ ಸಹಕಾರದ ಬಗ್ಗೆ ಸರಕಾರಕ್ಕಿರುವ ಆಸಕ್ತಿಯು ಎಷ್ಟರ ಮಟ್ಟಿನದು ಎಂಬುದರ ಅರಿವಾಗುತ್ತದೆ. ವಾಸ್ತವವಾಗಿ ಭಾರತದಲ್ಲಿ ಸಹಕಾರ ಪದ್ಧತಿಯು ಹುಟ್ಟಿ, ಬೆಳೆದು, ಈಗ ಬಲಗೊಳ್ಳುತ್ತಿರುವುದು ಮುಖ್ಯವಾಗಿ ಸರಕಾರದ ಬೆಂಬಲದಿಂದಲೇ ಎನ್ನಬಹುದು. ಜನಸಾಮಾನ್ಯರ ಹಿತರಕ್ಷಣೆ ಮತ್ತು ಏಳಿಗೆಗಳೇ ಅಭಿವೃದ್ಧಿ ಯೋಜನೆಗಳ ಮುಖ್ಯ ಗುರಿ. ಇದಕ್ಕಾಗಿ ಯೋಜನೆಗಳು ಸತತವಾಗಿ ಶ್ರಮಿಸುತ್ತಿವೆ. ಈ ಶ್ರಮ ಸಾರ್ಥಕವಾಗಿ ರಾಷ್ಟ್ರ ಮುಂದುವರಿಯಬೇಕಾದರೆ ಸಹಕಾರಿ ಚಳುವಳಿ ಬಲಗೊಳ್ಳಬೇಕು. ಇಲ್ಲದಿದ್ದರೆ ಹಳ್ಳಿಗಳ ಭವಿಷ್ಯ ಅಂಧಕಾರದಲ್ಲಿ ಮುಳುಗುವುದು ನಿಶ್ಚಯ. ಆದ್ದರಿಂದ ಸಹಕಾರ ಸಮಾಜದ ದುರ್ಬಲ ವರ್ಗಗಳ ಆಸೆ-ಆಕಾಂಕ್ಷೆಗಳನ್ನು ಈಡೇರಿಸಬಲ್ಲ ಸಾಧನವಾಗಬೇಕು.

೭. ಸಹಕಾರದ ಅಭಿವೃದ್ಧಿ ಮತ್ತು ಸಾಧನೆ

ಪ್ರಜಾತಂತ್ರ ಮತ್ತು ಪರಸ್ಪರ ಸಹಾಯ ಈ ತತ್ವಗಳ ತಳ ಹದಿಯಮೇಲೆ, ಸರಕಾರಿ ಸಹಭಾಗಿತ್ವವನ್ನು ಪಡೆದುಕೊಂಡು ರೂಪಿತವಾಗಿರುವ ಸಹಕಾರ ಪದ್ಧತಿಯು ಇಂದು ಭಾರತದ ಆರ್ಥಿಕ ಉನ್ನತಿಗೆ ಉತ್ತೇಜಕವಾಗಿದೆ. ಸಹಕಾರಿ ಚಳುವಳಿಯು ನಮ್ಮ ದೇಶದ ಜನಜೀವನಕ್ಕೆ ಒಗ್ಗುವ ಒಂದು ಸಾಧನವಾಗಿದೆ. ಸಹಕಾರ ಒಂದು ಆರ್ಥಿಕ ಸಂಘಟನಾ ಪದ್ಧತಿ. ಇದರಲ್ಲಿ ಜನರು ತಮ್ಮ ಸಂಪನ್ಮೂಲಗಳನ್ನು, ಶ್ರಮವನ್ನು ವಿಶಿಷ್ಟ ಆರ್ಥಿಕ ಕಾರ್ಯ ಸಾಧನೆಗಾಗಿ ಸ್ವಯಂಪ್ರೇರಣೆಯಿಂದ ಒಟ್ಟುಗೂಡಿಸುತ್ತಾರೆ. ಹೀಗೆ ಒಟ್ಟುಗೂಡಿದ ಜನರು ತಮ್ಮ ಕಾರ್ಯಚಟುವಟಿಕೆಗಳನ್ನು ಸಾಗಿಸಲು ಕೈಗೊಂಡ ಸಂಸ್ಥೆಗಳೇ ಸಹಕಾರ ಸಂಸ್ಥೆಗಳು. ಇದು ವರೆಗೆ ಈ ಸಂಸ್ಥೆಗಳ ಚಟುವಟಿಕೆಗಳನ್ನು ಕುರಿತು ನೂರಾರು ಟೀಕೆಗಳಿದ್ದರೂ ಅವು ಸಾಧಿಸಿರುವ ಪ್ರಗತಿಯನ್ನು ಮಾತ್ರ ಯಾರೂ ಅಲ್ಲಗಳೆಯುವಂತಿಲ್ಲ. ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಒಂದು ವರ್ಷದಲ್ಲಿ ನಡೆಯುವ ಒಟ್ಟು ವ್ಯಾಪಾರದಲ್ಲಿ ಸುಮಾರು 600 ಕೋಟಿ ರೂ. ಗಳಷ್ಟು ವ್ಯವಹಾರ ಸಹಕಾರ ಸಂಸ್ಥೆಗಳಿಂದ ನಡೆಯುತ್ತದೆ ಎಂದು ತಿಳಿದುಬಂದಿದೆ. 3 ಲಕ್ಷಕ್ಕಿಂತ ಹೆಚ್ಚು ಸಹಕಾರ ಸಂಸ್ಥೆಗಳು ಇಂದು ನಮ್ಮ ದೇಶದಲ್ಲಿವೆ. ಇವುಗಳಲ್ಲಿ ಶೇಕಡ 66ರಷ್ಟು ಸಂಸ್ಥೆಗಳು ಕೃಷಿ ಸೇವೆಗಾಗಿ ಮೀಸಲಾಗಿವೆ. ಇಂದು ಸಹಕಾರ ಸಂಸ್ಥೆಗಳು ರೈತರ ನೀರಸ ಬದುಕಿನಲ್ಲಿ ನೆಮ್ಮದಿಯ ಬೆಳಕಾಗಿ ಪ್ರವೇಶಿಸಿವೆ. ಇತ್ತೀಚೆಗೆ ಅವರು ಕೃಷಿಯ ಬೆಳವಣಿಗೆಗೆ ರಾಸಾಯನಿಕ ಗೊಬ್ಬರಗಳು, ಸುಧಾರಿಸಿದ ಬೀಜ ಗಳು ಅತ್ಯಗತ್ಯವೆಂದು ಭಾವಿಸಿದ್ದಾರೆ. ಹೈಬ್ರಿಡ್ ಬೀಜಗಳು ಕ್ರಿಮಿನಾಶಕಗಳು, ಟ್ರ್ಯಾಕ್ಟರ್, ಬುಲ್ಡೋಜರ್‌ಗಳ ಉಪ

ಯೋಗ ಇಂದು ಹೆಚ್ಚಿದೆ. ಇದಕ್ಕೆ ಮುಖ್ಯಕಾರಣ ಸಹಕಾರ ಸಂಸ್ಥೆಗಳ ನಿಸ್ವಾರ್ಥ ಸೇವೆ ಮತ್ತು ನಿರಂತರ ಶ್ರಮ. ಈಚೆಗೆ ಈ ಸಂಸ್ಥೆಗಳ ಕಾರ್ಯಕ್ಷೇತ್ರ ವಿಶಾಲವಾಗುತ್ತಿದೆ. 1950–51 ರಿಂದ 1973–74ರ ವರೆಗಿನ ಅಂಕಿ-ಅಂಶಗಳಿಂದ ಸಹಕಾರ ಸಂಸ್ಥೆಗಳ ಕಾರ್ಯಚಟುವಟಿಕೆಗಳ ವ್ಯಾಪ್ತಿಯನ್ನು ತಿಳಿಯ ಬಹುದು. (ಮುಂದಿನ ಪುಟ ನೋಡಿ.)

1960–61ರಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆ 3ಲಕ್ಷ 6ಸಾವಿರ ಟನ್‌ಗಳಿದ್ದುದ್ದು 1965–66ರಲ್ಲಿ 7 ಲಕ್ಷ 28 ಸಾವಿರ ಗಳಿಗೆ ಏರಿತು. 1973–74ರಲ್ಲಿ ಇದು 28 ಲಕ್ಷ 39 ಸಾವಿರ ಗಳಿಗೆ ಹೆಚ್ಚಿತು. ಆಹಾರ ಧಾನ್ಯಗಳ ಉತ್ಪಾದನೆ 1960–61 ರಲ್ಲಿ 8 ಕೋಟಿ 20 ಲಕ್ಷ ಟನ್‌ಗಳಿದ್ದುದು 1973–74ರಲ್ಲಿ 10 ಕೋಟಿ 36 ಲಕ್ಷ ಟನ್‌ಗಳಿಗೆ ಏರಿತು. ಇಂದು ದೇಶಾದ್ಯಂತ ಗ್ರಾಹಕ ಸಹಕಾರಿ ಸಂಸ್ಥೆಗಳ ನಿರ್ಮಾಣವಾಗಿದೆ. ಇವುಗಳ ಧ್ಯೇಯ ಅಗತ್ಯ ಗ್ರಾಹಕ ವಸ್ತುಗಳ ಯೋಗ್ಯವಿತರಣೆ ಹಾಗೂ ಸಾರ್ವಜನಿಕ ವಿತರಣ ವ್ಯವಸ್ಥೆಯಲ್ಲಿ ಪರಿಣಾಮಕಾರಿ ಯಾಗಿ ಪಾಲ್ಗೊಳ್ಳುವಿಕೆ. ಗ್ರಾಹಕರ ವಸ್ತುಗಳನ್ನು ವಿತರಣೆ ಮಾಡಲು 66,000 ಸಹಕಾರಿ ಚಿಲ್ಲರೆ ಅಂಗಡಿಗಳನ್ನು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ತೆರೆಯಲಾಗಿದೆ. ಈ ಪೈಕಿ ಸುಮಾರು 53,000 ಚಿಲ್ಲರೆ ಅಂಗಡಿಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ತೆರೆಯಲಾಗಿದೆ. ಗ್ರಾಹಕರ ಸಹಕಾರ ಸಂಸ್ಥೆಗಳ ಹಣಕಾಸಿನ ಸೌಲಭ್ಯ ವಿಸ್ತರಿಸಲು ಕೇಂದ್ರ ಸರಕಾರ ರಾಜ್ಯ ಸರಕಾರಗಳಿಗೆ 1975–76ರಲ್ಲಿ 4·55 ಕೋಟಿ ರೂ. ಗಳ ವಿಶಿಷ್ಟ ನೆರವು ನೀಡಿತು. ಸಹಕಾರಿ ಮಳಿಗೆಗಳನ್ನು ಸ್ಥಾಪಿಸುವುದರ ಮೂಲಕ ಚಿಲ್ಲರೆ ವ್ಯಾಪಾರದಲ್ಲಿ ಆಧುನೀಕರಣ ತರುವಲ್ಲಿ ಗ್ರಾಹಕ

	1950–51	1956–61	1970–71	1971–72	1972–73	1973–74
ಸಹಕಾರಿ ಸಂಸ್ಥೆಗಳ ಸಂಖ್ಯೆ (ಲಕ್ಷಗಳಲ್ಲಿ)	1.8	3.3	3.2	3.2	3,3	3.3
ಪ್ರಾಥಮಿಕ ಸಂಸ್ಥೆಗಳ ಸದಸ್ಯರ ಸಂಖ್ಯೆ (ಲಕ್ಷಗಳಲ್ಲಿ)	137	342	591	614	678	734
ಷೇರು ಬಂಡವಾಳ (ಕೋಟಿ ರೂ.)	45	222	851	944	1051	1225.78
ಕಾರ್ಯ ನಿರ್ವಾಹಕ ಬಂಡವಾಳ (ಕೋಟಿ ರೂ. ಗಳಲ್ಲಿ)	276	1312	6810	7695	8578	9648

ಮೂಲ : India. 1977-78. ಪುಟ. 254

ನಾಲ್ಕನೆಯ ಯೋಜನೆಯಲ್ಲಿ ಸಹಕಾರ ಸಂಸ್ಥೆಗಳ ಸಾಲನೀಡಿಕೆಯಲ್ಲಿ ಗಮನಾರ್ಹ ಹೆಚ್ಚಳ ಕಂಡು ಬಂದಿತು.

ಕೆಳಗಿನ ಪಟ್ಟಿಯು 1970–71ರಿಂದ 1974–75ರ ವರೆಗೆ ಎಷ್ಟೆಷ್ಟು ಸಾಲ ಮಂಜೂರು ಮಾಡಲಾಯಿತು ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಸಾಲ	1970–71	1971–72	1972–73	1973–74	1974–75
ಅಲ್ಪಾವಧಿ ಸಾಲ	519.34	540.94	611.54	689.31	778.50
ಮಧ್ಯಮಾವಧಿ ಸಾಲ	58.54	73.59	163.35	71.15	75.15
ದೀರ್ಘಾವಧಿ ಸಾಲ	170.36	154.44	181.78	158.69	196.86

ಮೂಲ :—India 1977–78. ಪುಟ. 255

ಮೇಲಿನ ಪಟ್ಟಿಯನ್ನು ಅವಲೋಕಿಸಿದಲ್ಲಿ 1950–51ರಿಂದ 1972–73ರ ನಡುವೆ ಪ್ರಾಥಮಿಕ ಸಂಸ್ಥೆಗಳ ಸದಸ್ಯರ ಸಂಖ್ಯೆಯು ನಾಲ್ಕು ಪಟ್ಟು ಹೆಚ್ಚಿರುವುದು ಕಂಡುಬರುತ್ತದೆ. ಎಲ್ಲಾ ಬಗೆಯ ಸಹಕಾರ ಸಂಸ್ಥೆಗಳ ಷೇರು ಬಂಡವಾಳ 27 ಪಟ್ಟುಗಿಂತಲೂ ಹೆಚ್ಚಾಗಿ ಮತ್ತು ಕಾರ್ಯನಿರ್ವಾಹಕ ಬಂಡವಾಳ 34 ಪಟ್ಟುಗಿಂತಲೂ ಹೆಚ್ಚಾಗಿ ಅಧಿಕಗೊಂಡಿರುವುದನ್ನು ಪಟ್ಟಿಯಿಂದ ತಿಳಿಯಬಹುದು.

ಸಹಕಾರ ಸಂಸ್ಥೆಗಳು ಮತ್ತು ಜನತಾ ಬಜಾರ್ ಎಂದು ಪ್ರಸಿದ್ಧ ವಾಗಿರುವ ಗ್ರಾಹಕ ಸಹಕಾರಿ ಸಂಸ್ಥೆಗಳ ಮಳಿಗೆಗಳು ಬಳಕೆದಾರರಿಗೆ ಪ್ರಿಯವಾಗಿವೆ. ಇಂತಹ ಮಳಿಗೆಗಳು 1966–67 ರಲ್ಲಿ 38 ಇದ್ದುದು 1973–74ರಲ್ಲಿ 134ಕ್ಕೆ ಏರಿತು. ಇದೇ ಅವಧಿಯಲ್ಲಿ ಇವುಗಳ ಚಿಲ್ಲರೆ ವ್ಯಾಪಾರ 11.72 ಕೋಟಿ ರೂ.ಗಳಿಂದ 65 ಕೋಟಿ ರೂ.ಗಳಿಗೆ ಹೆಚ್ಚಿತು. ಕೈಗಾರಿಕೆ, ಗಣಿ, ತೋಟಗಾರಿಕೆಗಳಲ್ಲಿ (Plantations) ಕೆಲಸ ಮಾಡುವ ಜನರಿಗೆ ರೈಲ್ವೆ, ಅಂಚೆತಂತಿ ಇಲಾಖೆಗಳಲ್ಲಿನ ಕೆಲಸಗಾರರಿಗೆ ಗ್ರಾಹಕ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ರಸಗೊಬ್ಬರದ ವಿತರಣೆಗಾಗಿ ಸಹಕಾರ ಸಂಸ್ಥೆಗಳು ಸುಮಾರು 40,000 ಚಿಲ್ಲರೆ ಅಂಗಡಿಗಳನ್ನು ತೆರೆದಿದ್ದು 1973–74ರಲ್ಲಿ 400 ಕೋಟಿ ರೂ. ಮೌಲ್ಯದ ರಸಗೊಬ್ಬರದ ವ್ಯವಹಾರವನ್ನು ಇವು ಮಾಡಿದುವು. ಹೈನುಗಾರಿಕೆಯಲ್ಲೂ ಸಹಕಾರಿ ಸಂಸ್ಥೆಗಳು ಮಹತ್ವದ ಪಾತ್ರವಹಿಸುತ್ತಿವೆ. ದೇಶದಲ್ಲಿ ಒಟ್ಟು ಹೈನು ಕೇಂದ್ರಗಳ ಸಂಖ್ಯೆ ಸುಮಾರು 137 ಇದ್ದು, ಈ ಪೈಕಿ ಸುಮಾರು 35 ಕೇಂದ್ರಗಳು ಸಹಕಾರಿ ರಂಗದಲ್ಲಿವೆ. ದೇಶದಲ್ಲಿನ ಸಾರ್ವಜನಿಕ ವಿತರಣೆ ವ್ಯವಸ್ಥೆಗೆ ಆಹಾರ ಧಾನ್ಯಗಳನ್ನು ಪ್ರೊಕ್ಯೈಸುವ ಮಹತ್ತರ ಕಾರ್ಯದಲ್ಲಿ ಇಂದು ಸಹಕಾರಿ ಮಾರುಕಟ್ಟೆಗಳು ಹೆಚ್ಚಿನ ಯಶಸ್ಸನ್ನು ಸಾಧಿಸಿವೆ. ಕೃಷಿ ಉತ್ಪನ್ನಗಳನ್ನು ಸಂಸ್ಕರಣಗೊಳಿಸುವುದರಲ್ಲೂ ಸಹಕಾರ ಸಂಸ್ಥೆಗಳು ಹೆಚ್ಚಿನ ಪಾತ್ರ ವಹಿಸುತ್ತಿವೆ. ಪಂಚವಾರ್ಷಿಕ ಯೋಜನೆಗಳಲ್ಲಿ ವಿವಿಧ ಬಗೆಗಳಲ್ಲಿ ಸಹಕಾರಿ ವಿಕಾಸ ಕಾರ್ಯಕ್ರಮಕ್ಕೆ ಸರಕಾರ ನೆರವು ನೀಡುತ್ತಿದೆ. ಸರಕಾರಿ ಸಹಾಯದ ಪ್ರಮುಖ ಉದ್ದೇಶ ಸಹಕಾರಿ ಚಳುವಳಿಗೆ ಸ್ವಾವಲಂಬನೆ ಹಾಗೂ ಸ್ವಯಂ ನಿಯಂತ್ರಣ ಸಾಧಿಸಲು

ಪ್ರೋತ್ಸಾಹ ನೀಡಿಕೆ. ಸಹಕಾರ ಸಂಸ್ಥೆಗಳು ಈಚೆಗೆ ಗಮನಾರ್ಹವಾಗಿ ನಿರ್ವಹಿಸಿದ ಒಂದು ಮುಖ್ಯ ಕಾರ್ಯವೆಂದರೆ ನಿಯಂತ್ರಿತ ಬಟ್ಟೆಗಳ ಮಾರಾಟ, ಸಹಕಾರಿ ಚಟುವಟಿಕೆಗಳ ಪ್ರಗತಿಯಲ್ಲಿ ಉಂಟಾದ ಮತ್ತೊಂದು ವಿಸ್ತರಣೆಯೆಂದರೆ ವಿದ್ಯಾರ್ಥಿ ಸಮುದಾಯಕ್ಕೆ ಸೇವೆ ಸಲ್ಲಿಸಿದ್ದು. ಅಂದರೆ, ವಿಶ್ವವಿದ್ಯಾಲಯಗಳಲ್ಲಿ ಹಾಗೂ ಪದವಿ ಕಾಲೇಜುಗಳಲ್ಲಿನ ಹಾಸ್ಟೆಲ್‌ಗಳಿಗೆ ನೆರವಾದುದು.

ಹೀಗೆ ಸಹಕಾರಿ ಕ್ಷೇತ್ರದಿಂದ ಇದುವರೆಗೂ ಆಗಿರುವ ಸೇವೆ ಗಮನಾರ್ಹವಾದುದು. ಇತ್ತೀಚೆಗೆ ಈ ಸಂಸ್ಥೆಗಳಿಂದ ಸಿಗುತ್ತಿರುವ ಸಾಲದ ಮೊತ್ತ ಮೊದಲಿಗಿಂತಲೂ ಹೆಚ್ಚಿದೆ. ಸಹಕಾರಿ ಜೀವನವೂ ಹೆಚ್ಚು ಹೆಚ್ಚು ಆಕರ್ಷಕವಾಗುತ್ತಿದೆ. ರೈತರಲ್ಲಿ ಸಹಕಾರಿ ಪ್ರಜ್ಞೆಯು ಮೂಡುತ್ತಿರುವುದರಿಂದ ಸಹಕಾರ ಸಂಸ್ಥೆಗಳಿಂದ ಅವರು ಸಾಲ ಪಡೆಯುವುದು ಹೆಚ್ಚಾಗಿದೆ. ಇದರಿಂದಾಗಿ ಕೃಷಿಯ ಉತ್ಪತ್ತಿಯಲ್ಲೂ ಹೆಚ್ಚಳ ಕಂಡು ಬರುತ್ತಿದೆ. ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರ ವಿಶಿಷ್ಟ ಪ್ರಗತಿಯನ್ನು ಸಾಧಿಸಿದ್ದರೂ ಅದು ಸಂಪೂರ್ಣವಾಗಿ ದೋಷಮುಕ್ತವಾಗಿದೆ ಎನ್ನಲಾಗದು. ಸಾಲಗಳ ಮೊತ್ತವೇನೋ 4 ಪಟ್ಟು ಹೆಚ್ಚಿದೆ. ಆದರೆ ಕೊಟ್ಟ ಸಾಲವು ಸಾರ್ಥಕವಾಗುವಂತೆಯೂ ಮತ್ತು ವಸೂಲಾಗುವಂತೆಯೂ ಶೀಘ್ರ ಕ್ರಮಗಳನ್ನು ಕೈಗೊಳ್ಳಲಾಗುತ್ತಿಲ್ಲ. ಭಾರತದಲ್ಲಿ ಸ್ವಾವಲಂಬನೆ, ಮಿತವ್ಯಯಗಳ ಮಹತ್ವವನ್ನು ಅರಿತ ರೈತರು ವಿರಳ. ಸಾಲವಾಗಿ ಪಡೆದ ಹಣವನ್ನು ಅವರು ಸಂಪೂರ್ಣವಾಗಿ ಕೃಷಿ ಸುಧಾರಣೆಗೆ ಬಳಸದೆ ಅದರ ಹೆಚ್ಚು ಪ್ರಮಾಣವನ್ನು ಮದುವೆ, ಮುಂಜಿ, ಹಬ್ಬ-ಹುಣ್ಣಿಮೆಗಳಿಗೆ ಖರ್ಚು ಮಾಡುತ್ತಾರೆ. ಇದರಿಂದಾಗಿ ಸಾಲದ ಮರುಪಾವತಿ ಸರಿಯಾಗಿ ಆಗುವುದಿಲ್ಲ. ಇದರಿಂದ ಸಹಕಾರದ ಪ್ರಗತಿ ಕುಂಠಿತ

ಗೊಳ್ಳುತ್ತದೆ. ಆದ್ದರಿಂದ ರೈತರಿಗೆ ಅಗತ್ಯವಾದ ಸಾಲಗಳನ್ನು ಯಥೋಚಿತವಾಗಿ ಪೂರೈಸುವುದರ ಜೊತೆಗೆ ಕೊಟ್ಟ ಸಾಲ ಉತ್ಪಾದಕವಾಗಿ ಪರಿಣಮಿಸುವಂತೆ ಮತ್ತು ಅದರ ಮರುಪಾವತಿಯಾಗುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕಾದುದು ಅಗತ್ಯ. ಇಂದು ಎಷ್ಟೋ ಸಹಕಾರಿ ಸಂಸ್ಥೆಗಳು ಸಹಕಾರಿ ತತ್ವಗಳನ್ವಯ ಕಾರ್ಯ ನಿರ್ವಹಿಸುತ್ತಿಲ್ಲ. ಅನೇಕ ಸಂಸ್ಥೆಗಳ ಸದಸ್ಯರು ಸಹಕಾರದ ಗೊತ್ತುಗುರಿಗಳನ್ನೇ ಮರೆತುಬಿಟ್ಟಿದ್ದಾರೆ. ಹಲವು ಸಂಸ್ಥೆಗಳು ತಾವು ಪಡೆದ ಮುಂಗಡ ಹಣವನ್ನು ಮರುಪಾವತಿ ಮಾಡದೆ ಅನೇಕ ವರ್ಷಗಳಿಂದ ಬಾಕಿ ಉಳಿಸಿಕೊಂಡಿವೆ. ಇನ್ನು ಕೆಲವು ಕಡೆ ದಕ್ಷ ಆಡಳಿತ ನಡೆಸಲಾಗದೆ ಸಹಕಾರ ಸಂಸ್ಥೆಗಳು ನಷ್ಟಕ್ಕೀಡಾಗಿವೆ. 1960–61ರಲ್ಲಿ 44 ಕೋಟಿ ರೂ. ಸಾಲವು ಬಾಕಿ ಇದ್ದುದು 1971–72ರಲ್ಲಿ 354 ಕೋಟಿ ರೂ. ಗಳಿಗೆ ಏರಿತು. ಹೀಗೆ ಸಹಕಾರ ಸಂಸ್ಥೆಗಳಲ್ಲಿ ದಿನೇದಿನೇ ಬೆಳೆಯುತ್ತಿರುವ ಸುಸ್ತಿ ಬಾಕಿಯು ಸಹಕಾರಿ ಚಳುವಳಿಗೆ ಆತಂಕವುಂಟುಮಾಡಿದೆ. ಇದರಿಂದ ಸಹಕಾರ ಚಳುವಳಿಯು ಪೂರ್ಣ ಸಾಮರ್ಥ್ಯದಿಂದ ಸೇವೆ ಸಲ್ಲಿಸಲಾಗುತ್ತಿಲ್ಲ. ಸಹಕಾರಿ ಚಳುವಳಿಯ ಬೆಳವಣಿಗೆಗೆ ದಕ್ಷ ಮುಂದಾಳುಗಳ ಕೊರತೆ ಒಂದು ಪ್ರಬಲ ಕಾರಣವಾಗಿ ಪರಿಣಮಿಸಿದೆ. ಈ ಮೊದಲು ದೇಶದ ನಾನಾ ಭಾಗಗಳಲ್ಲಿ ನಿಸ್ವಾರ್ಥ, ಅತ್ಯುತ್ಸಾಹಿ ಸಹಕಾರಿಗಳು ತಮ್ಮ ಅಮೂಲ್ಯ ಶಕ್ತಿಯಧಾರೆ ಎರೆದು ಆಸೆ ಆಮಿಷಗಳಿಗೆ ಒಳಗಾಗದೆ ಸಹಕಾರಿ ಚಳುವಳಿಯನ್ನು ಪೋಷಿಸಿ ಬೆಳೆಸಿದರು. ಆದರೆ ದುರದೃಷ್ಟವಶಾತ್ ಇಂದು ಸಹಕಾರಿ ಚಳುವಳಿ ಪ್ರಾಮಾಣಿಕರಾದ, ಉತ್ಸಾಹಿಗಳಾದ ಕಾರ್ಯಕರ್ತರನ್ನು ಆಕರ್ಷಿಸುವುದರಲ್ಲಿ ವಿಫಲವಾಗಿದೆ. ಸಹಕಾರ ಸಂಸ್ಥೆಗಳನ್ನು ಸುವ್ಯವಸ್ಥಿತ ರೀತಿಯಲ್ಲಿ

ನಡೆಸಿಕೊಂಡು ಹೋಗುವ ಧುರೀಣತ್ವ ಇಂದು ಕಾಣಬರುತ್ತಿಲ್ಲ. ಈ ದಿಸೆಯಲ್ಲಿ ಸಹಕಾರಿ ಶಿಕ್ಷಣ ಇಂದು ಮಹತ್ತರ ಪಾತ್ರವಹಿಸ ಬೇಕಾಗಿದೆ. ಏಕೆಂದರೆ ಸಹಕಾರದ ಅಭಿವೃದ್ಧಿ ಜನರ ತಿಳುವಳಿಕೆ ಯನ್ನು ಅವಲಂಭಿಸಿದೆ. ಶಿಕ್ಷಣ ಪಡೆದವರ ಪ್ರಮಾಣ ತೀರ ಕಡಿಮೆ ಇರುವ ಭಾರತದಂತಹ ದೇಶದಲ್ಲಿ ಸಹಕಾರಿ ತತ್ವಗಳ ಮಹತ್ವವನ್ನು ಕುರಿತು ತೀವ್ರಪ್ರಚಾರ ಬೇಕಾಗಿದೆ. ಜನರಲ್ಲಿ ಜಾಗೃತಿ ಬೆಳೆದು ಬಂದು ಸಹಕಾರದ ಮುಖ್ಯತತ್ವಗಳಾದ ಮಿತ ವ್ಯಯ ಸ್ವಾವಲಂಬನೆಗಳನ್ನು ಅವರು ತಮ್ಮ ಬದುಕಿಗೂ ಅಳ ವಡಿಸಿಕೊಂಡಲ್ಲಿ ಸಹಕಾರದ ಪ್ರಗತಿಭರದಿಂದ ಸಾಗುವುದು ಸಾಧ್ಯ. ಈ ದಿಸೆಯಲ್ಲಿ ಶಿಕ್ಷಣದ ಪಾತ್ರ ಅತಿ ಹಿರಿದು. ಸಹಕಾರ ಸಂಸ್ಥೆ ಗಳು ಮತ್ತಷ್ಟು ಪ್ರಬಲಗೊಂಡು, ರಾಷ್ಟ್ರದ ಅಭ್ಯುದಯದಲ್ಲಿ ನೆರವಾಗಬೇಕಾದರೆ, ಜನರಲ್ಲಿ ಸಹಕಾರದ ಮಹತ್ವದ ಬಗ್ಗೆ ತಿಳುವಳಿಕೆ ಉಂಟಾಗುವಂತೆ ಸಹಕಾರ ಶಿಕ್ಷಣವನ್ನು ಅವರಿಗೆ ದೊರಕಿಸಬೇಕು. ಸಹಕಾರದ ಬಗ್ಗೆ ಜನತೆಗೆ ಸೂಕ್ತಶಿಕ್ಷಣ ದೊರೆತರೆ, ಅವರು ಸಹಕಾರ ಸಂಸ್ಥೆಗಳನ್ನು ಕಟ್ಟಿಕೊಂಡು, ತಮ್ಮ ಹಲವಾರು ಸಮಸ್ಯೆಗಳನ್ನು ಈ ಸಂಸ್ಥೆಗಳ ಮುಖಾಂತರ ನಿವಾರಿಸಿಕೊಳ್ಳಲು ಸಮರ್ಥರಾಗಬಲ್ಲರು. ಕೇವಲ ಸಹಕಾರ ಸಂಸ್ಥೆಗಳ ಸಂಖ್ಯೆ ಹೆಚ್ಚಿದರೆ ಸಾಲದು, ಅದೇ ಪ್ರಮಾಣದಲ್ಲಿ ಜನರಲ್ಲಿ ಸಹಕಾರದ ಬಗ್ಗೆ ಸದ್ಭಾವನೆ ಹಾಗೂ ವಿಶ್ವಾಸ ಬೆಳೆಯ ಬೇಕು. ಜನತೆಯಲ್ಲಿ ಸಹಕಾರದ ಬಗ್ಗೆ ಹೆಚ್ಚು ಅರಿವು ಇಲ್ಲದೆ ಇದ್ದಲ್ಲಿ ಅಭಿವೃದ್ಧಿ ಕಾರ್ಯಗಳು ಪ್ರಗತಿಪಥದಲ್ಲಿ ಸಾಗಲಾರವು. ಸಹಕಾರ ಸಂಸ್ಥೆಗಳು ಸಬಲಗೊಳ್ಳಬೇಕಾದರೆ ಜನರ ನೆರವು ಬೇಕೇ ಬೇಕು. ಜನತೆಯಲ್ಲಿ ಸಹಕಾರದ ಬಗೆಗೆ ಹೆಚ್ಚು ಅರಿವು ಮೂಡಿದಷ್ಟೂ, ಅಭಿವೃದ್ಧಿ ಕಾರ್ಯಗಳಲ್ಲಿ ಪ್ರಗತಿ ಹೊಂದುವುದು ಸುಲಭ. ಅಷ್ಟರಿಮಟ್ಟಿಗೆ ನಮ್ಮ ದೇಶದ ವ್ಯವಸ್ಥಿತ ಆರ್ಥಿಕ

ಯೋಜನೆಗಳಲ್ಲಿ ಸಹಕಾರ ಪದ್ಧತಿಯನ್ನು ಹಾಸು ಹೊಕ್ಕಾಗಿ ಸೇರಿಸಲಾಗಿದೆ. ಎಷ್ಟೇ ಕೊರತೆಗಳಿದ್ದಾಗ್ಯೂ ಪ್ರಜಾಪ್ರಭುತ್ವ ದಲ್ಲಿ ಯೋಜಿತ ಆರ್ಥಿಕ ಕ್ರಮದ ಒಂದು ಸಾಧನವಾಗಿ ಸಹಕಾರ ಪದ್ಧತಿ ಆಗತ್ಯ ಎನ್ನುವುದನ್ನು ಯಾರೂ ಮರೆಯುವಂತಿಲ್ಲ.

೮. ಉಪಸಂಹಾರ

ಹಳ್ಳಿಯ ಸಮಾಜದಲ್ಲಿ ಐಕ್ಯತೆಯನ್ನು ಹೆಚ್ಚಿಸುವ ಸಲುವಾಗಿ ಹಾಗೂ ಸಂಪದ್ಭರಿತವಾಗಿರುವ ಸಂಪನ್ಮೂಲಗಳನ್ನು ಯೋಗ್ಯ ರೀತಿಯಲ್ಲಿ ಬಳಸಿಕೊಳ್ಳಲು ಸಹಕಾರಿ ಪದ್ಧತಿಯ ಸಮಾಜ ನಿರ್ಮಾಣ ವ್ಯವಸ್ಥೆಯನ್ನು ಇಂದು ರಾಷ್ಟ್ರದಲ್ಲಿ ಎಲ್ಲೆಲ್ಲೂ ಕೈಗೊಳ್ಳಲಾಗುತ್ತಿದೆ. ಈಗಾಗಲೇ ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಸಹಕಾರ ಸಂಸ್ಥೆಗಳು, ವಿವಿಧೋದ್ದೇಶ ಸೇವಾ ಸಹಕಾರ ಸಂಸ್ಥೆಗಳು, ಸಹಕಾರಿ ಬೇಸಾಯ ಸಂಸ್ಥೆಗಳು, ಸಹಕಾರಿ ಮಾರಾಟ ಸಂಸ್ಥೆಗಳು ಮುಂತಾದ ಹಲವಾರು ಬಗೆಯ ಸಹಕಾರ ಸಂಸ್ಥೆಗಳು ರೂಪುಗೊಂಡು ರೈತರ ಉದ್ಧಾರಕ್ಕಾಗಿ, ಕೃಷಿ ಅಭಿ ವೃದ್ಧಿಗಾಗಿ ಶ್ರಮವನ್ನು ಲೆಕ್ಕಿಸದೆ ಭರದಿಂದ ಕಾರ್ಯಗಳನ್ನು ನಿರ್ವಹಿಸುತ್ತಿವೆ. ಇದು ನಿಜಕ್ಕೂ ಒಂದು ಮಹತ್ವಪೂರ್ಣ ಕ್ರಾಂತಿಯೆಂದೇ ಹೇಳಬೇಕು. ಇಂದಿನ ಬಡತನ, ಉದ್ಯೋಗಾ ಭಾವ, ಬೆಲೆಗಳ ಏರಿಕೆ ಇತ್ಯಾದಿ ಸಮಸ್ಯೆಗಳಿಗೆ ಇರುವ ಅನೇಕ ಪರಿಹಾರಗಳಲ್ಲಿ ಕೃಷಿರಂಗದ ಅಭಿವೃದ್ಧಿಯೂ ಒಂದು. ಇದು ಸಾಧ್ಯವಾಗಬೇಕಾದರೆ ಸಹಕಾರ ಸಂಸ್ಥೆಗಳು ಹೆಚ್ಚಿನ ಪ್ರಮಾಣ ದಲ್ಲಿ ನಿರ್ಮಾಣವಾಗಬೇಕು. ನಮ್ಮ ರಾಷ್ಟ್ರದ ಮುಖ್ಯಗುರಿ ಪ್ರಜಾಸತ್ತಾತ್ಮಕ ಮಾರ್ಗದಲ್ಲಿ ಅರ್ಥಿಕಾಭಿವೃದ್ಧಿ ಮತ್ತು ಸಮಾಜವಾದದ ಸ್ಥಾಪನೆ. ಇದು ಸಾಧಿತವಾಗಬೇಕಾ

ದರೆ ಪಂಚವಾರ್ಷಿಕ ಯೋಜನೆಗಳು ಸಹಕಾರ ಸಂಸ್ಥೆಗಳಿಗೆ ಪ್ರಮುಖ ಸ್ಥಾನ ಕೊಡಬೇಕು. ನಮ್ಮ ರಾಷ್ಟ್ರ ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕಾದರೆ ಕೃಷಿಯ ಉತ್ಪನ್ನ ಅಧಿಕಗೊಳ್ಳ ಬೇಕು. ಅದಕ್ಕೆ ಮೊದಲು ಕೃಷಿಯ ಆಧಾರ ಸ್ತಂಭಗಳಾದ ರೈತರ ಉದ್ಧಾರವಾಗಬೇಕು. ಈ ದೃಷ್ಟಿಯಿಂದ ರೈತರಿಗೆ ಹಣ ಹಾಗೂ ಇತರ ಸೌಲಭ್ಯಗಳನ್ನು ಒದಗಿಸುವ ಮೂಲಕ ಸಹಕಾರ ಸಂಸ್ಥೆಗಳು ಅದ್ಭುತ ಸೇವೆ ಸಲ್ಲಿಸುತ್ತಿವೆ. ಇಂದು ಸಹಕಾರ ಸಂಸ್ಥೆಗಳು ನಾಡಿನ ರೈತರ ಕಲ್ಯಾಣ ಕೇಂದ್ರಗಳಾಗಿವೆ. ರೈತರ ಆರ್ಥಿಕ ಉನ್ನತಿಗೆ ಪ್ರಮುಖ ಸಾಧನಗಳಾಗಿವೆ. ಅಭಿವೃದ್ಧಿ ಹೊಂದುತ್ತಿರುವ ನಮ್ಮ ದೇಶದಲ್ಲಿ ಜನತೆಯ ಆರ್ಥಿಕ ಏಳಿಗೆಗಾಗಿ ಸಹಕಾರ ಸಂಸ್ಥೆಗಳು ವಿವಿಧ ಆರ್ಥಿಕ ಚಟುವಟಿಕೆಗಳನ್ನು ಕೈಗೊಂಡಿದ್ದು, ಈ ಸಂಸ್ಥೆಗಳ ಕಾರ್ಯ ದಿನೇದಿನೇ ವಿಶಾಲ ವಾಗುತ್ತಿದೆ. ಈ ಸಂಸ್ಥೆಗಳಿಂದಾಗಿ ಇಂದು ಜನರು ಸ್ಥಳೀಯ ಅಭಿವೃದ್ಧಿ ಕಾರ್ಯಗಳಲ್ಲಿ ನೇರವಾಗಿ ಭಾಗವಹಿಸಲು ಅನುಕೂಲ ವಾಗಿದೆ. ಅಷ್ಟೊಂದು ವಿಸ್ತಾರವಲ್ಲದ ಮತ್ತು ಜಟಿಲವಲ್ಲದ ರೀತಿಯಲ್ಲಿ ಪ್ರಜಾಪ್ರಭುತ್ವ ಪದ್ಧತಿಯು ಹೇಗೆ ಕಾರ್ಯಗಳನ್ನು ನಿರ್ವಹಿಸುತ್ತದೆ ಎಂಬುದನ್ನು ಹಳ್ಳಿಯ ಜನ ತಿಳಿದುಕೊಳ್ಳು ವಂತಾಗಿದೆ. ಈ ಸಂಸ್ಥೆಗಳು ಇಂದು ಗ್ರಾಮಾಂತರ ಪ್ರದೇಶ ಗಳಲ್ಲಿ ಸಾಲದ ಪೂರೈಕೆ, ಉದ್ಯೋಗಗಳ ಪೂರೈಕೆಯ ಜೊತೆಗೆ ಜನತೆಯ ಜೀವನದಲ್ಲಿ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಾಸುಹೊಕ್ಕಾಗಿ ಬೆಳೆದು ಸಮಾನತೆಯನ್ನು ತರಲು ಪ್ರಯತ್ನಿಸು ತ್ತಿವೆ. ಸಹಕಾರ ಸಂಸ್ಥೆಗಳ ಹಿರಿಮೆಗೆ ಮುಖ್ಯವಾಗಿ ಮೂರು ಕಾರಣಗಳನ್ನು ಕೊಡಬಹುದು.

1. ಸಹಕಾರ ಸಂಸ್ಥೆಗಳಿಂದ ಜನರು ಸ್ವಂತ ಕ್ರಿಯಾ ಶಕ್ತಿ

ಯನ್ನು ಬೆಳೆಸಿಕೊಳ್ಳಬಹುದು. ಅಂದರೆ ಕಾರ್ಯದಲ್ಲಿ ವ್ಯವಸ್ಥಿತ ಕ್ರಮ, ನಿಯಮಬದ್ಧ ಕೆಲಸ ಇವುಗಳನ್ನು ಕಲಿಯಲು ಸಹಕಾರ ಸಂಸ್ಥೆಗಳು ಅವಕಾಶ ಕಲ್ಪಿಸುತ್ತವೆ.

2. ಈ ಸಂಸ್ಥೆಗಳ ಲಾಭ ಒಬ್ಬ ವ್ಯಕ್ತಿಗೆ ಸೇರದೆ ಹತ್ತು ಜನರಿಗೆ ಲಭ್ಯವಾಗುವಂತಿರುತ್ತದೆ.

3. ರೈತರು ದಿನನಿತ್ಯ ಸಾಮಾನುಗಳ ಬಳಕೆದಾರರು ಯಾರೇ ಆಗಿರಲಿ ಸಹಕಾರಿ ಸಂಸ್ಥೆಗಳ ಮೂಲಕ ವ್ಯವಸ್ಥಿತ ರೀತಿಯಲ್ಲಿ ಕೆಲಸ ಮಾಡಬಹುದು. ಇದರಿಂದ ಸಹಕಾರ ಸಂಸ್ಥೆಗೆ ಸದಸ್ಯರೆಲ್ಲರ ಬುದ್ಧಿಶಕ್ತಿ, ಅನುಭವ, ಶ್ರಮ ಲಭ್ಯವಾಗುತ್ತದೆ.

ಇಂದು ಸಹಕಾರ ಚಳುವಳಿಯ ಸ್ವರೂಪವೇ ಬದಲಾಗಿದೆ. ಮೊದಲಿಗೆ ಸಾಲಕೊಡುವುದು ಮಾತ್ರ ಸಹಕಾರಿ ಸಂಸ್ಥೆಗಳ ಮುಖ್ಯ ಕೆಲಸವಾಗಿತ್ತು. ಇತರ ಕ್ಷೇತ್ರಗಳಲ್ಲಿ ಸಹಕಾರಕ್ಕೆ ಹೆಚ್ಚು ಅವಕಾಶವಿರಲಿಲ್ಲ. ಆದರೆ ಭಾರತದಲ್ಲಿ ಇಂದು ಇತರ ಆರ್ಥಿಕ ಚಟುವಟಿಕೆಗಳು ಬೆಳೆದಂತೆ ಸಹಕಾರಿ ಕ್ಷೇತ್ರವೂ ಹೆಚ್ಚಾಗಿ ವಿಸ್ತಾರಗೊಳ್ಳುತ್ತಿದೆ. ಅಂದು ಸಾಲ ಪೂರೈಕೆಗಾಗಿ ಜನ್ಮತಾಳಿದ ಸಹಕಾರಿ ಚಳುವಳಿ ಇಂದು ವಿವಿಧ ಮುಖಗಳಲ್ಲಿ ಬೆಳೆದು ರೈತರ ಸರ್ವತೋಮುಖವಾದ ಚಟುವಟಿಕೆಗಳಲ್ಲಿ ಪಾಲುಗೊಳ್ಳುತ್ತಿದೆ. ಮಾನುಗಾರಿಕೆ, ಡೈರಿಫಾರ್ಮಿಂಗ್, ಸಕ್ಕರೆ ತಯಾರುಮಾಡುವ ಉದ್ದಿಮೆಗಳು, ಗೃಹನಿರ್ಮಾಣ, ದಿನ ಬಳಕೆಯ ವಸ್ತುಗಳ ಶೇಖರಣೆ, ಮಾರಾಟ, ಸಹಕಾರಿ ಬೇಸಾಯ, ವೈದ್ಯಕೀಯ ರಕ್ಷಣೆ ಮುಂತಾದ ನಾನಾ ಬಗೆಯ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಸಹಕಾರ ಪ್ರಮುಖ ಪಾತ್ರವಹಿಸುತ್ತಿದೆ. ಇಂದು ಸಹಕಾರ ಚಳುವಳಿಯ ಕಾರ್ಯ ವ್ಯಾಪ್ತಿ ಮೊದಲಿಗಿಂತಲೂ ಹೆಚ್ಚಿದೆ. ವಸ್ತ್ರ, ಒಡವೆಗಳು, ಸಾಧನಸಾಮಗ್ರಿಗಳು, ಆಹಾರಧಾನ್ಯಗಳ ಉತ್ಪಾದನೆ,

ಸಂಗ್ರಹಣೆ ಹಾಗೂ ವಿತರಣೆ ಹೀಗೆ ಪ್ರತಿಯೊಂದು ಹಂತದಲ್ಲೂ ಸಹಕಾರಿ ಚಳುವಳಿ ತನ್ನ ಕೈಚಾಚಿದೆ. ಸಹಕಾರಿ ಚಳುವಳಿ ನಮ್ಮ ದೇಶದ ನೂರಕ್ಕೆ 90ರಷ್ಟು ಹಳ್ಳಿಗಳಿಗೆ, ನೂರಕ್ಕೆ 43ರಷ್ಟು ರೈತ ಕುಟುಂಬಗಳಿಗೆ ಸೇವೆ ಸಲ್ಲಿಸುತ್ತಿದೆ. ಅದು ನಮ್ಮ ದೇಶದ ರೈತರಿಗೆ 515 ಕೋಟಿ ರೂ.ಗಳ ಅಲ್ಪಾವಧಿ, ಮಧ್ಯಮಾವಧಿ ಸಾಲವನ್ನೂ, 110 ಕೋಟಿ ರೂ.ಗಳ ದೀರ್ಘಾವಧಿ ಸಾಲವನ್ನೂ ಹಂಚುವ ಸಾಮರ್ಥ್ಯಪಡೆದಿದೆ. ನಮ್ಮ ದೇಶದಲ್ಲಿ ಕೆಲವು ತತ್ವಗಳ ಮೂಲಕ ಪ್ರಾರಂಭವಾದ ಚಳುವಳಿಯು ಇಂದು ದೊಡ್ಡ ಸಂಸ್ಥೆಯಾಗಿ ಬೆಳೆದಿದೆ. ನಮ್ಮ ದೇಶದಲ್ಲಿ ಮುಖ್ಯವಾಗಿ ಸಣ್ಣ ಪ್ರಮಾಣದ ಕೈಗಾರಿಕೋದ್ಯಮಗಳ ಬೆಳವಣಿಗೆಯನ್ನು ಸಹಕಾರದ ವ್ಯವಸ್ಥೆಯ ಹಾದಿಯಲ್ಲೇ ಅಭಿವೃದ್ಧಿಪಡಿಸಲಾಗುತ್ತಿದೆ. ಸಹಕಾರ ಸಂಘ ಸಂಸ್ಥೆಗಳ ಸ್ಥಾಪನೆಗೆ ಹೆಚ್ಚಿನ ಪ್ರೋತ್ಸಾಹ ಕೊಡಲಾಗುತ್ತಿದೆ. ಇತ್ತೀಚೆಗೆ ಸಹಕಾರಿ ಸಂಸ್ಥೆಗಳ ಹೊಸ ಕಾನೂನುಗಳನ್ನು ಜಾರಿಗೆ ತಂದಿರುವುದರಿಂದ ನಿಯಮಗಳು ಸಡಿಲಗೊಂಡು ವಿಶಾಲ ತಳಹದಿಯ ಮೇಲೆ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಲು ಉತ್ತೇಜನ ನೀಡಿದಂತಾಗಿದೆ. ಭಾರತದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಹಕಾರಿ ಚಳುವಳಿಯ ಬೆಳವಣಿಗೆಗೆ ವಿಶೇಷ ನೆರವು ನೀಡುತ್ತಿವೆ. ಇದರ ಫಲವಾಗಿ ಇಂದು ಸಹಕಾರ ಚಳುವಳಿ ಸಂಖ್ಯಾ ಹಾಗೂ ವ್ಯವಹಾರದ ದೃಷ್ಟಿಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದೆ.

ಆದಾಗ್ಯೂ ಸಧ್ಯದ ಪರಿಸ್ಥಿತಿಯಲ್ಲಿ ಸಹಕಾರದ ಬೆಳವಣಿಗೆ ಅಷ್ಟೊಂದು ಆಶಾದಾಯಕವಾಗಿ ತೋರುತ್ತಿಲ್ಲ. ಸಹಕಾರ ಪದ್ಧತಿಯನ್ನು ಆಚರಣೆಗೆ ತರುವಲ್ಲಿ ಇರುವ ವ್ಯಾವಹಾರಿಕ ಕಷ್ಟಗಳು ಸಹಕಾರಿ ಬೇಸಾಯ, ಸಾಲ, ಮಾರಾಟ ಮತ್ತು ಸೇವಾ

ಸಹಕಾರ ಸಂಸ್ಥೆಗಳು ತಮ್ಮ ಪ್ರಯತ್ನಗಳಲ್ಲಿ ಸಾಫಲ್ಯಗಳಿಸಲು ಅತಿದೊಡ್ಡ ತೊಡಕಾಗಿ ಪರಿಣಮಿಸಿವೆ ಎನ್ನಬಹುದು. ಆದ್ದರಿಂದಲೇ ಸಹಕಾರ ಚಳುವಳಿ ಬೃಹದಾಕಾರವಾಗಿ ಬೆಳೆದಿದ್ದರೂ, ಚಳುವಳಿಯು ಬೆಳವಣಿಗೆ ಹೆಚ್ಚಾಗಿ ಗಾತ್ರದಲ್ಲಿ, ಗುಣದಲ್ಲಲ್ಲ ಎಂದು ಅಲ್ಲಲ್ಲಿ ಟೀಕೆ–ಟಿಪ್ಪಣಿಗಳು, ಅಪಸ್ವರಗಳು ಕೇಳಿ ಬರುತ್ತಿವೆ. ಆದರೆ ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಮಹತ್ತರ ಸ್ಥಾನ ಪಡೆದಿರುವ ಸಹಕಾರ ತ್ವರಿತ ಪ್ರಗತಿ ಹೊಂದುವಲ್ಲಿ ಸುಗಮವಾಗಿ ಸಾಗಲು ಅಡ್ಡಿಗಳನ್ನೂ, ಲೋಪದೋಷಗಳನ್ನೂ ಎದುರಿಸಬೇಕಾಗುವುದು ಸಹಜ. ಇದಕ್ಕೆ ಮುಖ್ಯ ಕಾರಣ ಆಡಳಿತದಲ್ಲಿ ದಕ್ಷತೆಯ ಕೊರತೆ, ಕೆಲವು ಸದಸ್ಯರಲ್ಲಿ ಸಹಕಾರ ನಿಷ್ಠೆಯ ಅಭಾವ, ನುರಿತ ಸಿಬ್ಬಂದಿ ವರ್ಗ ಇಲ್ಲದಿರುವುದು ಇತ್ಯಾದಿ. ಆದರೆ ಸಹಕಾರ ಚಳುವಳಿ ವಿಫಲವಾದರೆ ಅದನ್ನು ತುಂಬಲು ಬೇರೆ ಮಾರ್ಗವಿಲ್ಲ. ಆದ್ದರಿಂದ ಸಹಕಾರಿ ಚಳುವಳಿ ಸಫಲತೆಯನ್ನು ಸಾಧಿಸಲೇ ಬೇಕಾಗಿದೆ. ಚಳುವಳಿ ಸಹಕಾರ ವಿಫಲಗೊಂಡರೆ ಇಡೀ ಭಾರತದ ಭವಿಷ್ಯತ್ತಿನ ಆಶೆಯೇ ಸಂದಿದಂತೆ. ಸಹಕಾರ ಎಂದರೆ ಸಂಘಟಿತ ವ್ಯವಸ್ಥೆಯ ಮೂಲಕ ಸ್ವಾವಲಂಬನೆಯ ಸಾಧನೆ. ಕಲ್ಯಾಣ ರಾಜ್ಯ ಸ್ಥಾಪನೆಯ ಗುರಿ ಮುಟ್ಟುವಿಕೆಗೆ ಅದು ಭದ್ರವಾದ ಏಣಿ, ಸಹಕಾರ, ಪ್ರಜಾಸತ್ತೆ ಮತ್ತು ಸ್ವಾತಂತ್ರ್ಯ ಮೂರೂ ಒಂದೇ. ಸಹಕಾರದ ಮೂಲಕ ಸಾಮಾನ್ಯ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ಭದ್ರವಾಗಿ ಇರಿಸಿಕೊಂಡು ದೊಡ್ಡ ಪ್ರಮಾಣದಲ್ಲಿ ದುಡಿದು ವಿಜ್ಞಾನ ಮತ್ತು ತಾಂತ್ರಿಕ ಸೌಲಭ್ಯಗಳಿಸಲು ಸಾಧ್ಯ. ಪ್ರಜಾಪ್ರಭುತ್ವದ ಯೋಜಿತ ಆರ್ಥಿಕ ಕಾರ್ಯ ನಿರ್ವಹಣೆಯಲ್ಲಿ ಸಹಕಾರ ಅನಿವಾರ್ಯ ಸಾಧನವಾಗಿದೆ. ಕೃಷಿಕ್ಷೇತ್ರದಲ್ಲಿ ಆರೋಗ್ಯಕರ

ಮತ್ತು ಕಟ್ಟುನಿಟ್ಟಾದ ಸಹಕಾರಿ ವ್ಯವಸ್ಥೆಯಿದ್ದರೆ ಪ್ರಜಾ ಪ್ರಭುತ್ವ ಸಮಾಜವಾದದ ಪ್ರಯೋಗ ನಡೆಸಲು ಸಾಧ್ಯವಾಗುತ್ತದೆ. ಸಹಕಾರ ಕೇವಲ ಒಂದು ಆರ್ಥಿಕ ವ್ಯವಸ್ಥೆಯಲ್ಲ. ಅದು ಐಕ್ಯತೆ, ಶಾಂತಿ, ದಯೆ ಮುಂತಾದ ಸದ್ಗುಣಗಳಿಗೆ ಚೇತೋಹಾರಿಯಾಗಿದೆ. ಯಾವುದೇ ಅಭಿವೃದ್ಧಿಯ ಯೋಜನೆಯ ಯಶಸ್ಸಿಗೆ ಸಹಕಾರ ಅವಶ್ಯವಾಗಿ ಬೇಕು. ಆದ್ದರಿಂದಲೇ ಇಂದು ಭಾರತೀಯ ಅಭಿವೃದ್ಧಿಯೋಜನೆಗಳಲ್ಲಿ ಸಹಕಾರಿ ಅಭಿವೃದ್ಧಿ ಒಂದು ಮುಖ್ಯ ಅಂಗವಾಗಿದೆ. ಆದರೆ ಕೃಷಿಕ್ಷೇತ್ರದಲ್ಲಿ ಸಹಕಾರಿ ಪದ್ಧತಿಯು ಪೂರ್ಣಫಲ ನೀಡಬೇಕಾದರೆ ದೀರ್ಘಕಾಲಾವಧಿ ಬೇಕಾಗುತ್ತದೆ. ಆದಾಗ್ಯೂ ಅದು ಯಶಸ್ವಿಯಾಗುವಂತೆ ಪ್ರಯತ್ನಿಸುವುದು ಅಗತ್ಯ. ಈ ದೃಷ್ಟಿಯಿಂದ ಯೋಜಿತ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರ ಜನಜೀವನದ ನಾನಾ ರಂಗಗಳಲ್ಲಿ ಸಂಘಟನೆಯ ಪ್ರಮುಖ ಆಧಾರವಾಗಬೇಕು. ಗಾಂಧೀಜಿಯವರ ನುಡಿಯಂತೆ ಹಳ್ಳಿಗಳಲ್ಲಿನ ಕಾರ್ಯ ಚಟುವಟಿಕೆಗಳೆಲ್ಲವೂ ಸಹಕಾರಿ ತಳಹದಿಯ ಮೇಲೆ ನಡೆಯಬೇಕು. 'ಸಹಕಾರ ಬಲಂ ಬಲಂ' ಎಂಬುದು ಇಂದಿನ ಪ್ರತಿಯೊಬ್ಬರ ಬದುಕಿನಮಂತ್ರವಾಗಬೇಕು. 'ಆತ್ಮವತ್ ಸರ್ವ ಭೂತಾಣಿ' ಎಂಬುವರಿಗೆ ಸಹಕಾರವೇ ತಾರಕನಾಮ. 'ಉದ್ಧರೇತ್ ಆತ್ಮನಾತ್ಮಾನಾಂ' ಎಂಬುವರಿಗೆ ಸಹಕಾರವೇ ಸೇವಾಕ್ಷೇತ್ರ. ಆದ್ದರಿಂದ 'ಸಹಕಾರೋ ಮಮದೇವತಾ' ಎಂದು ಇಂದಿನ ಮಾನವ, ಸಹಕಾರವನ್ನು ನಂಬಿ ನೆಚ್ಚಿ ಬಾಳುವುದು ನೆಮ್ಮದಿಗೆ ನಾಂದಿ. 'ಬಾಳಿನಲಿರುವ ಅನ್ಯಾಯ, ಅಕ್ರಮಗಳನಳಿಸಲು ಸಹಕಾರವೊಂದೇ ನಮಗಮೃತಧಾರೆ.''

ಆಧಾರ ಗ್ರಂಥಗಳು

1. Co-operation at home and abroad.

Fay. C.R..

2. Co-operative movement in India.

C. M. Hough.

3. Indian Economy.

K. P. M. Sundaram & Rudradatt.

4. India 1977 & 78.

Ministry of Information, New Delhi.

5. Agricultural problems of India.

C. B. Memoria.

WO 22576—MUPM—5000 copies—29-10-81

ಕೆಲವು ಸಾಹಿತ್ಯ ಕೃತಿಗಳು

ಬೆಲೆ: ೨೫ ಪೈಸೆಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ಟಿ. ಎನ್. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ॥ ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ಟಿ. ಎಸ್. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣ
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ॥ ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣ
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ॥ ಹಿರಣ್ಮಯ

೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ॥ ಎಚ್. ತಿಪ್ಪೇರುದ್ರಸ್ವಾಮಿ
೨೯. ಅಲ್ಲಮಪ್ರಭು ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ॥ ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—ದೇವಂಗಿ ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಕೃಷ್ಣಮೂರ್ತಿ
೩೪. ಜನ್ನ—ಡಾ॥ ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ॥ ಎನ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ॥ ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ಎಂ. ಜಿ. ನಂಜುಂಡಾರಾಧ್ಯ
೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀ ಹರ್ಷ—ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ॥ ಹಿರಣ್ಮಯಿ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ॥ ಆರ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಉ. ಕಾ. ಸುಬ್ಬರಾಯಾಚಾರ್
೫೬. ಶ್ರೀ ಸಮರ್ಥರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ